೧೯೨೮ರ ಸುಲ್ತಾನ್‌ಪೇಟೆಯ ಕೋಮುಗಲಭೆ

ಚಾರಿತ್ರಿಕ ಪರಿಶೀಲನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಅಂಶಿಕ ಪದವಿಗಾಗಿ
ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿರುವ ನಿಬಂಧ)

ಅಭ್ಯರ್ಥಿ
ಶಿವಕುಮಾರಿ ಎಂ.ಎಸ್.

ಮಾರ್ಗದರ್ಶಕರು
ಡಾ.ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

೧೯೨೮ರ ಸುಲ್ತಾನ್‌ಪೇಟೆಯ ಕೋಮುಗಲಭೆ

ಚಾರಿತ್ರಿಕ ಪರಿಶೀಲನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಅಂಶಿಕ ಪದವಿಗಾಗಿ
ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿರುವ ನಿಬಂಧ)

ಅಭ್ಯರ್ಥಿ
ಶಿವಕುಮಾರಿ ಎಂ.ಎಸ್.

ಮಾರ್ಗದರ್ಶಕರು
ಡಾ.ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಮಾರ್ಗದರ್ಶಕರ ಪ್ರಮಾಣ ಪತ್ರ

೧೯೨೮ರ ಸುಲ್ತಾನ್ ಪೇಟೆಯ ಕೋಮುಗಲಭೆ: ಚಾರಿತ್ರಿಕ ಪರಿಶೀಲನೆ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶಿವಕುಮಾರಿ ಎಂ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೪.೧೦.೦೮

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

೧೯೨೮ರ ಸುಲ್ತಾನ್ ಪೇಟೆಯ ಕೋಮುಗಲಭೆ: ಚಾರಿತ್ರಿಕ ಪರಿಶೀಲನೆ ಎಂಬ ಸಂಪ್ರಬಂಧವನ್ನು ಡಾ.ಸಿ.ಆರ್.ಗೋವಿಂದರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿ.ಲ್.ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Shivakumari. M.S.

ಶಿವಕುಮಾರಿ ಎಂ.ಎಸ್.
ಸಂಶೋಧಕಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೪-೧೦-೦೮

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಹಿನ್ನೆಲೆ-ಪ್ರವೇಶ-ಮಹತ್ತ್ವ, ವ್ಯಾಪ್ತಿ ಹಾಗೂ ಮಿತಿಗಳು, ವಿಧಿ-ವಿಧಾನಗಳು ಹಾಗೂ ಅಧ್ಯಯನದ ಸ್ವರೂಪ

೧

ಅಧ್ಯಯನದ ಹಿನ್ನೆಲೆ-ಪ್ರವೇಶ-ಮಹತ್ತ್ವ, ವ್ಯಾಪ್ತಿ ಹಾಗೂ ಮಿತಿಗಳು, ವಿಧಿ-ವಿಧಾನಗಳು ಹಾಗೂ ಅಧ್ಯಯನದ ಸ್ವರೂಪ

ಆಧುನಿಕತೆಯ ಕೊಡುಗೆಗಳಾದ ಕೋಮುವಾದ ಹಾಗೂ ಭಯೋತ್ಪಾದನೆಗಳ ಸಮಕಾಲೀನ ಜಗತ್ತಿನಲ್ಲಿ ಮಾನವನ ಶಾಂತಿ, ಸಹನೆ, ಸೌಹಾರ್ದತೆಯ ಬದುಕನ್ನೇ ಕದಡಿವೆ. ಈ ಮಾತು ಭಾರತ ಹಾಗೂ ಕರ್ನಾಟಕದ ಸಂದರ್ಭಕ್ಕೂ ಅನ್ವಯ ಆಗುವಂಥದ್ದು. ಇಂಡಿಯಾವು ವಸಾಹತುಶಾಹಿಯ ಮೂಸೆಗೆ ಒಳಪಟ್ಟ ಬೆನ್ನಲ್ಲೇ ಇಂತಹ 'ಒಡೆದು ಆಳುವ ನೀತಿ'ಯ ತಾರತಮ್ಯಗಳು ಬಲವಾಗಿ ನಮ್ಮಲ್ಲಿ ನೆಲೆಯೂರಿದವು. ಪಶ್ಚಿಮದಿಂದ ಬಂದಂಥ ಅನೇಕ ಹೊಸ ವಿಚಾರಗಳ ಜೊತೆಗೆ 'ಕೋಮುವಾದ'ವೂ ಸಹ ನಮ್ಮ ಮನೋಚಿಂತನೆಗಳಲ್ಲಿ ಒಡಮೂಡಿತು. ಭಾರತೀಯರಿಗೆ ಚರಿತ್ರೆಯನ್ನು ಬೋಧಿಸುವ ಹೊಣೆಯನ್ನು ಹೊತ್ತ ಬ್ರಿಟಿಷರು ತಮ್ಮದೇ ಆದ ತಿರುಚಿದ 'ವಿಕೃತ ಚರಿತ್ರೆ'ಯ ಹರಿಕಾರರೂ ಆದರು. ನಮ್ಮಲ್ಲಿದ್ದ ಜಾತಿ, ಧರ್ಮ, ಭಾಷೆ ಮೊದಲಾದ ಬಹುಮುಖಿ ಪರಿಕರಗಳು ಅವರಿಗೆ ಮುಖ್ಯ ಬಂಡವಾಳವಾಗಿ ಪರಿಣಮಿಸಿದವು. ವಸಾಹತುಶಾಹಿಗೆ ವಿರುದ್ಧವಾಗಿ ಧ್ವನಿ ಎತ್ತದ ರೀತಿಯಲ್ಲಿ ಭಾರತೀಯರ ನಡುವೆಯೇ ಒಡಕುಂಟು ಮಾಡುವ ಹುನ್ನಾರವನ್ನು ಸೃಷ್ಟಿಸುವುದು ಅವರ ಪ್ರಧಾನ ಆಶಯವಾಗಿತ್ತು. ಈ ದಿಸೆಯಲ್ಲಿ ಅವರು ಭಾರತೀಯ ಹಿಂದೂ-ಮುಸ್ಲಿಮರ ನಡುವೆ ಕೋಮುವಾದಿ ನೆಲೆಯ ವಿಷಬೀಜಗಳನ್ನು ಬಿತ್ತುವಲ್ಲಿಯೂ ಯಶಸ್ವಿಯಾದರು. ಇದಕ್ಕೆ ಒಳ್ಳೆಯ ಉದಾಹರಣೆ ಎಂದರೆ ೧೯೦೫ರ ಬಂಗಾಳದ ವಿಭಜನೆ. ರಾಷ್ಟ್ರೀಯ ಹೋರಾಟದ ಸನ್ನಿವೇಶದ ಈ ಉದಾಹರಣೆ ಭಾರತೀಯರ ಮನೋಚಿಂತನೆಗಳಲ್ಲಿ ಬಿತ್ತಿದ ತಾರತಮ್ಯದ ಚರಿತ್ರೆಯ ಕೊಡುಗೆಯೇ ಸರಿ. ಅಂತೆಯೇ ನಾಡಿನ ಚರಿತ್ರೆಯಲ್ಲಿ ೧೯೨೮ರ ಸುಲ್ತಾನ್ ಪೇಟೆಯ ಕೋಮುಗಲಭೆಯೂ ಒಂದು. ಈ ಘಟನೆ ಹಳೆಯ ಮೈಸೂರಿನಲ್ಲಿ ಸಂಭವಿಸಿತಾದರೂ ಕನ್ನಡಿಗರ ಶಾಂತ ಚಿತ್ತತೆಯ ಪ್ರಭಾವಳಿಗೆ ಧಕ್ಕೆ ಒದಗಿದ ದೊಡ್ಡ ಪೆಟ್ಟು. ಇಂಥ ಒಂದು ಕೋಮುವಾದಿ ನೆಲೆಯ ಆರಂಭದ ಘಟನೆಯೊಂದರ ಚಾರಿತ್ರಿಕ ವಿಶ್ಲೇಷಣೆಯೇ ಪ್ರಸ್ತುತ ಅಧ್ಯಯನದ ತಿರುಳು.

ಬೆಂಗಳೂರಿನ ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿಯ ಸುಲ್ತಾನ್ ಪೇಟೆಯಲ್ಲಿ ಗಣಪತಿ ವಿಗ್ರಹವೊಂದರ ಹಿನ್ನೆಲೆಯಲ್ಲಿ ನಡೆದ ಕೋಮುವಾದಿ ನೆಲೆಯ ಘಟನೆಯ ಸುತ್ತಲೂ ನಡೆದ ಹುನ್ನಾರಗಳನ್ನು ಕುರಿತು ಪರಿಶೀಲಿಸುವ ಆಶಯವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ. ೧೯೨೮ರ ಜೂನ್, ಜುಲೈನಲ್ಲಿ ನಡೆದ ಈ ಘಟನೆ ವಾಸ್ತವದಲ್ಲಿ ಸರಳವಾದರೂ ನಾಡಿನ ಚರಿತ್ರೆಯಲ್ಲಿ ದಾಖಲಾರ್ಹವಾದದು. ಅಂತೆಯೇ ಚರ್ಚೆಗೆ ಎಡೆಮಾಡಿಕೊಟ್ಟಂಥದ್ದು. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್ ಅವರನ್ನು ಗುದ್ದುಗೆಯಿಂದ ಇಳಿಸುವ ಹುನ್ನಾರವೂ ಈ ಘಟನೆಯ ಹಿಂದೆ ಇದೆ ಎನ್ನಲಾಗಿದೆ. ಇದಕ್ಕೆ ಅಂದಿನ ಹಿಂದೂ ಮೇಲ್ವರ್ಗದ ಅತೃಪ್ತ ಮನಸ್ಸುಗಳು, ಮುಸ್ಲಿಂ ದಿವಾನರೊಬ್ಬರನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ ಇದ್ದದೂ ಸಹ ಕಾರಣ ಎಂಬ ಗುಮಾನಿ. ಇದಕ್ಕೆ ಅಂದಿನ ಕೆಲವು ಪತ್ರಿಕೆಗಳ ವರ್ಣರಂಜಿತ, ಉದ್ರೇಕಕಾರಿ, ಪ್ರಚೋದನೆಯ ಹಿಂದೂ-ಮುಸ್ಲಿಂ ತಾರತಮ್ಯದ ಬರಹಗಳು ಕಾರಣವಾಗಿದ್ದವು. ಅವುಗಳಲ್ಲಿ ವೀರಕೇಸರಿ, ಚಿತ್ರಗುಪ್ತ, ನವಜೀವನ, ಮೈಸೂರ್ ಸ್ಟಾರ್, ಮೈಸೂರ್ ಮೇಲ್, ಒಕ್ಕಲಿಗರ ಪತ್ರಿಕೆ, ಪ್ರಜಾಮಿತ್ರ, ನವಜೀವನ, ಇಂಡಿಯನ್ ಡೇಲಿ ಮೇಲ್ ಪ್ರಮುಖವಾದವು. ಅಂತೆಯೇ ಅತೃಪ್ತ ಮನಸ್ಸುಗಳನ್ನು ಹೊಂದಿದವರ ಪೈಕಿ ಸಂಪಿಗೆ ವೆಂಕಟಪತಯ್ಯ, ವೀರಕೇಸರಿ ಸೀತಾರಾಮಶಾಸ್ತ್ರಿ, ಪಾವಡಿ ಸುಬ್ಬರಾಮ ಶೆಟ್ಟಿ, ಎಂ.ಪಿ. ಸೋಮಶೇಖರ ರಾವ್, ನಿಟ್ಟೂರು ಶ್ರೀನಿವಾಸರಾವ್, ತಿರುಮಲೆ ತಾತಾಚಾರ್ಯ ಶರ್ಮ ಮೊದಲಾದವರು ಪ್ರಮುಖ ಪಾತ್ರಧಾರಿಗಳು ಎನ್ನಲಾಗಿದೆ.

ಈ ಘಟನೆಯ ಹಿಂದೆ ಹಳೆಯ ಮೈಸೂರಿನ ರಾಜಕಾರಣದ ಬ್ರಾಹ್ಮಣ-ಬ್ರಾಹ್ಮಣೇತರ ಚಳವಳಿಯ ಆಲೋಚನೆಗಳೂ ಸಹ ಕೆಲಸ ಮಾಡಿರಬಹುದು ಎಂಬ ಅನಿಸಿಕೆಯೂ ಇದೆ. ಈ ದಿಸೆಯಲ್ಲಿ ಘಟನೆಯ ಹಿನ್ನೆಲೆ, ಹುಟ್ಟು, ಸ್ವರೂಪ, ಹುನ್ನಾರಗಳು ಅಂತಿಮ ಪರಿಣಾಮ ದಲ್ಲಿ ಹೇಗೆ ಹಿಂದೂ-ಮುಸ್ಲಿಂ ಕೋಮುವಾದಿ ತಾರತಮ್ಯಗಳನ್ನು ನಾಡಿನಲ್ಲಿ ಹುಟ್ಟು ಹಾಕಿದವು ಎಂಬುದನ್ನು ಪರಿಶೀಲಿಸಬೇಕಾದ ಜರೂರು ಇದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಅಂದಿನ ಸರ್ಕಾರ ಏಕವ್ಯಕ್ತಿ ಅಧ್ಯಕ್ಷತೆಯ, ಆರು ಜನ ಸದಸ್ಯರನ್ನು ಒಳಗೊಂಡ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯ ಅಧ್ಯಕ್ಷರಾಗಿದ್ದವರು ಮಾಜಿ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರು ಅಂದಿನ ಈ ಘಟನೆಯ ಸತ್ಯಾಸತ್ಯತೆಗಳನ್ನು ಅರಿತು ವರದಿಮಾಡಲು ಎಂ. ವಿಶ್ವೇಶ್ವರಯ್ಯನವರು ಸುಮಾರು ಎರಡು ತಿಂಗಳ ಕಾಲ ಸಾಕ್ಷಿ-ಪುರಾವೆಗಳೊಂದಿಗೆ ಹೆಣಗಾಡಬೇಕಾಯಿತು. ತಮ್ಮ ಅಂತಿಮ ವರದಿಯಲ್ಲಿ ಅವರು ಈ ಘಟನೆಯ ಹಿನ್ನಲೆಯಲ್ಲಿ ನಡೆದ ಎಲ್ಲ ಬಗೆಯ ಹುನ್ನಾರಗಳನ್ನು ತೆರೆದಿಟ್ಟರು. ಈ ವರದಿಯನ್ನು ಒಳಗೊಂಡಂತೆ ಸುಲ್ತಾನ್ ಪೇಟೆಯ ಗಣಪತಿ ಕೋಮುಗಲಭೆಯನ್ನು ಕುರಿತು

ಅನೇಕ ಟೀಕೆಗಳು, ವಿಮರ್ಶೆಗಳು ಆಗಿ ಹೋಗಿವೆ. ಆದರೂ ಒಂದು ನಿಖರವಾದ ಸಂಶೋಧನೆ ಅಥವಾ ಅಧ್ಯಯನ ಇಲ್ಲ ಎನ್ನುವಷ್ಟರ ಮಟ್ಟಿಗೆ ಕೊರತೆಗಳು ಎದ್ದುಕಾಣುತ್ತಿವೆ. ಕೆಲವು ಬಿಡಿ ಲೇಖನಗಳು ಹಾಗೂ ಕೃತಿಗಳಲ್ಲಿ ಉಲ್ಲೇಖಗಳು ಹಾದು ಹೋಗಿವೆಯಾದರೂ ಅವುಗಳಲ್ಲಿ ಒಂದು ಸಮಗ್ರವಾದ ನೋಟ ಕಾಣಸಿಗುತ್ತಿಲ್ಲ. ಇಂಥ ಕೊರತೆಯನ್ನು ನೀಗುವ ಆಶಯವೇ ಪ್ರಸ್ತುತ ಅಧ್ಯಯನದ್ದಾಗಿರುತ್ತದೆ.

ಅಧ್ಯಯನದ ವ್ಯಾಪ್ತಿ ಹಾಗೂ ಮಿತಿಗಳು

ನಾಡಿನ ಚರಿತ್ರೆಯಲ್ಲಿ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ನಡೆದ ಸುಲ್ತಾನ್ ಪೇಟೆಯ ಈ ಕೋಮುವಾದಿ ಘಟನೆ ಕನ್ನಡಿಗರ ಆತ್ಮ ವಿಮರ್ಶೆಗೆ ಸವಾಲಿನದೂ ಹೌದು. ಇತ್ತೀಚಿನ ಕೆಲವು ಕೋಮು ದಳ್ಳುರಿಯ ಘಟನೆಗಳು ನಮ್ಮನ್ನು ನಾವು ಪ್ರಶ್ನೆ ಮಾಡಿಕೊಳ್ಳುವಂತಿವೆ. ಈ ದಿಸೆಯಲ್ಲಿ ಚರಿತ್ರೆ ಹಾಗೂ ಸಮಕಾಲೀನ ಸಂದರ್ಭದ ನಡುವಿನ ಕೋಮುವಾದಿ ನೆಲೆಯ ಅವಸ್ಥಾಂತರಗಳನ್ನು ಗ್ರಹಿಸುವ ವ್ಯಾಪ್ತಿಯ ಅಧ್ಯಯನವಾಗಿಯೂ ಪ್ರಸ್ತುತ ಆಲೋಚನೆಗಳು ಅನುಸಂಧಾನಗೊಳ್ಳಲಿವೆ. ಈ ಘಟನೆಯೊಂದಿಗೆ ಬೆಸೆದುಕೊಂಡಿರುವ ಅಂದಿನ ಮೈಸೂರು ಮಹಾರಾಜರ ಹಾಗೂ ದಿವಾನರ ಆಡಳಿತದ ರಾಜಕಾರಣ, ಸಮಾಜ ಹಾಗೂ ಸಂಸ್ಕೃತಿಗಳ ನಡುವಿನ ತಾಕಲಾಟ ಅತೃಪ್ತ ಮನಸ್ಸು ಹಾಗೂ ಪತ್ರಿಕೆಗಳ ಹುನ್ನಾರ ಮೊದಲಾದವುಗಳನ್ನು ಪ್ರಸ್ತುತ ಅಧ್ಯಯನದ ಉಲ್ಲೇಖಗಳನ್ನಾಗಿ ಗುರುತಿಸಿಕೊಳ್ಳಲಾಗುವುದು. ಹಿಂದೂ ಮತ್ತು ಮುಸ್ಲಿಮರ ನಡುವೆ ವಿಷಬೀಜಗಳನ್ನು ಬಿತ್ತಲು ಹವಣಿಸಿದ ಸುಲ್ತಾನ್ ಪೇಟೆಯ ಘಟನೆ ಹಾಗೂ ಪರಿಶೀಲನೆಗೆ ನೇಮಕವಾದ ಸಮಿತಿಯ ವರದಿಗಳು ತನ್ನದೇ ಆದ ಮಿತಿಗಳಿಗೆ ಒಳಪಟ್ಟಿವೆ. ಏಕೆಂದರೆ ಮಾನವ ಹಾಗೂ ಅವನ ಮನೋ ಚಿಂತನೆಯಲ್ಲಿ ಅತೃಪ್ತಿಯು ಇಲ್ಲಿ ಪ್ರಧಾನ ಭಿತ್ತಿಯಾಗಿದೆ. ಅಂತೆಯೇ ಈ ಬಗೆಯ ಮನೋಚಿಂತನೆಗಳಿಗೆ ಪ್ರೇರಣೆಯಾದ ಹಿಂದಿನ ವಸಾಹತುಶಾಹಿ ಧೋರಣೆ, ಕುಟಿಲೋಪಾಯಗಳು, ಒಡೆದು-ಆಳುವ ಧೋರಣೆಗಳು, ಓರಿಯಂಟಲಿಸ್ಟರ ವಿಕೃತ ಚರಿತ್ರೆಯ ಫಲಿತಗಳಾಗಿ ಅಡಕವಾಗಿರುವುದು ಕಂಡುಬರುತ್ತದೆ.

ಅಧ್ಯಯನದ ವಿಧಿ-ವಿಧಾನಗಳು

೧೯೨೮ರ ಸುಲ್ತಾನ್ ಪೇಟೆಯ ಕೋಮು ಗಲಭೆಯು ಕೋಮುವಾದಿ ಅಧ್ಯಯನದ ನೆಲೆಗಳಿಗೆ ಸವಾಲಾಗಿ ಪರಿಣಮಿಸಿದೆ. ಈ ಹಿನ್ನಲೆಯಲ್ಲಿ ಇದುವರೆಗಿನ ಕೊರತೆಗಳನ್ನು ತುಂಬಲು ಅಂದಿನ ಘಟನೆಯ ಪ್ರಮುಖ ಆಕರ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಜೊತೆಗೆ ಈ ಘಟನೆಯನ್ನು ಕುರಿತ ವಿಶ್ವೇಶ್ವರಯ್ಯನವರ ವರದಿಯ ವಿಮರ್ಶಾತ್ಮಕ

ಪರಿಶೀಲನೆಯೂ ಅಗತ್ಯ. ಘಟನೆಯನ್ನು ಕುರಿತ ರಹಸ್ಯ ದಾಖಲೆಗಳು, ಪೊಲೀಸ್ ವರದಿ, ದಿನಪತ್ರಿಕೆ, ಪ್ರಮುಖ ಸಂದರ್ಶನ, ಉಲ್ಲೇಖಿತ ಕೃತಿ ಹಾಗೂ ಲೇಖನ, ವರದಿಯಲ್ಲಿನ ಸಾಕ್ಷಿ–ಪುರಾವೆ, ದೃಶ್ಯ ಹಾಗೂ ಶ್ರವ್ಯ ಮಾಧ್ಯಮದ ಆಪರೂಪದ ಆಕರ, ಡೈರಿ ಹಾಗೂ ದಿನಚರಿ, ಆತ್ಮಕಥನ, ಜೀವನ ಚರಿತ್ರೆ, ಪ್ರತ್ಯಕ್ಷ ಹಾಗೂ ಪರೋಕ್ಷ ಸಾಹಿತ್ಯ ಇತ್ಯಾದಿಗಳನ್ನು ಸಂಗ್ರಹಿಸಿ ಕೂಲಂಕಷವಾಗಿ ವರ್ಗೀಕರಿಸಿಕೊಂಡು, ಚಾರಿತ್ರಿಕವಾಗಿ ಪರಿಶೀಲಿಸಿ ವಿಶ್ಲೇಷಣೆಗೆ ಒಳಪಡಿಸುವ ಚರಿತ್ರೆಯ ಜ್ಞಾನಶಿಸ್ತಿನ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಕೋಮುವಾದಿ ನೆಲೆಗಳ ಮನೋಭೂಮಿಕೆಯ ಹಿನ್ನೆಲೆಗಳಲ್ಲಿ ಹೆಣೆದುಕೊಂಡಿದೆ. ಹೀಗಾಗಿ ಘಟನೆಯ ಹಿನ್ನೆಲೆ, ಹುಟ್ಟು, ಪರಿಣಾಮಗಳು, ಸಮಿತಿ ವರದಿಯ ವಿಶ್ಲೇಷಣೆಯ ಹಂತಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧ್ಯಾಯಗಳನ್ನಾಗಿ ವರ್ಗೀಕರಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಪ್ರವೇಶ, ಹಿನ್ನೆಲೆ, ಮಹತ್ವ, ಸ್ವರೂಪ, ವಿಧಿ–ವಿಧಾನಗಳನ್ನು ಕುರಿತು ವಿವರಿಸಲಾಗಿದೆ. ಅಂದರೆ ಈ ಅಧ್ಯಾಯವು ಸುಲ್ತಾನ್ ಪೇಟೆಯ ಗಲಭೆಯ ಹಿನ್ನೆಲೆಯಾಗಿ ಇಡೀ ಗಲಭೆಗೆ ಕಾರಣವಾದ ಅಂಶಗಳನ್ನು ಪರಿಶೀಲಿಸಿದೆ. ನಂತರ ಹಿನ್ನಲೆಯನ್ನು ಕುರಿತು ಕೂಲಂಕಷವಾಗಿ ಚರ್ಚಿಸಲಾಗಿದೆ. ಅಂದರೆ ಮೂಲಕಾರಣ, ಅಧಿಕಾರಿಗಳ ಪ್ರವೇಶ, ನಂತರ ಹೊರ ವ್ಯಕ್ತಿಗಳ ಪ್ರವೇಶ ಮುಂತಾದ ಸಂಗತಿಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಗಲಭೆಯ ವಿಭಿನ್ನ ಹಂತಗಳನ್ನು ಚಿತ್ರಿಸಲಾಗಿದೆ. ಇಲ್ಲಿ ಗಲಭೆಯನ್ನು ಮೂರು ಹಂತಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಗಲಭೆಗೆ ಪತ್ರಿಕೆಗಳ ಪ್ರತಿಕ್ರಿಯೆ, ಹೊರಗಿನ ವ್ಯಕ್ತಿಗಳ ಪ್ರವೇಶ, ವಿದ್ಯಾರ್ಥಿಗಳು ನಡೆಸಿದ ಚಳುವಳಿ ಇತ್ಯಾದಿಗಳನ್ನು ಮೊದಲನೇ ಹಂತದಲ್ಲಿ ವಿವರಿಸಿದರೆ, ಎರಡು, ನಾಯಕರ ಬಂಧನ, ಅವರಿಗಾಗಿ ವಿದ್ಯಾರ್ಥಿಗಳ ಸತ್ಯಾಗ್ರಹವನ್ನು ಕುರಿತು ಚರ್ಚಿಸಲಾಗಿದೆ. ಕೊನೆಯ ಹಂತದಲ್ಲಿ ಮಿರ್ಜಾ ಇಸ್ಮಾಯಿಲರಲ್ಲಿ ವಿದ್ಯಾರ್ಥಿಗಳು ಕೇಳಿಕೊಳ್ಳುವುದು, ನಾಯಕರ ಬಿಡುಗಡೆ ಅಂಶಗಳಿದ್ದರೆ ಕೊನೆಯಲ್ಲಿ ಕೋಮುಗಲಭೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಗಲಭೆಯ ಹಿಂದೂ–ಮುಸ್ಲಿಂ ತಾರತಮ್ಯದ ನೆಲೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿ ಮುಖ್ಯವಾಗಿ ಘಟನೆಗೆ ಯಾರು ಕಾರಣ ಎಂಬುದಕ್ಕಿಂತಲೂ ಎರಡೂ ಕೋಮುಗಳಲ್ಲಿರುವ ಅಧಿಕಾರದ ನೆಲೆಗಳು ಹಾಗೂ ಮೂಲಭೂತವಾದಿ ನೆಲೆಗಳನ್ನು ಗುರುತಿಸಿಕೊಂಡು ಆ ಮೂಲಕ ಈ ಗಲಭೆಗೆ ಹೇಗೆ

ಕಾರಣರಾದರು ಎಂಬುದನ್ನು ವಿವರಿಸಲಾಗಿದೆ. ಎರಡು ಮತಗಳ ನಡುವೆ ಅನುಮಾನಗಳು, ಅಪನಂಬಿಕೆಗಳು ತಲೆದೋರಿ ಇಡೀ ಪರಿಸ್ಥಿತಿಯೇ ಕಲುಷಿತಗೊಂಡು ಕೋಮುವಾದಿ ಗಲಭೆಯ ಸ್ವರೂಪವನ್ನು ಪಡೆಯಿತು ಎಂಬುದನ್ನು ವಸ್ತುನಿಷ್ಠವಾಗಿ ಪರಿಶೀಲಿಸಲಾಗಿದೆ.

ಅಧ್ಯಾಯ ಐದು, ಸರ್ ಎಂ.ವಿಶ್ವೇಶ್ವರಯ್ಯನವರ ಸಮಿತಿಯ ನೇಮಕ ಹಾಗೂ ವಿಚಾರಣೆ ಎಂಬಲ್ಲಿ ಸರಕಾರವು ವಿಚಾರಣಾ ಸಮಿತಿಯನ್ನು ನೇಮಿಸಿದ್ದಕ್ಕೆ ಕಾರಣ, ನೇಮಕ ಹಾಗೂ ವಿಚಾರಣೆಯನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಹಿಂದೂ ಹಾಗೂ ಮುಸ್ಲಿಂ ಸಾಕ್ಷ್ಯಗಳು, ವಿವರಣೆಗಳನ್ನು ಕ್ರೋಢೀಕರಿಸಿ ತಿಳಿಸಲಾಗಿದೆ. ಎರಡು ಪಂಗಡಗಳು ವಿವಿಧ ಅಭಿಪ್ರಾಯಗಳನ್ನು ಒಂದಡೆ ಸೇರಿಸಲಾಗಿದೆ. ಎರಡೂ ಕಡೆಯ ಸಾಕ್ಷ್ಯಗಳು ವಾದಗಳನ್ನು ಪ್ರತ್ಯೇಕವಾಗಿಯೇ ವಿವರಣೆ ಕೊಡಲಾಗಿದೆ. ಹಾಗಾಗಿ ಇಲ್ಲಿ ಗಲಭೆಯನ್ನು ಕುರಿತು ಸೂಕ್ಷ್ಮವಾದ ಒಳನೋಟಗಳನ್ನು ನೋಡಬಹುದಾಗಿದೆ. ಇಲ್ಲಿ ಎರಡು ಗುಂಪುಗಳು ಒಂದು ಘಟನೆಯನ್ನು ಹೇಗೆ ವಿಭಿನ್ನ ಆಯಾಮದಲ್ಲಿ ನೋಡಿವೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರು, ವರದಿಯಲ್ಲಿನ ಪ್ರಮುಖ ಅಂಶಗಳನ್ನು ಕುರಿತು ವಿವರಿಸಿದೆ. ಇಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ಘಟನೆಯನ್ನು ಕುರಿತು ಒಂದು ನಿರ್ಧಾರಕ್ಕೆ ಬರುವುದು, ಆಡಳಿತದಲ್ಲಿನ ಲೋಪ-ದೋಷಗಳನ್ನು ಎತ್ತಿ ತೋರಿಸುವುದು, ಸರ್ಕಾರಕ್ಕೆ ಸೂಚನೆಗಳನ್ನು ನೀಡುವುದು, ಕೊನೆಗೆ ಪರಿಹಾರಗಳನ್ನು ವಿವರಿಸುವುದು ಮೊದಲಾದ ಸಂಗತಿಗಳನ್ನು ವಿವರಿಸಲಾಗಿದೆ. ಅಲ್ಲದೆ ಮುಂದೆ ಸರ್ಕಾರವು ಗಲಭೆಗಳಾಗದಂತೆ ತಡೆಹಿಡಿಯಬೇಕು ಎಂಬುದನ್ನು ಸಮಿತಿಯು ಸೂಚಿಸಿದ ಅಂಶಗಳನ್ನು ಉಲ್ಲೇಖಿಸಲಾಗಿದೆ. ಈ ವರದಿಯು ಗಲಭೆಗೆ ಸಂಬಂಧಿಸಿದ ಅನೇಕ ಒಳ ನೋಟಗಳನ್ನು ನೀಡಿರುವುದನ್ನು ಇಲ್ಲಿ ಗಮನಿಸ ಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಸಂಶೋಧನೆಯಲ್ಲಿ ಕಂಡುಕೊಂಡ ಅಂಶಗಳನ್ನು ಗಮನಿಸಲಾಗಿದೆ. ಮುಖ್ಯವಾದ ಅಂಶಗಳು, ಕೋಮುಗಲಭೆಗೆ ಕಾರಣಗಳು, ಸರ್ಕಾರದ ಕ್ರಮಗಳು ಜನರಲ್ಲಿ ಪರಸ್ಪರ ನಂಬಿಕೆ ಹಾಗೂ ಗಲಭೆಯಿಂದಾದ ಪರಿಣಾಮಗಳನ್ನು ಇಲ್ಲಿ ಪರಿಶೀಲಿಸಿದೆ.

ಹೀಗೆ ಇಡೀ ಗಣೇಶ ಗಲಭೆಯನ್ನು ಕುರಿತು ಒಂದು ಪೂರ್ಣ ಪ್ರಮಾಣದ ಚಿತ್ರಣ, ಕಾರಣಗಳು, ಘಟನೆಗಳು, ಸಮಿತಿಯ ನೇಮಕ, ವಿಚಾರಣೆ, ವರದಿ ಇತ್ಯಾದಿ ಎಲ್ಲಾ ಅಂಶಗಳನ್ನು ಪ್ರಸ್ತುತ ಅಧ್ಯಯನವು ಮಾಡಿದೆಯೆನ್ನಬಹುದು.

ಅಧ್ಯಾಯ ೨

ಸುಲ್ತಾನ್‌ಪೇಟೆಯ ಗಲಭೆಯ ಹಿನ್ನೆಲೆ ಹಾಗೂ ಅದರ ಸ್ವರೂಪ

೨

ಸುಲ್ತಾನ್‌ಪೇಟೆಯ ಗಲಭೆಯ ಹಿನ್ನೆಲೆ ಹಾಗೂ ಅದರ ಸ್ವರೂಪ

ಗಣಪತಿ ಗಲಭೆಯ ಹಿನ್ನೆಲೆ

೧೯೨೮ ಜುಲೈ ೩೦ರಲ್ಲಿ ನಡೆದ 'ಗಣಪತಿ ಗಲಾಟೆ' ಹಲವು ಕಾರಣಗಳಿಂದಾಗಿ ಗಮನಾರ್ಹವಾದುದು ದೊಡ್ಡ ಮಟ್ಟದ ಹಾನಿಯಾಗದಿದ್ದರೂ ಅದು ಸೃಷ್ಟಿಸಿದ ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳಿಂದಾಗಿ ಅತ್ಯಂತ ಗಮನಾರ್ಹವಾದುದು. ಇದಕ್ಕೆ 'ಸುಲ್ತಾನ್ ಪೇಟೆ ಗಣಪತಿ ಗಲಾಟೆ', 'ಸಿದ್ದಿಕಟ್ಟೆ ಗಣಪತಿ ಗಲಾಟೆ', 'ಅಬ್ಬಾಸ್‌ಖಾನ್ ಪ್ರಕರಣ' ಎಂಬ ಹೆಸರುಗಳು ಇವೆ.

ಸುಲ್ತಾನ್ ಪೇಟೆ, ಬೆಂಗಳೂರು ನಗರದ ಒಂದು ಏರಿಯಾ. ಮೈಸೂರು ಸಂಸ್ಥಾನದ ಭಾಗವಾಗಿದ್ದು, ಒಡೆಯರ ಆಳ್ವಿಕೆಯಲ್ಲಿ ನಡೆದ ಈ ಗಲಭೆಗೆ ತನ್ನದೇ ಆದ ಕಾರಣಗಳಿವೆ. ಇವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಬ್ರಾಹ್ಮಣೇತರ ಚಳವಳಿ

೨. ಮಿಲ್ಲರ್ ಸಮಿತಿಯ ವರದಿ

೩. ಬ್ರಾಹ್ಮಣೇತರರಲ್ಲಿಯೂ ಕೆಲವರಿಗೆ ಮಾತ್ರ ಸವಲತ್ತುಗಳು

೧. ಬ್ರಾಹ್ಮಣೇತರ ಚಳವಳಿ

ಸುಮಾರು ೧೯೧೬-೧೯೧೮ರ ಹೊತ್ತಿಗೆ ಸರ್ಕಾರಿ ಸೇವೆಯ ಬಹುಪಾಲು ಕೆಲಸಗಳನ್ನು ಹೊಂದಿದ್ದ ಬ್ರಾಹ್ಮಣ ಜನಾಂಗದ ವಿರುದ್ಧ ಮದ್ರಾಸಿನಲ್ಲಿ ಚಳವಳಿಯೊಂದು ಆರಂಭಗೊಂಡಿತು. ಅದು ಕ್ರಮೇಣ ಈ ಚಳವಳಿ ಮೈಸೂರು ರಾಜ್ಯಕ್ಕೂ ವ್ಯಾಪಿಸಿತು. ಅಲ್ಲಿಯವರೆಗೆ ಮುಗ್ಧ ಮತ್ತು ಅಜಾಗರೂಕರಾಗಿದ್ದ ಸಮಾಜ ಶಕ್ತಿಗಳಲ್ಲಿ ಕ್ರಮೇಣ ಜಾಗೃತಿ ಮೂಡಿತು. ಪಾಶ್ಚಾತ್ಯ ಉದಾರವಾದಿ ಪ್ರಭಾವಕ್ಕೊಳಗಾದ ಈ ವರ್ಗಗಳ ಕೆಲವು ಮುಖಂಡರು ಜಾತಿ ಸಂಸ್ಥೆಗಳನ್ನು ಸ್ಥಾಪಿಸಿದರು.[೧]

೧. ಭಾರತದ ಮಟ್ಟದಲ್ಲಿ ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿಗನುಗುಣವಾಗಿ ಮೈಸೂರು ಅರಸೊತ್ತಿಗೆಯೂ ಅಧಿಕಾರದ ತಳಹದಿಯನ್ನು ಬಲಪಡಿಸಿಕೊಳ್ಳಲು ಬಹುಸಂಖ್ಯಾತ

ವರ್ಗಗಳನ್ನು ಸಂತೋಷಗೊಳಿಸಬೇಕಾಗಿತ್ತು. 'ಈ ದಿಶೆಯಲ್ಲಿ ಬ್ರಾಹ್ಮಣೇತರ ಮುಖಂಡರನ್ನು ಸಂತೋಷಗೊಳಿಸುವ ಕುರಿತು ಉತ್ಸುಕರಾಗಿದ್ದರು'.[೨] ಹೀಗಾಗಿ ಅಲ್ಲಿಯವರೆಗೆ ಸರ್ಕಾರಿ ಸ್ಥಾನಮಾನಗಳಲ್ಲಿ ಅಧಿಪತ್ಯವನ್ನು ಸ್ಥಾಪಿಸಿದ್ದ ಬ್ರಾಹ್ಮಣವರ್ಗಕ್ಕೆ ಕ್ರಮೇಣ ಸರ್ಕಾರಿ ಸೇವೆಯಲ್ಲಿ ತನ್ನ ಹಿಡಿತವನ್ನು ಕಡಿಮೆ ಮಾಡಿಕೊಳ್ಳಬೇಕಾದ ಸನ್ನಿವೇಶಗಳು ನಿರ್ಮಾಣವಾದವು. ಅಲ್ಲದೆ ಸರ್ಕಾರದ ಬಗೆಗೆ ಬ್ರಾಹ್ಮಣರಲ್ಲಿ ಅಸಡ್ಡೆ ಹುಟ್ಟಿಕೊಂಡಿತ್ತು. ಈ ಮಧ್ಯೆ ಬ್ರಾಹ್ಮಣ ಬ್ರಾಹ್ಮಣೇತ್ತರ ಎಂಬ ಸಾಮಾಜಿಕ ಒಡಕು ಮೈಸೂರು ರಾಜ್ಯದಲ್ಲಿ ಗುಪ್ತವಾಗಿ ಬೇರೆ ಏನನ್ನೋ ನಿರೀಕ್ಷಿಸುತ್ತಾ ಸ್ಫೋಟಗೊಳ್ಳಲು ಕಾಯುತ್ತಿತ್ತು.

೨. ಮಿಲ್ಲರ್ ಸಮಿತಿ

ಬ್ರಾಹ್ಮಣೇತರರಿಗೆ ಸರ್ಕಾರಿ ಸೇವೆಗಳಲ್ಲಿ ನೇಮಕ ಮಾಡಿಕೊಳ್ಳಲು ವರದಿ ನೀಡುವಂತೆ ನೇಮಿಸಿದ್ದ ಮಿಲ್ಲರ್ ಸಮಿತಿಯು ಅವರ ಪರವಾಗಿ ವರದಿಯನ್ನು ಸಲ್ಲಿಸಿತ್ತು. ಬ್ರಾಹ್ಮಣರಲ್ಲಿ ವಿದ್ಯಾಭ್ಯಾಸ ಮಟ್ಟವು ಸುಮಾರು. ಶೇಕಡ ೪೬-೧೮ರಷ್ಟಿದ್ದು, ಸರ್ಕಾರದ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಾ ಬಹುಪಾಲು ಅಲ್ಲಿಯವರೆಗೆ ಅಧಿಪತ್ಯವನ್ನು ಸ್ಥಾಪಿಸಿತ್ತು. ಇನ್ನುಳಿದ ಬಹುಸಂಖ್ಯಾತ ಬ್ರಾಹ್ಮಣೇತರರ ವಿದ್ಯಾಭ್ಯಾಸ ಮಟ್ಟವು ಶೇಕಡ ೦ರಷ್ಟಿತ್ತು. ಕ್ರಮೇಣ ಬ್ರಾಹ್ಮಣೇತರರು ಸರ್ಕಾರಿ ಸೇವೆಗಳಲ್ಲಿ ಪ್ರವೇಶ ಮಾಡಿದ್ದರಿಂದ ಬ್ರಾಹ್ಮಣರು ಅವಕಾಶ ವಂಚಿತರಾದರು. ಸಾಮಾನ್ಯವಾಗಿ ಬ್ರಾಹ್ಮಣ-ಬ್ರಾಹ್ಮಣೇತರರ ನಡುವೆ ಕೋಮುದ್ವೇಷ ಮತ್ತು ಆಕ್ರೋಶ ಸೃಷ್ಟಿಯಾಯಿತು.[೩] ಆದ್ದರಿಂದ ಎರಡು ಸಮುದಾಯಗಳಲ್ಲಿನ ಕಹಿಭಾವನೆಗಳ ಪರಿಣಾಮವೇ ಇಂತಹ ಘಟನೆಗಳು ನಡೆಯಲು ಕಾರಣವಾಗಿವೆ.

೩. ಬ್ರಾಹ್ಮಣೇತರರಲ್ಲಿಯೂ ಕೆಲವರಿಗೆ ಮಾತ್ರ ಸವಲತ್ತುಗಳು

ಬ್ರಾಹ್ಮಣೇತರರಲ್ಲಿ ಕೆಲವೇ ಕೋಮಿನ ಜನ ಸರ್ಕಾರಿ ಸವಲತ್ತುಗಳಿಂದ ಅನುಕೂಲಗಳನ್ನು ಪಡೆದುಕೊಂಡಿದ್ದರು. ಕಳೆದ ಶತಮಾನದ ಇಪ್ಪತ್ತರ ದಶಕದಲ್ಲಿ ಮೈಸೂರು ಸಂಸ್ಥಾನದ ಸರ್ಕಾರವು ಬ್ರಾಹ್ಮಣೇತರರೆಲ್ಲರನ್ನು ಒಂದೇ ವರ್ಗಕ್ಕೆ ಸೇರಿಸಿದುದರಿಂದ ಬ್ರಾಹ್ಮಣ ವರ್ಗದವರು ಹೆಚ್ಚಿನ ಅಘಾತಕ್ಕೊಳಗಾದರು. ೧೯೨೬ರವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ, ಕುರುಬ, ಜನಾಂಗದವರು ಅರ್ಹತೆಯುಳ್ಳ ಮುಸ್ಲಿಮರು ಮತ್ತು ಲಿಂಗಾಯತರು, ಸರ್ಕಾರಿ ಸವಲತ್ತುಗಳಿಂದ ಹೆಚ್ಚಿನ ಅನುಕೂಲ ಪಡೆದುಕೊಂಡಿದ್ದರು. ಅರ್ಹತೆ ಸಂಪಾದಿಸಿಕೊಂಡು ಸವಲತ್ತುಗಳನ್ನು ಉಪಯೋಗಿಸಿಕೊಳ್ಳುವ ಸ್ಥಿತಿಗೆ ಬಂದಾಗ ಸರ್ಕಾರ ತಂದ ಈ ತಿದ್ದುಪಡಿ ಒಕ್ಕಲಿಗ, ಕುರುಬ, ಜಾತಿಗಳಿಗೆ ದೊಡ್ಡ ಪೆಟ್ಟಾಯಿತು.[೪] ಅಲ್ಲದೆ ಆಡಳಿತದಲ್ಲಿ ಮುಸ್ಲಿಮರ ಸಂಖ್ಯೆ ದಿನೇ ದಿನೇ ಏರುತ್ತಿದುದ್ದರಿಂದ ಸಹಜವಾಗಿಯೇ ಕೆಲವು ಹಿಂದೂ ಬ್ರಾಹ್ಮಣೇತರ

ರಲ್ಲಿಯೂ ಅಸಮಧಾನ ಬೆಳೆಯಿತು.[೫] ಈ ಭಿನ್ನಾಭಿಪ್ರಾಯ ಗಳಿಂದಾಗಿ ಯಾವ ನೆಪದಲ್ಲಾದರೂ ಅಸಮಧಾನ ಸ್ಫೋಟಗೊಳ್ಳುವ ಉದ್ವಿಘ್ನತೆ ಕಾಣಿಸಿಕೊಂಡಿತು.

೧೯೦೮ರಲ್ಲಿ ಖಾಸಗಿ ಶಾಲೆಯೊಂದು(ಹಿಂದೂ-ಆಂಗ್ಲೋ ವರ್ನ್ಯಾಕ್ಯುಲರ್ ಸ್ಕೂಲ್) ಎಂಬ ಶಾಲೆ ಸುಲ್ತಾನ್ ಪೇಟೆಯಲ್ಲಿ ಆರಂಭಗೊಂಡಿತ್ತು. ಇದು ೧೯೨೮ರ ಸುಮಾರಿಗೆ ಸುಲ್ತಾನ್ ಪೇಟೆಯಿಂದ ಬೆಂಗಳೂರು ಹಳೆನಗರದ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಗೆ ಸ್ಥಳಾಂತರವಾಗಿ ಸರಕಾರಿ ಮಾಧ್ಯಮಿಕ ಶಾಲೆಯಾಗಿ[೬] ಮಾರ್ಪಾಟಾಯಿತು(ಈಗ ಅದರ ಹೆಸರು 'ಕನ್ನಡ ಬಾಯ್ಸ್ ಮಿಡ್ಲ್ ಸ್ಕೂಲ್ ಎಂದಿದೆ). ಈ ಶಾಲೆಯನ್ನು ಸ್ಥಾಪಿಸಿದವರು ಎಸ್.ಆರ್. ನಂಜುಂಡಯ್ಯನವರು. ಶಾಲೆಯ ಆವರಣದಲ್ಲಿ ಬಿಡುವಿನ ವೇಳೆಯಲ್ಲಿ ತೋಟ ಮಾಡಲು ವಿದ್ಯಾರ್ಥಿಗಳು ಅಗೆಯುತ್ತಿದ್ದಾಗ ಒಂದು ಪುಟ್ಟ ಗಣಪತಿ ಸಿಕ್ಕಿತು. ಅದನ್ನು ಶಾಲೆಯ ಆವರಣದ ಮಧ್ಯದಲ್ಲಿ ನಿಲ್ಲಿಸಿದರು. ದೇವರ ವಿಗ್ರಹವನ್ನು ಕಂಡ ಮಕ್ಕಳು ಕೈ ಮುಗಿದು ಪೂಜೆ ಮಾಡಲು ಪ್ರಾರಂಭಿಸಿದರು. ಅಲ್ಲದೆ ವಿದ್ಯಾರ್ಥಿಗಳ ಜೊತೆಗೆ ಸಾರ್ವಜನಿಕರು ಸಹ ಗಣಪತಿಯನ್ನು ಪೂಜಿಸಲಾರಂಭಿಸಿದರು. ಇದೇ ಸಂದರ್ಭದಲ್ಲಿ ಶಾಲೆಯ ರಿಪೇರಿ ಕೆಲಸ ಮಾಡುತ್ತಿದ್ದ ಕಂಟ್ರಾಕ್ಟರ್ ಸಹಾಯದಿಂದ ಈ ಗಣಪತಿ ವಿಗ್ರಹಕ್ಕೆ ವಿದ್ಯಾರ್ಥಿಗಳೆಲ್ಲಾ ಸೇರಿ ಬಿಸಿಲು ಮಳೆಯಿಂದ ರಕ್ಷಣೆ ಕೊಡುವ ಉದ್ದೇಶದಿಂದ ಒಂದು ಸಣ್ಣ ಗೂಡನ್ನು ಕಟ್ಟಿಸಿದರು.

ಗಣಪತಿ ಇರುವ ಶಾಲೆಗೆ ಎದುರಗಡೆಯೇ ಮಹಮ್ಮದ್ ಅಬ್ಬಾಸ್‌ಖಾನ್ ಎಂಬುವವರ ಮನೆ ಇದ್ದಿತು. ಅವರು ಆ ಕಾಲಕ್ಕೆ ಅತ್ಯಂತ ಪ್ರಭಾವಿ ವ್ಯಕ್ತಿಗಳಾಗಿದ್ದರು. ಅವರು ನಗರ ಸಭೆಯ ಅಧ್ಯಕ್ಷರೂ ಆಗಿದ್ದರು. ಅಲ್ಲದೇ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಯ ಸದಸ್ಯರೂ ಆಗಿದ್ದರು. "ಸೆಂಟ್ರಲ್ ಮಹಮಡನ್ ಅಸೋಸಿಯೇಷನ್"ನ ಮುಖಂಡರೂ ಹಾಗೂ ಬ್ರಾಹ್ಮಣೇತರ ಚಳವಳಿಯ ಮುಖಂಡರೂ ಆಗಿದ್ದುದೂ ಉಂಟು.[೭] ಇವರು ಸ್ವಜಾತಿಯವರ ಒತ್ತಾಯದ ಮೇರೆಗೆ ಗಣಪತಿ ವಿಗ್ರಹಕ್ಕೆ ಗೂಡನ್ನು ಕಟ್ಟುವ ಕುರಿತು ಆಕ್ಷೇಪ ಮಾಡಿದರು. ಸ್ವತಃ ಅಬ್ಬಾಸ್‌ಖಾನರು ಸಹ ಗಣಪತಿಯ ಗೂಡನ್ನು ಗಮನಿಸಿ ಅಪಾರ್ಥಮಾಡಿಕೊಂಡು ಮಕ್ಕಳೆಲ್ಲಾ ಒಂದು ಗುಡಿಯನ್ನೇ ನಿರ್ಮಿಸುತ್ತಿದ್ದಾರೆಂದು ಭಾವಿಸಿದರು. ಅಲ್ಲದೇ ಈ ಶಾಲೆಯ ಹಿಂಬದಿಯಲ್ಲಿದ್ದ ಉರ್ದು ಶಾಲೆಗೆ ಹೋಗುತ್ತಿದ್ದ ವಿದ್ಯಾರ್ಥಿಗಳೂ ಸಹ ಈ ವಿಷಯವನ್ನೇ ಉತ್ಪ್ರೇಕ್ಷೆಯ ರೀತಿಯಲ್ಲಿ ಪ್ರಚಾರ ಮಾಡಿದ್ದುಂಟು.

ಶಾಲಾಮಕ್ಕಳು ಗೂಡನ್ನು ಕಟ್ಟುವುದಕ್ಕೂ ಮೊದಲು ಗಣೇಶನನ್ನು ಅದೇ ಶಾಲೆಯ ನೈರುತ್ಯ ಮೂಲೆಯ ಒಂದು ಕೊಠಡಿಯಲ್ಲಿ ಮುಚ್ಚಿಟ್ಟಿದ್ದರು. ಈ ಗೂಡನ್ನು ಕಟ್ಟುವಾಗ ನಡೆದ ಕೆಲವು ಮುಖ್ಯಾಂಶಗಳು ಗಮನಾರ್ಹವಾದುವು. ಅವು–

೧. ಗಣೇಶನಿಗೆ ಗೂಡು ಕಟ್ಟುವ ಕೆಲಸವು ೨ ರಿಂದ ೫ನೇ ಜೂನ್ ೧೯೨೮ರ ನಡುವೆ ಪೂರ್ಣಗೊಂಡಿತು.

೨. ಈ ಗೂಡನ್ನು ಕಟ್ಟಿಸಲು ಮುಖ್ಯೋಪಾಧ್ಯಾಯರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳ ಅನುಮತಿ ಪಡೆದಿರಲಿಲ್ಲ.

೩. ಇನ್ನೊಂದು ವಿಚಾರವೆಂದರೆ ಕಂಟ್ರಾಕ್ಟರ್‌ದಾರನು ಶಾಲಾ ರಿಪೇರಿ ಬಿಲ್‌ನಲ್ಲಿ ಈ ಗೂಡಿನ ಖರ್ಚನ್ನು ಸೇರಿಸಿರಲಿಲ್ಲ. ಹೀಗಾಗಿ ಅದು ಶಿಕ್ಷಣ ಇಲಾಖೆಯ ಗಮನಕ್ಕೂ ಬಾರದಂತೆ ಆಯಿತು. ಇದರಿಂದ ಸರ್ಕಾರವು ಎಚ್ಚೆತ್ತುಕೊಳ್ಳಲು ಇದ್ದಂಥ ಮೊದಲ ಅವಕಾಶವೇ ತಪ್ಪಿ ಹೋಗುವಂತಾಯಿತು.

೪. ಹೆಡ್ ಮಾಸ್ಟರ್‌ರವರು ಸಾಂದರ್ಭಿಕ ರಜೆಯ ಮೇಲೆ ಹೋಗಿದ್ದಾಗಲೇ ಈ ಗೂಡು ಕಟ್ಟುವ ಕೆಲಸವೂ ಮುಗಿದಿತ್ತು. ಇವರು ಮತ್ತೆ ಕೆಲಸದ ಮೇಲೆ ಹಾಜರಾಗುವ ವೇಳಗೆ ಗೂಡು ಸಿದ್ಧವಾಗಿತ್ತು (ದಿನಾಂಕ ೦೫.೦೬.೧೯೨೮ರಂದು ಕೆಲಸಕ್ಕೆ ಹಾಜ ರಾಗಿದ್ದರು).[೯]

ಒಟ್ಟಿನಲ್ಲಿ ಈ ದೂರು ದಿವಾನರವರೆಗೂ ಹೋಯಿತು. ಈ ದೂರನ್ನು ಅಬ್ಬಾಸ್ ಖಾನ್‌ರು ದಿವಾನರಾದಂತಹ ಮಿರ್ಜಾರವರಿಗೆ ಖುದ್ದಾಗಿ ನೀಡಿದರೆಂದು ಪ್ರತೀತಿ. ಅಬ್ಬಾಸ್‌ಖಾನ್ ಹಾಗೂ ಇನ್ನಿತರ ಮುಸ್ಲಿಮರು ಅಲ್ಲೊಂದು ದೇವಾಲಯವೇ ನಿರ್ಮಾಣವಾಗುತ್ತಿದೆ ಎಂದು ಭಾವಿಸಿ ಬಿಟ್ಟರು.

ಇದಾದ ಮೇಲೆ ದಿವಾನರ ಆಪ್ತ ಕಾರ್ಯದರ್ಶಿಗಳಿಂದ ಅಂದಿನ ವಿದ್ಯಾ ಇಲಾಖಾ ನಿರ್ದೇಶಕ (D.P.I) ರಾಗಿದ್ದ ಎಸ್.ಎಸ್. ಸುಬ್ಬರಾಯರಿಗೆ ೧೨ನೇ ಜೂನ್ ೧೯೨೮ರಂದು ಒಂದು D.O.ಪತ್ರ ಬಂದಿತು. ಈ ಪತ್ರದಲ್ಲಿ

> "The Dewan understood that a small temple, likely to develop into a big one , was being erected in the compound of the school, and requesting him to look into the matter and find out what could be done to stop its construction, as it was apprehended that with

mosque in close proximity the construction of such a structure was undesirable as it might lead to communal friction”[೯]

ಎಂಬ ಎಚ್ಚರಿಕೆಯ ಜೊತೆಗೆ ಕೂಡಲೇ ಗುಡಿ ಕಟ್ಟುವುದನ್ನು ನಿಲ್ಲಿಸಬೇಕೆಂದು ಆದೇಶಿಸಲಾಗಿತ್ತು.

ಈ ಪತ್ರವನ್ನು ನೋಡಿದ ಕೂಡಲೇ ವಿದ್ಯಾ ಇಲಾಖಾ ನಿರ್ದೇಶಕರಾದ ಸುಬ್ಬಾರಾಯರು ದಿನಾಂಕ ೧೫.೦೮.೧೯೨೮ರಂದು ಬೆಳಿಗ್ಗೆ ೧೦.೧೫ಕ್ಕೆ ಸರಿಯಾಗಿ ಸುಲ್ತಾನ್ ಪೇಟೆಯ ಸ್ಕೂಲಿಗೆ ಭೇಟಿಕೊಟ್ಟು ಶಾಲೆಯ ಮುಖ್ಯೋಪಾಧ್ಯಾಯರೊಂದಿಗೆ ಮಾತುಕತೆ ನಡೆಸಿ ವಿಷಯವನ್ನೆಲ್ಲಾ ತಿಳಿದುಕೊಂಡರು. ಅಂತೆಯೇ ಮುಖ್ಯೋಪಧ್ಯಾಯರು “ಇದು ಕೇವಲ ಹುಡುಗರ ಸಮಧಾನಕ್ಕಷ್ಟೇ ಒಂದು ಚಿಕ್ಕ ಮಂಟಪ ಕಟ್ಟಲಾಗಿದೆಯೇ ಹೊರತು ಗುಡಿಯನ್ನು ಕಟ್ಟಿಸುವ ಉದ್ದೇಶವೇನೂ ಇಲ್ಲ” ಎಂದು ನಿರ್ದೇಶಕರಿಗೆ ಸ್ಪಷ್ಟೀಕರಣ ನೀಡಿದರು.[೧೦] ಇದನ್ನು ಕುರಿತು ಸುಬ್ಬರಾಯರು ಮುಖ್ಯೋಪಾಧ್ಯಾಯರಿಗೆ “ಹೇಗಾದರೂ ಆಗಲಿ ಈಗ ವಿಗ್ರಹ ಆ ಗೂಡಿನಲ್ಲಿ ಇಲ್ಲ, ಮುಂದೆ ಅದನ್ನು ಪ್ರತಿಷ್ಠಾಪಿಸುವ ಗೋಜಿಗೆ ಹೋಗದೇ ಇರಿ. ಒಂದು ವೇಳೆ ಹಾಗೆ ಮಾಡುವುದಾದರೆ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಈಗ ಸದ್ಯಕ್ಕೆ ಗಣೇಶನ ವಿಗ್ರಹವನ್ನು ಒಂದು ಕೊಠಡಿಯಲ್ಲಿಟ್ಟು ಬೀಗ ಹಾಕಿಬಿಡಿ” ಎಂದು ಹೇಳಿ ಹೊರಟು ಹೋದರು.

ಆನಂತರ ನಿರ್ದೇಶಕರಾದ ಎನ್.ಎಸ್.ಸುಬ್ಬಾರಾಯರು ದಿವಾನರ ಆಪ್ತಕಾರ್ಯದರ್ಶಿಗೆ ಒಂದು ಪತ್ರವನ್ನು ಬರೆದರು. ಗುಡಿ ನಿರ್ಮಾಣದ ಕೆಲಸ ನಿಂತಿದೆಯೆಂದೂ ಸರ್ಕಾರಿ ಶಾಲೆಯಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡುವ ಪದ್ಧತಿ ಸರಿಯಲ್ಲವೆಂಬ ಅಂಶವನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ತಿಳಿಸಲಾಗಿದೆಯೆಂದೂ ಬರೆದರು. ಗಣೇಶನಿದ್ದ ಎ.ವಿ. ಸ್ಕೂಲಿನ ಹಿಂಭಾಗದಲ್ಲಿಯೇ ಉರ್ದುಶಾಲೆ ಇರುವುದರಿಂದ ಅಲ್ಲಿಗೆ ಹೋಗುವ ವಿದ್ಯಾರ್ಥಿಗಳು ಎ.ವಿ. ಸ್ಕೂಲಿನ ಹೆಬ್ಬಾಗಿಲಿನ ಮೂಲಕವೇ ಹಾದು ಹೋಗಬೇಕಾಗಿರುವುದರಿಂದ ಕೋಮು ಗಲಭೆ ಸಂಭವಿಸಬಹುದೆಂದೂ ತಿಳಿಸಿದರು. ಹಾಗಾಗಿ ಸುಬ್ಬರಾಯರು ಅಲ್ಲಿ ಗಣೇಶನ ವಿಗ್ರಹವನ್ನು ಮತ್ತೊಮ್ಮೆ ಪುನಃ ಪ್ರತಿಷ್ಠಾಪಿಸುವುದು ಬೇಡವೆಂಬ ಅಭಿಪ್ರಾಯವನ್ನು ದಿವಾನರಿಗೆ ಪತ್ರದ ಮುಖೇನ ತಿಳಿಸಿದ್ದರು. ಅಲ್ಲದೇ ಮುಂದಿನ ಕೆಲಸವನ್ನು ನಿಲ್ಲಿಸಲು ಆಜ್ಞೆ ಮಾಡಿರುವುದಾಗಿಯೂ, ಅಲ್ಲಿದ್ದ ಉಳಿದ ವಿಗ್ರಹಗಳನ್ನು ಗಣೇಶನ ವಿಗ್ರಹದೊಂದಿಗೆ ಶಾಲೆಯ ಒಳಗಡೆ ಕೊಠಡಿಯೊಂದರಲ್ಲಿಟ್ಟು ಬೀಗ ಹಾಕಬೇಕೆಂದು ತಿಳಿಸಿರುವುದಾಗಿಯೂ ಸ್ಪಷ್ಟಪಡಿಸಿದರು. ಪತ್ರದ ಕೊನೆಯಲ್ಲಿ ಈ ಬಗ್ಗೆ ತನಿಖೆ ಮಾಡಿ ಮತ್ತೊಮ್ಮೆ ವರದಿ ಮಾಡುವುದಾಗಿಯೂ ಪತ್ರದಲ್ಲಿ ತಿಳಿಸಿದ್ದಾರೆ.

೨೧ ಜೂನ್ ೧೯೨೮ ರಂದು ಎಸ್.ಎಸ್.ಸುಬ್ಬರಾಯರು, ಬೆಂಗಳೂರು ಸಿಟಿ ಪ್ರದೇಶದಲ್ಲಿ ಬೇರೊಂದು ಪಾಠಶಾಲೆಯ ಪರಿಶೀಲನೆ ನಡೆಸಲು ಬಂದಿದ್ದರು. ಅದೇ ವೇಳೆ ಅವರ ಜೊತೆಗೆ ಮುನಿಸಿಪಲ್ ಕೌನ್ಸಿಲ್‌ನ ಪ್ರೆಸಿಡೆಂಟರಾದ ಅಬ್ಬಾಸ್‌ಖಾನರೂ ಇತರ ಮುನಿಸಿಪಲ್ ಅಧಿಕಾರಿಗಳೂ ಬಂದಿದ್ದರು. ಆ ಸಮಯದಲ್ಲಿ ಎಲ್ಲರೂ ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿಗೆ ಭೇಟಿಯನ್ನಿತ್ತರು. ನಿರ್ದೇಶಕರ ಪ್ರಕಾರ ಆ ದಿನ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷರು ಶಿಕ್ಷಣ ಇಲಾಖೆಗೆ ಈ ವಿಷಯವನ್ನು ಕುರಿತು ತರಾಟೆಗೆ ತೆಗೆದುಕೊಂಡರು. ಅಂದರೆ ಯಾವುದೇ ಅಧಿಕೃತ ಒಪ್ಪಿಗೆ ಇಲ್ಲದೇ ಗಣೇಶನಿಗೆ ಗೂಡನ್ನು ಕಟ್ಟಲು ಹೇಗೆ ಅನುಮತಿ ನೀಡಿದಿರಿ ಎಂಬುದಾಗಿತ್ತು.[೮] ಇಂತಹ ಬಿರುಸು ಮಾತುಗಳಿಗೆ ಶಿಕ್ಷಣ ಇಲಾಖೆಯ ನೌಕರರು ಪ್ರತಿಯಾಗಿ ಯಾವುದೇ ಮಾತನ್ನು ಆಡಿರಲಿಲ್ಲ. ಹೀಗಾಗಿ ಈ ಘಟನೆ ನಡೆದ ಶಾಲೆಯಲ್ಲಿ ಸದ್ದಿಲ್ಲದಂತೆ ಆಗಿತ್ತು.

ಈ ವೇಳೆಗಾಗಲೇ ಅಧಿಕಾರಿಗಳ ನೆಲೆಯಲ್ಲಿ ಗಣೇಶನ ಪ್ರತಿಮೆಯ ಪ್ರತಿಷ್ಠಾಪನೆಯ ವಿಚಾರ ಹಾಗೂ ಪ್ರಯತ್ನಗಳು ನಿಂತುಹೋಗಿದ್ದವು. ಕೇವಲ ವಿದ್ಯಾರ್ಥಿಗಳ ಭಾವನೆಗಳಿಗೆ ಸೀಮಿತವಾಗಿದ್ದ ಈ ಘಟನೆ ಗಣೇಶನಿಗೆ ಗೂಡುಕಟ್ಟುವ ಪ್ರಯತ್ನವು ರಕ್ಷಣೆಗಾಗಿ ಮಾತ್ರ ವಾಗಿತ್ತು. ಅಲ್ಲದೆ ಆ ಶಾಲೆಗೆ ಅದೇ ಸಮಯದಲ್ಲಿ ರಿಪೇರಿ ಮಾಡುವ ಕೆಲಸವೂ ನಡೆಯು ತ್ತಿದ್ದುರಿಂದ ಈ ಪ್ರಯತ್ನಕ್ಕೆ ಹೆಚ್ಚಿನ ಬೆಂಬಲವೂ ದೊರೆತ್ತಿತ್ತು. ಹೀಗಾಗಿ ಸಾರ್ವಜನಿಕರು ಗುಡಿಯನ್ನೇ ಕಟ್ಟಿಸುತ್ತಿದ್ದಾರೆಂದು ಭಾವಿಸಿದ್ದು ಸಹಜವೆ. ಅನುಮತಿಯನ್ನು ಪಡೆಯದೇ, ಮುಖ್ಯೋಪಾಧ್ಯಾಯರು ಶಾಲೆಗೆ ರಜೆಯನ್ನು ಹಾಕಿದ್ದ ಸಂದರ್ಭದಲ್ಲಿಯೇ ಈ ಗೂಡಿನ ನಿರ್ಮಾಣವು ಆದದ್ದು ಗಮನಾರ್ಹ ಸಂಗತಿ. ಸಾರ್ವಜನಿಕ ಸ್ಥಳದಲ್ಲಿ ಹೀಗೆ ಮಾಡುವ ಮುಂಚೆ ಸಂಬಂಧಿಸಿದ ಇಲಾಖೆಯಿಂದ ಅನುಮತಿಯನ್ನು ಪಡೆಯಬೇಕಾದ್ದು ಅನಿವಾರ್ಯ. ಆದರೆ ಇಲ್ಲಿ ಅಂಥಹ ಯಾವುದೇ ಪ್ರಯತ್ನಗಳು ನಡೆದಿರಲಿಲ್ಲ.

೧೫.೦೬.೧೯೨೮ರಂದು ವಿದ್ಯಾ ಇಲಾಖೆಯ ನಿರ್ದೇಶಕರಾಗಿದ್ದ ಸುಬ್ಬರಾಯರು ಶಾಲೆಗೆ ಭೇಟಿಯಿತ್ತು ಗಣೇಶನನ್ನು ಪ್ರತಿಷ್ಠಾಪಿಸದಂತೆ ಆಜ್ಞೆ ಮಾಡಿದ ತರುವಾಯದಿಂದ ಸುಮಾರು ೨೧.೦೬.೧೯೨೮ರಂದು ಮತ್ತೊಮ್ಮೆ ನಿರ್ದೇಶಕರು ಹಾಗೂ ಮುನ್ಸಿಪಲ್ ಅಧ್ಯಕ್ಷರಾಗಿದ್ದ ಅಬ್ಬಾಸ್‌ಖಾನ್‌ರು ಶಾಲೆಗೆ ಬಂದು ಹೋಗುವವರೆಗೂ ಈ ಕುರಿತು ಶಾಲೆಯಲ್ಲಿ ಯಾವುದೇ ಗೊಂದಲಗಳು ತಂಟೆ ತಕರಾರುಗಳು ನಡೆದಿರಲಿಲ್ಲ. ಆದರೆ ಅಬ್ಬಾಸ್ ಖಾನ್‌ರು ಈ ವಿಷಯವನ್ನು ಕುರಿತು ಶಿಕ್ಷಣ ಇಲಾಖೆಯ ನೌಕರರನ್ನು ತರಾಟೆಗೆ ತೆಗೆದುಕೊಂಡಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಹೊರ ಪ್ರಾಂತ್ಯಗಳಿಗೂ ರೆಕ್ಕೆ ಪುಕ್ಕ

ಬಂದಂತಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಅಬ್ಬಾಸ್‌ಖಾನ್‌ರ ಹೆಸರು ಹೆಚ್ಚಿನ ಮಟ್ಟದಲ್ಲಿ ಚಾಲ್ತಿಗೆ ಬಂದಿತು.

ಮುಂದೆ ಸುಮಾರು ಕೆಲವು ದಿನಗಳವರೆಗೆ ಗಣಪತಿ ಗೂಡಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಸಂಭವಿಸಲಿಲ್ಲ. ಆದರೆ ನಗರದ ಹೊರಗಿನ ಪ್ರಾಂತಗಳಲ್ಲಿ ಈ ರೀತಿ ಒಂದು ವದಂತಿ ಹಬ್ಬಿತು. "ಅಬ್ಬಾಸ್ ಖಾನರ ದಬ್ಬಾಳಿಕೆಯಿಂದಾಗಿ ಗಣೇಶನ ವಿಗ್ರಹವನ್ನು ಬೇಕಂತಲೇ ನಾಶಮಾಡಲಾಗಿದೆ. ಅವರ ಮನೆ ಶಾಲೆಯ ಮುಂಬಾಗದಲ್ಲಿಯೇ ಇರುವುದರಿಂದ ಹೀಗೆ ಮಾಡಿರಲೂ ಸಾಧ್ಯವಿದೆ. ಈ ಬಗೆಯ ವದಂತಿಯು ನಗರದಲ್ಲಿ ತೀವ್ರವಾಗಿ ಹರಡತೊಡಗಿದ್ದು ಹೆಚ್ಚಿನ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿತು.

ಇಷ್ಟರೊಳಗೆ ಈ ಸುದ್ದಿಯು ಮೊಟ್ಟಮೊದಲು ೨೭.೦೬.೧೯೨೮ರಂದು "ವೀರಕೇಸರಿ" ಎಂಬ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಈ ಸುದ್ದಿಯನ್ನು ಓದಿದ ಕೂಡಲೇ ಅಬ್ಬಾಸ್ ಖಾನರು "ವೀರಕೇಸರಿ" ಪತ್ರಿಕೆಯ ಸಂಪಾದಕರಾದ ಸೀತಾರಾಮಶಾಸ್ತ್ರಿಗಳ ಬಳಿಗೆ ಓಡಿದರು. 'ವಿಗ್ರಹದ ಸ್ಥಳಾಂತರದ ಬಗ್ಗೆ ತಮಗೇನು ತಿಳಿಯದೆಂದೂ ವಿಗ್ರಹವನ್ನು ಮೊದಲಿಟ್ಟ ಸ್ಥಳದಲ್ಲಿಯೇ ಇಟ್ಟರೂ ಸಹ ತಮ್ಮ ಅಭ್ಯಂತರವೇನೂ ಇಲ್ಲ'ವೆಂದು ಹೇಳಿಕೆ ಕೊಟ್ಟರು. ಅದೇ ಹೇಳಿಕೆಯನ್ನು ಶಾಸ್ತ್ರಿಗಳು ತಮ್ಮ ಪತ್ರಿಕೆಯಲ್ಲೂ ಪ್ರಕಟಿಸಿದರು. ಇದೇ ರೀತಿಯ ಸುದ್ದಿಗಳು ಅಂದಿನ ಪ್ರಮುಖ ಪತ್ರಿಕೆಗಳಾದ ಪ್ರಜಾಮಿತ್ರ, ನವಜೀವನ , ಮೈಸೂರು ಸ್ಟಾರ್ ಮೊದಲಾದ ಪತ್ರಿಕೆಗಳಲ್ಲಿಯೂ ಪ್ರಕಟಗೊಂಡವು.

ಈ ಕುರಿತು ನಂತರ ವ್ಯಕ್ತಿಗತ ಕುತಂತ್ರಗಳೂ ನಡೆಯುತ್ತವೆ. 'ವಿಶ್ವ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿದ್ದ ತಿರುಮಲೆ ತಾತಾಚಾರ್ಯ ಶರ್ಮರವರು ಜೂನ್ ೨೯ ರಂದು ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಹಾಗೂ ೩.೭ ಜುಲೈ ೧೯೨೮ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೂ ಒಂದು ಬಹಿರಂಗ ಪತ್ರಗಳನ್ನು ಬರೆದರು. ಆದರೆ ಈ ಕುರಿತು ಯಾವುದೇ ಉತ್ತರ ಮಾತ್ರ ಸರ್ಕಾರದ ವತಿಯಿಂದ ಬರುವುದಿಲ್ಲ.

ಅದೇ ರೀತಿ ದಿನಾಂಕ ೨೭.೦೬.೧೯೨೮ರಂದು 'ವೀರಕೇಸರಿ' ಪತ್ರಿಕೆಯ ಪ್ರತಿನಿಧಿಯೊಬ್ಬರು ಎನ್.ಎಸ್. ಸುಬ್ಬರಾಯರನ್ನು ಭೇಟಿ ಮಾಡಿದರು. ಈ ಭೇಟಿಯಲ್ಲಿ ನಡೆದ ಮಾತುಕತೆಗಳಿಂದ ಆ ವರದಿಗಾರನಿಗೆ ಸಮಾಧಾನವಾಗಲಿಲ್ಲ. ಮರುದಿನ ಅಂದರೆ ೨೮.೦೬.೧೦೨೮ರಂದು ಆ ಪತ್ರಿಕೆಯ ಸಂಪಾದಕರಾದ ಸೀತಾರಾಮಶಾಸ್ತ್ರಿ ಅವರು ಸುಬ್ಬರಾಯರೊಡನೆ ತಮ್ಮ

ಪ್ರತಿನಿಧಿಯು ನಡೆಸಿದ ಸಂದರ್ಶನದ ವಿವರಗಳೊಂದಿಗೆ ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸಿ ದಪ್ಪ ಅಕ್ಷರಗಳಲ್ಲಿ ಪ್ರಕಟಿಸಿದರು. ಉಳಿದ ಪತ್ರಿಕೆಗಳಲ್ಲಿಯೂ ಈ ವಿವರಗಳು ಪ್ರಕಟವಾದವು.[೧೨]

ಒಟ್ಟಿನಲ್ಲಿ ಒಂದು ಶಾಲೆ ಹಾಗೂ ಶಿಕ್ಷಣ ಇಲಾಖೆಯ ವರದಿಯ ಕಡತಗಳಲ್ಲಿ ತಣ್ಣಗಾಗಿದ್ದ ಈ ಘಟನೆಗೆ ಇಲ್ಲ ಸಲ್ಲದ ವದಂತಿಗಳನ್ನು ಮತ್ತೊಮ್ಮೆ ಬಡಿದೆಬ್ಬಿಸಿದವು. ಅಂತೆಯೇ ಪತ್ರಿಕೆಗಳೂ ಸದಾ ಈ ವಿಷಯವನ್ನು ಕುರಿತು ನೀಡಿದ ಪ್ರಚಾರವು ಸಾರ್ವಜನಿಕರ ಗಮನ ಸೆಳೆದವು. ಮುಂದೆ ಇದು ಬಹಿರಂಗ ಸುದ್ದಿಯಾದಾಗ ಹಲವರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈ ಗಲಭೆ ನಡೆಯಲು ಹಿಂದೆ ನಿಂತರು.

ಕೊನೆಗೆ ಜುಲೈ ೨೩ರಂದು ಈ ಘಟನೆ ಒಂದು ವ್ಯವಸ್ಥಿತ ಚಳವಳಿಗೆ ದಾರಿ ಮಾಡಿಕೊಟ್ಟಿತು. ಶಿಕ್ಷಣ ಇಲಾಖೆಯ ನಿರ್ದೇಶಕರು ಆಜ್ಞೆ ನೀಡಿದ ಐದು ವಾರಗಳ ನಂತರ ಈ ಘಟನೆಯು ಚಳವಳಿಯ ಸ್ವರೂಪವನ್ನು ಪಡೆಯಿತು. ೨೩ರಂದು ಸಾಯಂಕಾಲ ಮಲ್ಲೇಶ್ವರಂನ ನಿವಾಸಿಯಾದ ಎಚ್.ವಿ. ಸುಬ್ರಹ್ಮಣ್ಯಂ ರವರು ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿಗೆ ಬಂದು ಅಲ್ಲಿದ್ದ ಹುಡುಗರನ್ನೆಲ್ಲಾ ಒಟ್ಟುಗೂಡಿಸಿ ಹೊಸದಾಗಿ ಕಟ್ಟಿರುವ ಗೂಡಿನಲ್ಲಿ ಗಣೇಶ ವಿಗ್ರಹದ ಸ್ಥಾಪನೆಗೆ ಒತ್ತಾಯಪಡಿಸಿದರು.[೧೩] ನಂತರದ ದಿನ ಅಂದರೆ ೨೪ರಂದು ಬೆಳಿಗ್ಗೆ ೧೦.೫೦ರ ಹೊತ್ತಿಗೆ ಸುಬ್ರಹ್ಮಣ್ಯಂರವರ ನಾಯಕತ್ವದಲ್ಲಿ ವಿಗ್ರಹ ಸ್ಥಾಪನೆಯ ಪ್ರಕ್ರಿಯೆಯೊಂದಿಗೆ ಗಲಭೆಯ ಹುಟ್ಟು ಸ್ವರೂಪಗಳು ಅನಾವರಣಗೊಳ್ಳ ತೊಡಗಿದವು. ಇದು ಇನ್ನೂಳಿದ ಆಯಾಮಗಳಿಗೆ ಹಾಗೂ ಸಮಸ್ಯೆಗಳಿಗೆ ಪ್ರೇರಣೆ ನೀಡುವಂತೆ ಆಯಿತು.

ಅಡಿಟಪ್ಪಣಿಗಳು

೧. ಗಜಾನನ ಶರ್ಮ, ನನ್ನ ವೃತ್ತಿ ಜೀವನದ ನೆನಪುಗಳು, ಪು.೧೦೮

೨. ಚಂದ್ರಶೇಖರ್ ಎಸ್., ಸಾಮಾಜೀಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ, ಪು.೧೦

೩. ಎಂ.ವಿಶ್ವೇಶ್ವರಯ್ಯರವರ ಸಮಿತಿಯ ವರದಿ, ಕ.ರಾ.ಪ, ಪ್ಯಾರಾ.೧೦೮

೪. ಚಂದ್ರಶೇಖರ್ ಎಸ್., ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ, ಪು.೭೫

೫. ಅದೇ, ಪು.೭೬

೬. ಲಿಂಗಯ್ಯ ಡಿ., ಶಿವಪುರಧ್ವಜ ಸತ್ಯಾಗ್ರಹ, ಪು.೨೧

೭. ಅದೇ, ಪು.೨೧

೮. ಶೇಷಗಿರಿರಾವ್ ಎಲ್.ಎಸ್.(ಸಂ), ಸಂ.೧, ಬೆಂಗಳೂರು ದರ್ಶನ, ಪು.೫೩೭

೯. ಎಂ.ವಿಶ್ವೇಶ್ವರಯ್ಯರವರ ಸಮಿತಿಯ ವರದಿ, ಕ.ರಾ.ಪ, ಪ್ಯಾರಾ.೯

೧೦. ಸುಂದರ್‌ರಾವ್ ಬ.ನ., **ಬೆಂಗಳೂರು ಇತಿಹಾಸ**, ಪು.೫೩೭

೧೧. ಅದೇ, ಪು.೫೩೮

೧೨. ವಿಶ್ವೇಶ್ವರಯ್ಯನವರ ಸಮಿತಿಯ ವರದಿ, ಕ.ರಾ.ಪ, ಪ್ಯಾರಾ.೧೨

೧೩. ಸುಂದರ್‌ರಾವ್ ಬ.ನ., **ಬೆಂಗಳೂರು ಇತಿಹಾಸ**, ಪು.೫೪೩

ಅಧ್ಯಾಯ ೩

ಗಲಭೆಯ ವಿವಿಧ ಹಂತಗಳು

೩

ಗಲಭೆಯ ವಿವಿಧ ಹಂತಗಳು

ಮೂರ್ತಿಯನ್ನು ಗೂಡಿನಿಂದ ದೂರವಿಡಲು ವಿದ್ಯಾ ಇಲಾಖೆಯ ನಿರ್ದೇಶಕರು ಆದೇಶ ನೀಡಿದ ನಂತರ ಸುಮಾರು ದಿನಗಳವರೆವಿಗೂ ಇಲ್ಲಿ ಯಾವುದೇ ಮಹತ್ವದ ಘಟನೆಗಳು ನಡೆದಿರಲಿಲ್ಲ. ಆದರೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಕೆಲವು ನಾಯಕರು ಈ ಗಲಭೆಗೆ ಪಾದಾರ್ಪಣೆ ಮಾಡಿದರು. ಡಿ.ವಿ.ಜಿ.ಯವರು ಹೇಳುವಂತೆ ನಡೆದಿದ್ದೇನೋ ನಡೆದು ಹೋಯಿತು. ಪ್ರಜಾಸಮುದಾಯ ಒಡೆದಿದ್ದು ಎರಡಲ್ಲ, ಮೂರು. ಹಿಂದೂಗಳು ಮುಸಲ್ಮಾನರು, ಎಂಬುದಲ್ಲದೇ ಹಿಂದುಗಳಲ್ಲಿಯೇ ಎರಡು ಕಕ್ಷಿಗಳಾಗಿದ್ದವು. ಒಂದು ಸರ್ಕಾರಕ್ಕೆ ಸಹಕಾರದ್ದು, ಇನ್ನೊಂದು ಪ್ರತಿಕಾರದ್ದು. ಪ್ರತೀಕಾರ ಪಕ್ಷದಲ್ಲಿ ವೆಂಕಟಪತಯ್ಯನವರು, ವೀರಕೇಸರಿ ಸೀತರಾಮಶಾಸ್ತ್ರಿಗಳು, ಪಾಮಡಿ ಸುಬ್ಬರಾಮಶೆಟ್ಟಿ , ಎಂ.ಪಿ. ಸೋಮಶೇಖರಾಯರು, ಮೊದಲಾದವರಿದ್ದರು. ಸರಕಾರದ ಕುರುಹುಗಳಲ್ಲಿ ಕೆಲವು ಅತೃಪ್ತ ಬ್ರಾಹ್ಮಣ ಸಮುದಾಯದ ಪ್ರತಿ ಜನವರ್ಗ ಪ್ರತಿಕಾರಕ್ಕಾಗಿ ಕಾಯುತ್ತಲಿದ್ದರು ಎಂಬ ಸೂಚನೆಯೂ ಸಿಗುತ್ತದೆ.[೧]

ಮೇಲೆ ಹೆಸರಿಸಿದ ಕೆಲವು ನಾಯಕರುಗಳು ತಮ್ಮದೇ ಆದ ಪತ್ರಿಕೆಗಳನ್ನು ನಡೆಸುತ್ತಿದ್ದವರು. ಈ ನಾಯಕರುಗಳ ಸಂಪಾದಯಕತ್ವದಲ್ಲಿ ಪ್ರಕಟವಾದ ಸುದ್ದಿಯು "ಗಣೇಶನು ಕತ್ತಲೆಯಲ್ಲಿ ತನ್ನಷ್ಟಕ್ಕೆ ತಾನು ಪ್ರಲಾಪಮಾಡಿಕೊಂಡಿರುವಂತೆ ವರ್ಣಿಸಿದವು", "ಅಯ್ಯೋ ನನಗೆ ಈ ಗತಿ ಬರಬಹುದೇ? ವಿದ್ಯಾಧಿಪತಿಯೆನಿಸಿಕೊಂಡ ನಾನು ಪೂಜೆ ನೈವೇದ್ಯಗಳೊಂದೂ ಇಲ್ಲದೆ ಈ ಕತ್ತಲೆಯಲ್ಲಿ ಮಲಗಿರುವಂತೆ ಆಗಿದೆಯಲ್ಲ" ಎಂದು[೨] ಒಟ್ಟಿನಲ್ಲಿ ಇವರೆಲ್ಲರ ಪ್ರವೇಶವು ಗಣಪತಿ ಗಲಭೆಗೆ ಒಂದು ಹೊಸ ತಿರುವನ್ನು ನೀಡಿರುವುದರಲ್ಲಿ ಯಾವುದೇ ಸಂಶಯವಿಲ್ಲ.

ಮದ್ರಾಸ್ ಬ್ರಾಹ್ಮಣ, ಮೈಸೂರು ಬ್ರಾಹ್ಮಣ, ಬ್ರಾಹ್ಮಣೇತರ ಪ್ರಜಾಪಕ್ಷ ಹೀಗೆ ಹಲವು ಸಂಘಟನೆಗಳೂ ಮೈಸೂರಿನಲ್ಲಿ ಪ್ರಬಲವಾಗುತ್ತಲಿದ್ದವು. ಆ ಮೂಲಕ ಪ್ರಜೆಗಳಲ್ಲಿ ನಾಯಕರು ಉದ್ಭವವಾಗಲಾರಂಭಿಸಿದರು. ಹೀಗಾಗಿ ಈ ಗಣೇಶ ಗಲಭೆಗೆ ನಾಯಕರ ಉಪಸ್ಥಿತಿಗೆ ಕಾರಣವಾಯಿತೆನ್ನಬಹುದು. ಗಲಭೆ ನಡೆದ ಎಲ್ಲಾ ಘಟನೆಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧. ಗಲಭೆಯ ಮೊದಲ ಹಂತ (ನಾಯಕರ ಬಂಧನ)

೨. ಗಲಭೆಯಲ್ಲಿ ಪಾತ್ರ

೩. ಕೋಮು ಗಲಭೆಯ ಕೊನೆಯ ಹಂತ

ಗಲಭೆಯ ಮೊದಲ ಹಂತ

ಹೀಗೆ ಪತ್ರಿಕೆ ಹಾಗೂ ವದಂತಿಗಳಿಂದ ಈ ಸುದ್ದಿಯು ನಗರದಲ್ಲಿ ಪ್ರಚುರಗೊಂಡ ನಂತರ ೨೩.೦೭.೧೯೨೮ರಂದು ಎಚ್.ವಿ. ಸುಬ್ರಹ್ಮಣ್ಯಂರವರು ಭಾಷಣ ಮಾಡಿದ್ದರು. ಅಧಿಕೃತವಾಗಿ ೨೮ರಂದು ಬೆಳಿಗ್ಗೆ ೧೦.೩೦ರ ಹೊತ್ತಿಗೆ ಸುಬ್ರಹ್ಮಣ್ಯಂರವರ ನಾಯಕತ್ವದಲ್ಲಿ ಚಳವಳಿಯು ಆರಂಭವಾಯಿತು.[೧] ಶಾಲೆಯ ಮುಖ್ಯೋಪಧ್ಯಾಯರು ಶಾಲೆಗೆ ಬರುತ್ತಿದ್ದ ಹಾಗೆಯೇ ವಿದ್ಯಾರ್ಥಿಗಳು ಶಾಲೆಯ ಮುಂಭಾಗದಲ್ಲಿ ಗುಂಪು-ಗುಂಪಾಗಿ ಸೇರಿಕೊಂಡು "ನಮ್ಮ ಗಣೇಶನನ್ನು ಪುನಃ ಪ್ರತಿಷ್ಠಾಪನೆ ಮಾಡಿ ಇಲ್ಲದಿದ್ದರೆ ನಾವು ಶಾಲೆಗೆಯೊಳಗೆ ಬರುವುದಿಲ್ಲ, ಎಂದು ಜೋರಾಗಿ ಕೂಗುತ್ತಾ ಗಲಾಟೆ ಆರಂಭಿಸಿದರು. ಮುಖ್ಯೋಪಾಧ್ಯಾರು ವಿದ್ಯಾರ್ಥಿಗಳಿಗೆ ಎಷ್ಟೋ ರೀತಿಯಲ್ಲಿ ಬುದ್ಧಿವಾದ ಹೇಳಿದರು. ಆದರೂ ವಿದ್ಯಾರ್ಥಿಗಳು ಜಗ್ಗಲಿಲ್ಲ. ಹೀಗಾಗಿ ಮುಖ್ಯೋಪಾಧ್ಯಾಯರು ಹೊಸ ಮಾರ್ಕೆಟ್ಟಿನಲ್ಲಿದ್ದ ಪೊಲೀಸ್ ಸ್ಟೇಷನ್ನಿಗೆ ಹೋಗಿ ಫಿರ್ಯಾದು ದಾಖಲು ಮಾಡಿದರು.[೨] ತಕ್ಷಣವೇ ಪೊಲೀಸ್ ಇನ್ಸ್‌ಪೆಕ್ಟರು ತಮ್ಮ ಸಿಬ್ಬಂದಿಯೊಡನೆ ಎ.ವಿ. ಸ್ಕೂಲಿಗೆ ಧಾವಿಸಿ ಬಂದರು. ಇನ್ಸ್‌ಪೆಕ್ಟರ್ ಅವರು ತಮ್ಮ ಕೆಲವು ಕಾನ್‌ಸ್ಟೇಬಲ್‌ಗಳನ್ನು ಶಾಲೆಯ ಬಳಿ ಕಾವಲು ಹಾಕಿ, ಮೆರವಣಿಗೆ ಹೊರಟಿದ್ದ ವಿದ್ಯಾರ್ಥಿಗಳನ್ನು ಹಿಂಬಾಲಿಸಿದರು. ಮೆರವಣಿಗೆ ಚಿಕ್ಕಪೇಟೆಯ ಕಡೆಗೆ ಹೊರಟಿತು.

ಪುನಃ ಅದೇ ಪೊಲೀಸ್ ಇನ್ಸ್‌ಪೆಕ್ಟರ್ ೨೮ ರಂದು ಮಧ್ಯಾಹ್ನ ಒಂದೂಕಾಲು ಗಂಟೆಯ ಸಮಯದಲ್ಲಿ ಚಳವಳಿಯ ನಾಯಕ ಎಚ್.ವಿ. ಸುಬ್ರಹ್ಮಣ್ಯಂರವರು ಮೈಸೂರು ಬ್ಯಾಂಕ್ ಬಳಿ ಮತ್ತೊಂದು ವಿದ್ಯಾರ್ಥಿಗುಂಪಿನ ಜೊತೆಯಲ್ಲಿ ಹೋಗುತ್ತಿದ್ದುದನ್ನು ಕಂಡರು. ಈ ಗುಂಪು ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಛೇರಿಯ ಕಡೆಗೆ ಹೋಗುತ್ತಿತ್ತು. ಈ ವಿದ್ಯಾರ್ಥಿ ಚಳವಳಿಯ ವಿದ್ಯಮಾನಗಳನ್ನು ಇನ್ಸ್‌ಪೆಕ್ಟರ್‌ರವರು ಸಿಟಿ ಪೊಲೀಸ್ ಸೂಪರಿಡೆಂಟ್(ಎ.ಎಸ್.ಪಿ)ರವರಿಗೆ ವಿವರವಾಗಿ ತಿಳಿಸಿದರು. ಎ.ಎಸ್.ಪಿ.ಯವರು ವಿಷಯಗಳೆಲ್ಲವನ್ನು ಸಂಗ್ರಹಿಸಿ ವರದಿ ಮಾಡಬೇಕೆಂದು ಆಜ್ಞೆ ಮಾಡಿ ಈ ಕೆಲಸಕ್ಕಾಗಿ ಒಬ್ಬ ಸಬ್ ಇನ್ಸ್‌ಪೆಕ್ಟರ್‌ನನ್ನು ನೇಮಿಸಿದರು.[೩]

ಆ ದಿನ ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿನ ಒಟ್ಟು ೩೪೪ ವಿದ್ಯಾರ್ಥಿಗಳಲ್ಲಿ ಶಾಲೆಗೆ ಹಾಜರಾಗಿದ್ದವರು ಕೇವಲ ೪೯ ವಿದ್ಯಾರ್ಥಿಗಳು ಮಾತ್ರ, ಮತ್ತೆ ೨೭.೦೮.೨೮

ರಂದು ಬೆಳಿಗ್ಗೆ ಹತ್ತೂವರೆ ಗಂಟೆಗೆ ಸರಿಯಾಗಿ ವಿದ್ಯಾರ್ಥಿಗಳೆಲ್ಲರೂ ಶಾಲೆಯ ಮುಂದೆ ಗುಂಪುಗೂಡಿದರು. ಈ ದಿನದ ಚಳವಳಿಗೆ ಎಚ್.ವಿ. ಸುಬ್ರಹ್ಮಣ್ಯಂರವರ ಜೊತೆಗೆ ರಾಮ್‌ಲಾಲ್ ತಿವಾರಿಯವರು ಮುಂದಾಳುತನ ವಹಿಸಿದ್ದರು. ಈ ವಿದ್ಯಾರ್ಥಿಗಳು ದಾರಿಯಲ್ಲಿ ಹೋಗುವವರನ್ನೆಲ್ಲಾ ಅಡ್ಡಗಟ್ಟುವುದು, ಇತರೆ ಶಾಲೆಯ ವಿದ್ಯಾರ್ಥಿಗಳನ್ನು ತಮ್ಮ ಜೊತೆಗೆ ಸೇರುವಂತೆ ಒತ್ತಾಯ ಪಡಿಸುವುದು ಮುಂತಾದ ಕಾರ್ಯಗಳಲ್ಲಿ ತೊಡಗಿದ್ದರು. ಹೀಗೆ ಹೊರಟಿದ್ದ ವಿದ್ಯಾರ್ಥಿಗಳು ಮಾಮೂಲ್ ಪೇಟೆಯ ಸ್ಕೂಲಿಗೆ ಬಂದರು. ಈ ಶಾಲೆ ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿನ ಒಂದು ಶಾಖೆಯಾಗಿತ್ತು. ಅಲ್ಲಿನ ವಿದ್ಯಾರ್ಥಿಗಳನ್ನು ತಮ್ಮೊಡನೆ ಸೇರಬೇಕೆಂದು ಒತ್ತಾಯಪಡಿಸಿ ಕೂಗಾಡುತ್ತ ಕಲ್ಲುಗಳನ್ನು ತೂರಿದರು. ಆ ನಂತರ ಚಿಕ್ಕಪೇಟೆ, ಬಳೆಪೇಟೆಗಳಲ್ಲೆಲ್ಲಾ ಸುತ್ತಾಡಿದರೂ ಗಾಂಧಿನಗರದ ಆರ್ಯ ವಿದ್ಯಾ ಶಾಲೆಯ ಹುಡುಗರು ಶಾಲೆಬಿಟ್ಟು ಹೊರಗೆ ಬರಲಿಲ್ಲ. ಆ ಶಾಲೆಯ ಮುಖ್ಯೋಪಧ್ಯಾಯರು ಅದಕ್ಕೆ ಅವಕಾಶ ಕೊಡಲಿಲ್ಲ. ಆ ನಂತರ ಸುಬ್ರಹ್ಮಣ್ಯಂರವರು ತಮ್ಮ ಜೊತೆಯಲ್ಲಿದ್ದ ಹುಡುಗರನ್ನೆಲ್ಲಾ ಧರ್ಮಾಂಬುಧಿ ಕೆರೆಯ ಬಳಿ ಇಂದಿನ ಬಸ್ ನಿಲ್ದಾಣ ಇರುವ ಮುನ್ಸಿಪಲ್ ಪಾರ್ಕಿಗೆ (ಚಿಕ್ಕಲಾಲ್‌ಬಾಗ್) ಅಥವಾ "ತುಳಸಿ ತೋಟ"ಕ್ಕೆ ಕರೆದುಕೊಂಡು ಹೋದರು. ಅಲ್ಲಿ ರಾಮಲಾಲ್ ತಿವಾರಿ ಮತ್ತು ಸುಬ್ರಮಣ್ಯಂರವರು ಭಾಷಣಗಳನ್ನು ಮಾಡಿ ಗಣೇಶನ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡುವವರೆಗೂ ವಿದ್ಯಾರ್ಥಿಗಳು ಶಾಲೆಗೆ ಹೋಗಕೂಡದೆಂದೂ, ಎಷ್ಟೇ ಕಷ್ಟ ಬಂದರೂ ದೃತಿಗೆಡದೆ ಮುನ್ನುಗ್ಗಬೇಕೆಂದು, ಹಠ ಹಿಡಿದು ಕಾರ್ಯಸಾಧನೆ ಮಾಡಬೇಕೆಂದು ಹುರಿದುಂಬಿಸಿದರು.

ಇಷ್ಟಾದ ಮೇಲೆ ವಿದ್ಯಾರ್ಥಿಗಳು ಚಳವಳಿ ನಡೆಸುತ್ತಾ ಅಕ್ಕಿಪೇಟೆ, ಅರಳೇಪೇಟೆಗಳ ಮೂಲಕ ಚಾಮರಾಜಪೇಟೆಗೆ ಬಂದು ಅಲ್ಲಿಂದ ಎ.ವಿ. ಸ್ಕೂಲಿಗೆ ಬಂದರು. ಅಲ್ಲಿಯೂ ಪ್ರತಿಭಟನಾ ಸಭೆ ನಡೆಯಿತು. ಅಲ್ಲಿದ್ದ ಕೋಟೆಯ ಎ.ವಿ. ಸ್ಕೂಲಿಗೆ ಬಂದು, ಅಲ್ಲಿನ ಮುಖ್ಯೋಪಧ್ಯಾಯರಿಗೆ ವಿಷಯವನ್ನೆಲ್ಲಾ ವಿವರಿಸಿದರು. ಆದರೆ ಅವರು ಕೇಳುವಷ್ಟು ಕೇಳಿ ತಮಗೂ ಈ ಚಳವಳಿಗೂ ಯಾವ ಸಂಬಂಧವೂ ಇಲ್ಲವೆಂದು ಹೇಳಿಬಿಟ್ಟರು. ಅಲ್ಲದೆ ತಮ್ಮ ವಿದ್ಯಾರ್ಥಿಗಳನ್ನು ಹೊರಗೆ ಬಿಡುವುದಿಲ್ಲವೆಂದೂ ಖಡಾಖಂಡಿತವಾಗಿ ಹೇಳಿದರು. ಕೂಡಲೇ ಚಳವಳಿ ನಡೆಸುತ್ತಿದ್ದ ವಿದ್ಯಾರ್ಥಿಗಳು ಸಿಟ್ಟಿಗೆದ್ದು ತರಗತಿಗಳಿಗೆ ಕಲ್ಲು ತೂರಿದರು. ಆಗ ಮುಖ್ಯೋಪಧ್ಯಾಯರು ರಜಾ ಘೋಷಿಸಿ ಹುಡುಗರನ್ನೆಲ್ಲಾ ಹೊರಕ್ಕೆ ಹಾಕಿದ್ದೂ ಉಂಟು. ಅಲ್ಲದೆ ಶಾಲೆಯನ್ನು ಮುಚ್ಚಿ ಪಿ.ಎಸ್.ಐ. ಅವರಿಗೆ ವರದಿ ಮಾಡಿದರು. ಆಗ ಸಮಯ ಮೂರುವರೆ ಘಂಟೆಯಾಗಿತ್ತು. ಆ ನಂತರ ಸುಬ್ರಹ್ಮಣ್ಯಂರವರು ಕೋಟೆ ಹೈಸ್ಕೂಲ್

ಮುಂಭಾಗದಲ್ಲಿದ್ದ ಪೊಲೀಸ್ ಪೆರೇಡ್ ಮೈದಾನದಲ್ಲಿ ವಿದ್ಯಾರ್ಥಿಗಳನ್ನೆಲ್ಲಾ ಸಭೆ ಸೇರಿಸಿದರು. ಆ ಸಭೆಯಲ್ಲಿ ಭಾಷಣ ಮಾಡುತ್ತಾ ಸುಲ್ತಾನ್ ಪೇಟೆಯ ಸ್ಕೂಲಿನಲ್ಲಿ ಗಣೇಶನ ವಿಗ್ರಹವನ್ನು ಎತ್ತಿಟ್ಟಿರುವ ವಿಚಾರ ಪುನಃ ಪ್ರತಿಷ್ಠಾಪನೆ ಮಾಡಲು ಅಧಿಕಾರಿಗಳು ನಿರಾಕರಿಸುತ್ತಿರುವ ವಿಚಾರ, ಹಿಂದೂ ಧರ್ಮಕ್ಕೆ ಆಗಿರುವ ದೊಡ್ಡ ಅನ್ಯಾಯ ಮೊದಲಾದ ವಿಚಾರಗಳನ್ನು ಅಲೆ-ಅಲೆಯಾಗಿ ವಿವರಿಸುತ್ತಾ ಸ್ಫೂರ್ತಿಯುತವಾದ ಭಾಷಣ ಮಾಡಿದರು.[೬] ಈ ವೀರಾವೇಶದ ಭಾಷಣವನ್ನು ಕೇಳಿದ ಹುಡುಗರು ಪಟ್ಟು ಹಿಡಿದು ಈ ಉದ್ದೇಶ ಸಾಧನೆಗಾಗಿ ಎಷ್ಟು ಕಷ್ಟವನ್ನಾದರೂ ಸಹಿಸಿಕೊಳ್ಳುತ್ತೇವೆಂದು ಒಕ್ಕೊರಲಿನಿಂದ ಕೂಗಿ ಶಪಥಕೊಟ್ಟರು. ಪುನಃ ಅದೇ ದಿನ ಆರೂವರೆಗೆ ಗಂಟೆಗೆ ಸಿಟಿ ಮಾರ್ಕೆಟ್ ಮುಂಭಾಗದಲ್ಲಿ ಸಭೆ ಸೇರಬೇಕೆಂದು ತೀರ್ಮಾನವಾಯಿತು. ಇಷ್ಟಾದ ಮೇಲೆ ವಿದ್ಯಾರ್ಥಿಗಳೂ, ಚಳವಳಿಯ ನಾಯಕರೂ ತಮ್ಮ ಮನೆಗಳಿಗೆ ಹೊರಟು ಹೋದರು. ಸಂಜೆ ಸಾರ್ವಜನಿಕರೂ ಸಭೆ ಸೇರಿದರು. ನಾಯಕರಾದ ಎಚ್.ವಿ. ಸುಬ್ರಹ್ಮಣ್ಯಂ, ರಾಮಲಾಲ್ ತಿವಾರಿ ಮತ್ತು ಜೆ. ಭೀಮರಾವ್ ಮೊದಲಾದವರು ಭಾಷಣಗಳನ್ನು ಮಾಡಿ ವಿದ್ಯಾರ್ಥಿಗಳನ್ನು ಮತ್ತೆ ಹುರಿದುಂಬಿಸಿದರು.

ಜುಲೈ ತಿಂಗಳ ೨೯ರಂದು ಆನೇಕಲ್ ಸರ್ವಬಟ್ಟ ಎಂಬಾತನು ಬಂದು ಈ ಚಳವಳಿಯಲ್ಲಿ ಭಾಗವಹಿಸಿದನು. ಅದೇ ದಿನ ಸುಬ್ರಹ್ಮಣ್ಯಂ ಮತ್ತು ಭೀಮರಾವ್‌ರವರನ್ನು ದಸ್ತಗಿರಿ ಮಾಡಿದರು. ದಸ್ತಗಿರಿಯಾದ ಕೂಡಲೇ ಅವರನ್ನು ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು.[೭] ಈ ಸುದ್ದಿ ತಿಳಿದೊಡನೆ ವಿದ್ಯಾರ್ಥಿಗಳು ಬೊಬ್ಬೆ ಹಾಕುತ್ತಾ, ಕೂಗಾಡುತ್ತಾ, ಜೈಕಾರ ಮಾಡುತ್ತಾ ಪೊಲೀಸ್ ಸೂಪರಿಡೆಂಟ್ ಕಛೇರಿಗೆ ನುಗ್ಗಿದರು.

ಈ ಸುದ್ದಿಗಳೆಲ್ಲಾ ತಿಳಿದೊಡನೆ ತಿರುಮಲೆ ತಾತಾಚಾರ್ಯ ಶರ್ಮರವರು ಸುಲ್ತಾನ್ ಪೇಟೆ ಶಾಲೆಯ ಬಳಿ ಬಂದು ವಿದ್ಯಾರ್ಥಿಗಳೊಡನೆ ಚರ್ಚಿಸಿ ಹೆಚ್ಚು ವಿಷಯ ಗಳನ್ನೆಲ್ಲಾ ತಿಳಿದುಕೊಂಡರು. ಬಳಿಕ ವಿದ್ಯಾರ್ಥಿಗಳಲ್ಲಾ ಸಭೆ ಸೇರಿ ಭಾಷಣಗಳನ್ನು ಮಾಡಿದರು. ಸರ್ಕಾರದ ರೀತಿ-ನೀತಿಗಳನ್ನು ಖಂಡಿಸಿದ್ದೂ ಉಂಟು. ಈ ಭಾಷಣ ಮುಗಿದ ತರುವಾಯ ಲಾಯರ್ ಕೆ. ಶಂಕರ ನಾರಾಯಣರಾಯರು (ಮುಂದೆ ಜಸ್ಟೀಸ್ ಆದವರು) ನಡೆದ ವಿದ್ಯಾಮಾನಗಳನ್ನು ತಿಳಿದುಕೊಂಡು ದಿವಾನರನ್ನು ಭೇಟಿಮಾಡಿ ಚರ್ಚೆ ನಡೆಸುವುದಾಗಿ ತಿಳಿಸಿದರು. ಅದರಂತೆ ಅವರು ಮಿರ್ಜಾ ಇಸ್ಮೆಯಿಲ್‌ರವರನ್ನು ಭೇಟಿ ಮಾಡಿ ಘಟನೆಯ ಸಂದರ್ಭಗಳನ್ನು ವಿವರಿಸಿ, ನಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ಆದರೆ ದಿವಾನರು ರಾಜ್ಯ ಸಂಚಾರದ(Tour) ಕಾರ್ಯಕ್ರಮದಿಂದಾಗಿ ಬೆಂಗಳೂರನ್ನು ಬಿಟ್ಟು ಹೊರಟಿದ್ದರಿಂದ ಅಷ್ಟೇನೂ ಉಪಯೋಗವಾಗಲಿಲ್ಲ.

ಕೆ. ಶಂಕರನಾರಾಯಣರು ಪ್ರಥಮ ಕೌನ್ಸಿಲರ್ ಆಗಿದ್ದ ಜಾರ್ಜ್ ಮ್ಯಾಥನ್‌ರವರನ್ನೇ ಕಂಡು ಪರಿಸ್ಥಿತಿಯನ್ನು ವಿವರಿಸಿದ್ದರು. ಆಗ ಮಾಥ್ಯನ್‌ರವರೇ ಸುಲ್ತಾನ್ ಪೇಟೆಯ ಸ್ಕೂಲಿನ ಬಳಿಗೆ ಬರಬೇಕಾಯಿತು. ಅಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ, ಗಲಭೆ, ಗದ್ದಲಗಳನ್ನು ಖುದ್ದಾಗಿ ಕಂಡರು. ಅಲ್ಲಿ ಸೇರಿದ್ದವರೆಲ್ಲ ಒಟ್ಟಾಗಿ ಮ್ಯಾಥನ್ ಅವರನ್ನು ಸುತ್ತುಗಟ್ಟಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕೆಂದೂ, ಮುಖಂಡರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದೂ ವಿನಂತಿಸಿಕೊಂಡರು. ಮ್ಯಾಥನ್‌ರವರು ಎಲ್ಲರ ಹೇಳಿಕೆಗಳನ್ನು ಸಾಮಾಧಾನದಿಂದ ಕೇಳಿದ ಬಳಿಕ ಗಣಪತಿ ವಿಗ್ರಹವನ್ನು ಪುನಃ ಸ್ವಸ್ಥಾನದಲ್ಲಿಯೇ ಪ್ರತಿಷ್ಠಾಪನೆ ಮಾಡಿಸುವುದಾಗಿ ಭರವಸೆಯಿತ್ತರು.[೮]

ಅದೇ ದಿನ ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಾದ ಕೆ.ಟಿ. ಸುದರ್ಶನಂ ಅಯ್ಯಂಗಾರರು ಸುಲ್ತಾನ್ ಪೇಟೆಯ ಸ್ಕೂಲಿಗೆ ಬಂದು ಮುಖ್ಯೋಪಧ್ಯಾಯರನ್ನು ಕರೆಯಿಸಿ ಗಣಪತಿ ವಿಗ್ರಹ ವನ್ನು ಹೊರಕ್ಕೆ ತಂದಿರಿಸಬೇಕೆಂದು ಆಜ್ಞಾಪಿಸಿದರು.[೯] ಅಂತೂ ಕತ್ತಲಲ್ಲಿದ್ದ ಗಣಪತಿ ಹೊರಗೆ ಬಂದ ವಿದ್ಯಾರ್ಥಿಗಳೆಲ್ಲ ಸೇರಿ ಆ ವಿಗ್ರಹವನ್ನು ಸ್ವಸ್ಥಾನದಲ್ಲಿ ಇರಿಸಿದರು. ಇಲ್ಲಿಗೆ ಚಳವಳಿ ಅರ್ಧಭಾಗ ಯಶಸ್ವಿಯಾದಂತಾಯಿತು.

ಗಲಭೆಯಲ್ಲಿ ದಿವಾನರ ಪಾತ್ರ

ಈ ಗಲಭೆಗೆ ಮುನ್ನವೇ ದಿವಾನರ ಆಪ್ತ ಕಾರ್ಯದರ್ಶಿಗಳಿಂದ ವಿದ್ಯಾ ಇಲಾಖಾ ನಿರ್ದೇಶಕರಿಗೆ ಗಣೇಶನಿಗೆ ಗೂಡನ್ನು ಕಟ್ಟದಿರಲು ಸೂಚನೆ ಬಂದಿತ್ತು. ಆ ಮೂಲಕ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಈ ಗಲಭೆಯಲ್ಲಿ ಆರಂಭದಿಂದಲೇ ದಿವಾನರ ಹೆಸರು ಕೇಳಿಬರುತ್ತಲಿದ್ದಿತ್ತು. ಸಾಮಾನ್ಯವಾಗಿ ದಿವಾನರು ಓರ್ವ ಮುಸ್ಲಿಮರಾಗಿಲ್ಲದೆ ಇದ್ದಲ್ಲಿ ಈ ಗಲಭೆಯ ಸ್ವರೂಪದ ಚಿತ್ರಣ ಯಾವ ಮಾದರಿಯನ್ನು ಪಡೆಯುತ್ತಿತ್ತೊ ಗೊತ್ತಿಲ್ಲ. ಆದರೆ ವಿಚಾರಣೆಯಲ್ಲಿ ಹಿಂದುಗಳ ಆಕ್ರೋಶ ಕೇವಲ ಅಬ್ಬಾಸ್ ಖಾನ್‌ರ ಕಡೆಗೆ ಬೆರಳು ಮಾಡಿ ತೋರಿಸುತ್ತಿತ್ತೇ ಹೊರತು ದಿವಾನರನ್ನಲ್ಲ ಎಂಬುದು ಮುಖ್ಯ ಸಂಗತಿ. ಆದರೂ ವರದಿಯಲ್ಲಿ ಮುಸ್ಲಿಂಕೋಮಿನ ಸಾಕ್ಷಿಗಳು ಹೇಳುವಂತೆ ಗಲಭೆಗೆ ಕಾರಣ ಮಿರ್ಜಾರವರನ್ನು ವಿರೋಧಿಸುವುದೇ ಆಗಿತ್ತು. ಮಹಾರಾಜರ ಬೆಳ್ಳಿಹಬ್ಬಕ್ಕೆ ವಿಶೇಷ ಮಾನ್ಯತೆ ನೀಡಿ ಆನೆಯ ಮೇಲೆ ಕೂಡಲು ಅವಕಾಶ ನೀಡಿದ್ದು ಜನರ ಸೂಕ್ಷ್ಮ ಭಾವನೆಗಳನ್ನು ಕೆರಳಿಸಿದ್ದವು ಎಂದು ಅದೇ ವರದಿಯಲ್ಲಿ ಉಲ್ಲೇಖಿಸಲಾಗಿದೆ(Report para-52).

ಅಂತೆಯೇ ಮುಸ್ಲಿಂಕೋಮಿನ ಸಾಕ್ಷಿಗಳು ಹೇಳಿಕೆಗಳನ್ನು ನೀಡಿರುವ ಹಿನ್ನೆಲೆಯಲ್ಲಿ, ದಿವಾನರನ್ನು ವಿದ್ಯಾರ್ಥಿಗಳ ನಾಯಕರು ತೆಗಳುತ್ತಿದ್ದರು ಎಂಬುದಾಗಿ ೧೯೨೮ ಜೂಲೈ ೨೫ ರ ಸಂಜೆ ಮಾರ್ಕೆಟ್ ಚೌಕ್‌ದಲ್ಲಿ ಸುಬ್ರಹ್ಮಣ್ಯಂರವರು ಭಾಷಣ ಮಾಡುತ್ತಾ ದಿವಾನರನ್ನು ಹಾಗೂ ಅಂದಿನ ಅವರ ಆಡಳಿತವನ್ನು ತೆಗಳಿದರು.(Report Para 35) ಅಲ್ಲದೇ ದಿವಾನರ ಮನೆಯ ಹತ್ತಿರ ನಡೆದ ಗಲಾಟೆಯು ಸರ್ಕಾರದ ಹಾಗೂ ದಿವಾನರ ಹೆಸರನ್ನು ಕೆಡಿಸಲು ಪೂರ್ವಯೋಜಿತ ಚಟುವಟಿಕೆಯಾಗಿದೆ ಎಂಬುದನ್ನು ಮುಸ್ಲಿಂ ಜನರ ಅಂಬೋಣ ಎನ್ನುವಂಥ ವಾದಗಳನ್ನು ವರದಿಯೊಂದು ತಿರಸ್ಕರಿಸಿದೆ.

ಏನೇ ಇರಲಿ ವಿದ್ಯಾರ್ಥಿಗಳು ದಿವಾನರನ್ನು ಕಂಡು ತಮ್ಮ ಅಹವಾಲುಗಳನ್ನು ನೀಡಿದ್ದು ಗಮನಾರ್ಹ. ಅವರು ಒಪ್ಪದಿದ್ದುದರಿಂದ ಅವರ ಮನೆಯ ಮುಂದೆಯೆ ಕಲ್ಲು ತೂರಾಟ, ಗಿಡಕೀಳುವ ಮೊದಲಾದ ಚಟುವಟಿಕೆಗಳನ್ನು ನಡೆಸಿದ್ದು ದಾಖಲಾಗಿದೆ. ಒಟ್ಟಿನಲ್ಲಿ ಈ ಗಲಾಟೆಯೇ ದಿವಾನರನ್ನೇ ಕೇಂದ್ರವನ್ನಾಗಿ ಒಳಗೊಂಡಿತ್ತು. ದಿವಾನರ ಅಂತಿಮ ನಿರ್ಧಾರವೇ(ನಾಯಕರ ಬಿಡುಗಡೆ) ವಿದ್ಯಾರ್ಥಿಗಳ ಸತ್ಯಾಗ್ರಹವು ಪೂರ್ಣಗೊಳ್ಳಲು ಕಾರಣ ಆಯಿತು ಎಂಬುದಾಗಿದೆ.

ದಿನಾಂಕ ೩೦.೭.೨೮ ರಂದು ಸುಲ್ತಾನ್ ಪೇಟೆ ಶಾಲೆಯ ವಿದ್ಯಾರ್ಥಿಗಳು ಶಾಲೆಗೆ ಹೋಗದೆ, ಸತ್ಯಾಗ್ರಹ ಮಾಡಿ ಮೆರವಣಿಗೆಗೆ ಹೊರಟರು. ಕೋಟೆ ಹೈಸ್ಕೂಲ್ ಬಳಿ ಬಂದೊಡನೆ ಅವರ ಆಗ್ರಹಕ್ಕೆ ಮಣಿದು ಆ ಶಾಲೆಯ ವಿದ್ಯಾರ್ಥಿಗಳೂ ಮೆರವಣಿಗೆಯಲ್ಲಿ ಸೇರಿಕೊಂಡರು. ಈ ಸಂದರ್ಭದಲ್ಲಿ ಕೋಟೆ ಹೈಸ್ಕೂಲ್ ಮುಖ್ಯೋಪಾಧ್ಯಾಯರು ನಗರದ ಎ.ಎಸ್.ಪಿ. ಅವರಿಗೆ ಟೆಲಿಫೋನ್ ಮಾಡಿದರು. ಅವರು ಬಂದು ವಿದ್ಯಾರ್ಥಿಗಳಿಗೆ ಬುದ್ದಿವಾದ ಹೇಳಿದ್ದು ವ್ಯರ್ಥವೇ ಆಯಿತು. ಸತ್ಯಾಗ್ರಹಿಗಳು ಅವರ ಮಾತುಗಳಿಗೆ ಜಗ್ಗಲಿಲ್ಲ. ಅಷ್ಟರಲ್ಲಿ ಅತ್ತ ಲಂಡನ್ ಮಿಶನ್ ಸ್ಕೂಲ್ ಮತ್ತು ವೆಸ್ಲಿಯನ್ ಮಿಷನ್ ಸ್ಕೂಲ್‌ಗಳಲ್ಲಿಯೂ ವಿದ್ಯಾರ್ಥಿಗಳ ಗಲಭೆ ಹೆಚ್ಚಾಗಿ ಆ ಶಾಲೆಗಳನ್ನು ಮುಚ್ಚಲಾಯಿತೆಂದೂ ಸುದ್ದಿ ಬಂದಿತು. ಹೀಗೆ ಹಲವಾರು ಶಾಲೆಗಳ ವಿದ್ಯಾರ್ಥಿಗಳು ಒಟ್ಟಾಗಿ ಸೆಂಟ್ರಲ್ ಕಾಲೇಜಿನ ಬಳಿಗೆ ಹೋದರು. ಅಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ಪ್ರೊಫೆಸರುಗಳನ್ನು ಕಂಡು ವಿದ್ಯಾರ್ಥಿಗಳ ಪರವಾಗಿ ಹೋರಾಡಬೇಕೆಂದೂ, ಸಹಾನುಭೂತಿ ತೋರಬೇಕೆಂದೂ ಬೇಡಿಕೊಂಡರು. ಅನಂತರ ಮಧ್ಯಾಹ್ನ ಒಂದೂವರೆ ಗಂಟೆಯ ವೇಳೆಗೆ ಸೆಂಟ್ರಲ್ ಕಾಲೇಜಿನ ಮುಂಭಾಗದಲ್ಲಿಯೇ ಬಹಿರಂಗ ಸಭೆ ಸೇರಿತು. ವಿದ್ಯಾರ್ಥಿಗಳ ಮುಖಂಡರು ಮಾತನಾಡಿ, ವಿದ್ಯಾರ್ಥಿಗಳ ಪರವಾಗಿ ಹೋರಾಡಲು ಬಂದ ಖಾಸಗಿ ಮುಖಂಡರನ್ನು ಸೆರೆಮನೆಗೆ ಅಟ್ಟಿರುವುದು ತುಂಬಾ

ಅನ್ಯಾಯ, ಖಂಡನೀಯ ಎಂದು ಘೋಷಿಸಿದರು. ಹೀಗೆ ಚಳವಳಿಗಾರರು ಎಲ್ಲಾ ಶಾಲೆಗಳನ್ನೂ ಮುಚ್ಚಿಸುವ ಪ್ರಯತ್ನದಲ್ಲಿ ಯಶಸ್ವಿಗಳಾಗಿ ಸತ್ಯಾಗ್ರಹವನ್ನು ಮುಂದುವರೆಸಿದ್ದು ಗಮನಾರ್ಹ. ತಮ್ಮ ನಾಯಕರನ್ನು ಬಿಡುಗಡೆ ಮಾಡಲೇಬೇಕೆಂದು ಈ ಚಳವಳಿಗಾರರು ಪಟ್ಟು ಹಿಡಿದು ಕುಳಿತಿದ್ದರು. ಆದರೆ ಬಿಡುಗಡೆ ಮಾಡಲು ಸಾಧ್ಯವೇ ಇಲ್ಲವೆಂದು ಸರ್ಕಾರವು ಪಟ್ಟು ಹಿಡಿದು ಕುಳಿತದ್ದು ಸಂಘರ್ಷಕ್ಕೆ ಎಡೆಮಾಡಿಕೊಟ್ಟಿತ್ತು.

ನಾಯಕರ ಬಿಡುಗಡೆಗೆ ಸತ್ಯಾಗ್ರಹಿಗಳ ಪ್ರಯತ್ನ ನಡೆದೇ ಇತ್ತು. ಕೊನೆಗೊಮ್ಮೆ ಎಲ್ಲರು ಸೆಂಟ್ರಲ್ ಜೈಲ್ ಬಳಿಗೆ ಬಂದು ಸೇರಿದರು. (ಸುಮಾರು ೫೦೦-೬೦೦ ಮಂದಿ) ಕೆಲವರ ಕೈಯಲ್ಲಿ ಮರದ ರೆಂಬೆಗಳಿದ್ದವು. ಇನ್ನು ಕೆಲವರ ಕೈಯಲ್ಲಿ ಕಲ್ಲುಗಳಿದ್ದವು. ಜೈಲಿನ ಬಳಿ ಸಿಕ್ಕಾಪಟ್ಟೆ ಕಲ್ಲುಗಳನ್ನು ತೂರಿದರು. ಕೆಲವರು ಅಲ್ಲಿದ್ದ ತೋಟದೊಳಕ್ಕೆ ನುಗ್ಗಿ ಸಿಕ್ಕಾಪಟ್ಟೆ ಕಲ್ಲುಗಳನ್ನು ತೂರಿದರು. ಕೆಲವರು ಅಲ್ಲಿದ್ದ ತೋಟದೊಳಕ್ಕೆ ನುಗ್ಗಿ ಗಿಡ-ಮರಗಳನ್ನು ಧ್ವಂಸ ಮಾಡಿದರು. ಪುಂಡಾಟ ಸಹಿಸಲು ಅಸಾಧ್ಯವಾಯಿತು. ಮಿಡ್ಲ್ ಸ್ಕೂಲ್ ಮಕ್ಕಳ ಪುಂಡಾಟ ಹೆಚ್ಚಿತು. ಆಗ ಜೈಲ್ ಸೂಪರಿಡೆಂಟರು ಹೊರಗೆ ಬಂದು "ನೀವು ಸಿಟಿ ಮ್ಯಾಜಿಸ್ಟ್ರೇಟರಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಆದೇಶ ತರುವವರೆಗೂ ನಿಮ್ಮ ನಾಯಕರನ್ನು ಹೊರಕ್ಕೆ ಬಿಡಲು ಸಾಧ್ಯವಿಲ್ಲ"[೧೨] ಎಂದು ಸ್ಪಷ್ಟವಾಗಿ ಹೇಳಿ ಬಿಟ್ಟರು. ಆದರೂ ವಿದ್ಯಾರ್ಥಿಗಳು ಕೇಳಲಿಲ್ಲ; ಬಂದೂಕಿನಿಂದ ಗುಂಡು ಹಾರಿಸುವುದಾಗಿ ಬೆದರಿಸಿದರೂ, ಹುಡುಗರು ಜಗ್ಗಲಿಲ್ಲ. ಅನಂತರ ಹುಡುಗರೆಲ್ಲಾ ದಿವಾನರ ವಾಸಸ್ಥಳವಾದ ಕಾರ್ಲ್‌ಟನ್ ಹೌಸ್-೧ರ ಕಡೆಗೆ ಘೋಷಣೆಗಳನ್ನು ಕೂಗುತ್ತಾ ಹೊರಟರು. ಇದನ್ನು ಕಂಡು ಜೈಲ್ ಸೂಪರಿಡೆಂಟ್‌ರವರೂ, ಮೂವರು ಜೈಲ್ ವಾರ್ಡನ್‌ಗಳೂ ಅವರ ಹಿಂದೆಯೇ ಸೈಕಲ್‌ಗಳ ಮೇಲೆ ಹೊರಟರು. ದಿವಾನರು ಆಗತಾನೆ ಮನೆಯಿಂದ ಹೊರಟಿದ್ದರು. ಚಳವಳಿಯ ಹುಡುಗರು ಕಾರಿಗೆ ಅಡ್ಡಲಾಗಿ ನಿಂತು ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಈ ದೃಶ್ಯವನ್ನು ಜೈಲ್ ಸೂಪರಿಡೆಂಟರೂ ನೋಡಿದರು. ಆ ವೇಳೆಯಲ್ಲಿ ದಿವಾನರ ಜೊತೆಯಲ್ಲಿ ಅವರ ಮಗ ಮತ್ತು ಭಾವ ಮೈದುನರೂ ಇದ್ದರು. ಚಳವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳೆಲ್ಲಾ ಇನ್ನೂ ಚಿಕ್ಕವರು ವಯಸ್ಸು ಸುಮಾರು ೧೨ ರಿಂದ ೧೪ ಇರಬಹುದು. ಕೆಲವು ಹುಡುಗರು ದಿವಾನರ ಬಳಿ ತಮ್ಮ ಅಹವಾಲನ್ನು ಹೇಳಿಕೊಳ್ಳುತ್ತಿದ್ದರೆ ಇನ್ನು ಕೆಲವು ಹುಡುಗರು ತೋಟದೊಳಕ್ಕೆ ನುಗ್ಗಿ ಗಿಡಗಳನ್ನು ಕಿತ್ತರು. ಮತ್ತೆ ಕೆಲವರು ಕಿಟಕಿಗಳನ್ನೇ ಕೀಳಲು ಹೊರಟಿದ್ದರು. ದಿವಾನರ ಎದುರಿನಲ್ಲಿಯೇ ಬಾಲಕರ ಕಪಿಚೇಷ್ಟೆಗಳ ಪ್ರದರ್ಶನವಾಗುತ್ತಿತ್ತು. ಆ ವಿದ್ಯಾರ್ಥಿಗಳಲ್ಲಿ ಒಬ್ಬನು ತನ್ನ ಬೆನ್ನಿಗೆ ಗಣಪತಿ ಸತ್ಯಾಗ್ರಹಕ್ಕೆ ಹಣ ನೀಡಿ ಎಂದು ಬರೆದಿದ್ದ ಒಂದು ರಟ್ಟನ್ನು

ಅಥವಾ ಬೋರ್ಡನ್ನು ತಗುಲಿಸಿಕೊಂಡು ಅತ್ತಿತ್ತ ತಿರುಗಾಡುತ್ತಿದ್ದ[೧೩] ಅಷ್ಟು ಹೊತ್ತಿಗೆ ಮಂತ್ರಾಲೋಚನೆಯ ಮೂರನೆಯ ಸದಸ್ಯರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ನ್ಯಾಯಾಧೀಶರು, ನಗರ ಪೊಲೀಸ್ ಸೂಪರಿಂಟೆಂಡೆಂಟರೂ, ಐ.ಜಿ.ಪಿ. ಅವರು ದಿವಾನರನ್ನು ಕಾಣಲು ಬಂದರು. ಜಿಲ್ಲಾ ನ್ಯಾಯಾಧೀಶರಿಗಂತೂ ಅಲ್ಲಿನ ದೃಶ್ಯವನ್ನು ಕಂಡು ರೇಗಿಹೋಯಿತು. ಅವರು ತಕ್ಷಣವೇ ಸೇನಾಧಿಕಾರಿಗಳಿಗೆ ಟೆಲಿಫೋನ್ ಮಾಡಿ ಸೇನೆಯ ಒಂದು ತುಕ್ಕಡಿಯನ್ನು ಕಳುಹಿಸುವಂತೆ ತಿಳಿಸಿದರು.

ವಿದ್ಯಾರ್ಥಿಗಳಾದರೋ ತಮ್ಮ ನಾಯಕರನ್ನು ಬಿಡುಗಡೆ ಮಾಡಲೇಬೇಕೆಂದು ಪಟ್ಟು ಹಿಡಿದೇ ಇದ್ದರು. ಹಿರಿಯ ಅಧಿಕಾರಿಗಳು ಎಷ್ಟು ಬುದ್ಧಿವಾದ ಹೇಳಿದರೂ ತಮ್ಮ ಹಠವನ್ನು ಬಿಡಲಿಲ್ಲ. ತಮ್ಮ ಮನೆಯ ಮುಂದೆ ಯಾರನ್ನೂ ದಸ್ತಗಿರಿ ಮಾಡಕೂಡದೆಂದು ದಿವಾನರು ಕಟ್ಟಪ್ಪಣೆ ಮಾಡಿದ್ದರಿಂದ ಯಾರನ್ನೂ ದಸ್ತಗಿರಿ ಮಾಡವಂತೆಯೂ ಇರಲಿಲ್ಲ. ಸ್ವಲ್ಪ ಹೊತ್ತಿನ ಬಳಿಕ ದಿವಾನರು ತಮ್ಮ ಕಾರಿನಲ್ಲಿ ಕುಳಿತು ಅಠಾರಾ ಕಛೇರಿಯ ೧ರ ಕಡೆಗೆ ಹೊರಟರು. ಆಗ ಕೆಲವು ಹುಡುಗರು ಅವರ ಕಾರಿಗೆ ಅಡ್ಡವಾಗಿ ನೆಲದ ಮೇಲೆ ಮಲಗಿಬಿಟ್ಟರು. ಅಲ್ಲಿದ್ದ ಆಳುಗಳು ಆ ಹುಡುಗರನ್ನು ಅನಾಮತ್ತಾಗಿ ಎತ್ತಿ ದೂರ ಬಿಟ್ಟ ಮೇಲೆ ದಿವಾನರ ಕಾರು ಮುಂದೆ ಹೊರಟಿತು. ಈ ಮಧ್ಯೆ ಜಿಲ್ಲಾ ನ್ಯಾಯಾಧೀಶರ ಟೆಲಿಫೋನ್ ಆದೇಶದ ಮೇರೆಗೆ ಕುದುರೆಗಳ ಸಮೇತ ಸೈನಿಕರೂ ಹಾಜರಾದರು. ಅವರು ಹುಡುಗರನ್ನು ಹೆದರಿಸಿ, ಬೆದರಿಸಿ ಕಾಂಪೌಂಡಿನಿಂದಾಚೆಗೆ ಅಟ್ಟಿದರು. ಈ ಗಡಿಬಿಡಿಯಲ್ಲಿ ಒಬ್ಬ ಹುಡುಗನಿಗೆ ತುಂಬಾ ಗಾಯಗಳಾಗಿ ಕೆಳಕ್ಕೆ ಉರುಳಿದನು.

"ನಮ್ಮ ನಾಯಕರನ್ನು ಕೂಡಲೇ ಬಿಡುಗಡೆ ಮಾಡಿ" ಎಂದು ಕೂಗಾಡುತ್ತಾ ಹುಡುಗರು ಪುನಃ ಸೆಂಟ್ರಲ್ ಜೈಲಿನ ಕಡೆಗೆ ಹೊರಟರು. ಆಗ ಮಧ್ಯಾಹ್ನ ಎರಡೂವರೆ ಗಂಟೆಯ ಸಮಯ. ಇದನ್ನರಿತು ಜಿಲ್ಲಾ ನ್ಯಾಯಾಧೀಶರು ಮೈಸೂರು ಲ್ಯಾನ್ಸರ್ಸ್ ಪಡೆಯ ನಾಯಕರಾದ ಮೀರ್ ತುರಾಬ್ ಅಲಿಯವರಿಗೆ ಜೈಲಿನ ಸುತ್ತ ಭದ್ರವಾದ ಕಾವಲು ವ್ಯವಸ್ಥೆಮಾಡಬೇಕೆಂದು ಆದೇಶವಿತ್ತರು. ಅದರಂತೆ ಯಲಹಂಕ ಗೇಟಿನಲ್ಲಿ, ಕಾಂತರಾಜ ಅರಸ್ ಸರ್ಕಲ್‌ನಲ್ಲಿ, ರೈಲ್ವೆ ನಿಲ್ದಾಣದ ರಸ್ತೆಯಲ್ಲಿ ಮೈಸೂರು ಲಾನ್ಸರ್ಸ್ ಪಡೆಗಳು ಕಾವಲು ಕಾಯತೊಡಗಿದವು.

ಕೃಷ್ಣರಾಜೇಂದ್ರ ವೃತ್ತದವರೆಗೂ ಸೈನಿಕರ ಕಾವಲು ಬಿಗಿಯಾಗಿತ್ತು. ಈ ಬಾರಿಯೂ ಹುಡುಗರು ಯಥಾಪ್ರಕಾರ ಕಲ್ಲು ತೂರಾಟದಲ್ಲಿ ನಿರತರಾಗಿದ್ದರು. ಮಿಲಿಟರಿಯವರು ಕಾವಲಿದ್ದುದು ಬಹುಶಃ ಅವರ ಗಮನಕ್ಕೆ ಬಾರದೇ ಹೋಗಿರಬೇಕು. ಈ ಕಲ್ಲು ತೂರಾಟದಲ್ಲಿ

ಸೆರೆಮನೆಗಳ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು, ಜೈಲ್ ಸೂಪರಿಂಟೆಂಡೆಂಟರು, ಜೈಲಿನ ಇನ್ನೂ ಕೆಲವು ಅಧಿಕಾರಿಗಳು ಹಾಗೂ ಕೆಲವು ನೌಕರರಿಗೆ ಪೆಟ್ಟಾಯಿತು. ಅಲ್ಲದೆ ಹನ್ನೊಂದು ಮಂದಿಗೆ ತೀವ್ರಗಾಯಗಳೇ ಆಗಿದ್ದವು. ಇಷ್ಟು ಹೊತ್ತಿಗೆ ಜೈಲಿನ ಮುಂಭಾಗದಲ್ಲಿ ಸುಮಾರು ಮೂರುಸಾವಿರ ಮಂದಿ ಬಾಲಕರೂ, ಸಾವಿರಾರು ಮಂದಿ ಹಿರಿಯರೂ ಜಮಾಯಿಸಿದ್ದರು. ಕೆಲವು ಹುಡುಗರು ಅಠಾರಾ ಕಛೇರಿಯ ಮುಂದೆ ಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಿ ಅಲ್ಲಿಗೆ ಹೊರಟರು. ಅಠಾರ ಕಛೇರಿಯ ಹೆಬ್ಬಾಗಿಲಿನ ಮುಂದೆಯೇ ಅವರೆಲ್ಲ ಧರಣಿ ಕುಳಿತರು. ಈ ಹುಡುಗರನ್ನು ತಹಬಂದಿಗೆ ತರುವುದೇ ಕಷ್ಟವಾಗಿ ಇನ್ನೊಂದು ಲ್ಯಾನ್ಸರ್ಸ್ ಪಡೆಯನ್ನು ತರಿಸಿಕೊಳ್ಳಬೇಕಾಯಿತು. ೧೧೦ ಜನ ಲ್ಯಾನ್ಸರ್ಸ್‌ಗಳು(ಕದುರೆ ಸವಾರರು) ಹುಡುಗರನ್ನು ಓಡಿಸುವ ಕೆಲಸದಲ್ಲಿ ನಿರತರಾದರು. ಇಲ್ಲಿ ಸೈನಿಕರು ಹಾಗೂ ವಿದ್ಯಾರ್ಥಿಗಳ ಮಧ್ಯೆಯೂ ಗಲಾಟೆ ಆರಂಭವಾಯಿತು. ವಿದ್ಯಾರ್ಥಿಗಳು ಕಲ್ಲು ತೂರಲಾರಂಭಿಸಿದರು. ಕೊನೆಗೆ ಈ ಘರ್ಷಣೆಯಲ್ಲಿ ಮೈಲಾರಯ್ಯ ಎಂಬ ಹುಡುಗನು ಸೈನಿಕರ ಕುದುರೆಯ ಕಾಲ್ತುಳಿತಕ್ಕೆ ಸಿಕ್ಕಿ ತೀವ್ರವಾಗಿ ಗಾಯಗೊಂಡ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅವನ ಒಂದು ಕಾಲನ್ನು ತೆಗೆದು ಹಾಕುವುದು ಅನಿವಾರ್ಯ ಎಂಬ ಸುದ್ದಿಗಳು ಹರಡಿದವು.[೧೪]

ಮಧ್ಯಾಹ್ನದ ವೇಳೆಗೆ ಗದ್ದಲ ಹೆಚ್ಚಾದುದರಿಂದ ಇನ್ನೊಂದು ಲ್ಯಾನ್ಸರ್ಸ್ ಪಡೆಯನ್ನು ತರಿಸಿಕೊಳ್ಳಬೇಕಾಯಿತು. ಅಠಾರಾ ಕಛೇರಿಯ ಕಾವಲಿಗಾಗಿ ಅರವತ್ತೊಂದು ಜನ ಕಾಲಾಳುಗಳನ್ನು ಹಾಗೂ ನಾಲ್ಕು ಮಂದಿ ಕ್ಯಾಪ್ಟನ್‌ಗಳನ್ನೂ ಬಳಸಿಕೊಳ್ಳಬೇಕಾಯಿತು. ಇವರ ಜೊತೆಗೆ ಪೊಲೀಸಿನವರೂ, ರಿಸರ್ವ್ ಪೊಲೀಸ್‌ನವರೂ ಇದ್ದರು.

ಮಧ್ಯಾಹ್ನ ಸುಮಾರು ಮೂರು ಗಂಟೆಯ ಹೊತ್ತಿಗೆ ಲ್ಯಾನ್ಸರ್ಸ್ ದಳದವರಿಗೂ ಹುಡುಗರಿಗೂ (ಚಳವಳಿ ನಡೆಸುತ್ತಿದ್ದ ಬಾಲಕರು) ಜಿಲ್ಲಾ ಕಛೇರಿಯ ಕಾಂಪೌಂಡಿನಲ್ಲಿ ಘರ್ಷಣೆ ಆರಂಭವಾಯಿತು. ಅವೆನ್ಯೂ ರಸ್ತೆ ಮತ್ತು ಯಲಹಂಕ ಗೇಟ್ ಬಳಿ ಕಲ್ಲುಗಳ ತೂರಾಟ ಹೆಚ್ಚಾಯಿತು. ಆಗ ಒಬ್ಬ ಪೊಲೀಸ್ ಅಧಿಕಾರಿಯು ಗೌರ್ನಮೆಂಟ್ ಅಡ್ವೋಕೇಟ್ ಆಗಿದ್ದ ಕೆ. ಶಂಕರನಾರಾಯಣರಾಯರಿಗೆ ಟೆಲಿಫೋನ್ ಮಾಡಿದರು. ಅವರು ತಕ್ಷಣವೇ ಈ ಸುದ್ದಿಯನ್ನು ದಿವಾನರಿಗೆ ತಿಳಿಸಿದರು. ಅವರು ತಮ್ಮ ಪರವಾಗಿ ಜಿಲ್ಲಾ ನ್ಯಾಯಾಧೀಶರನ್ನು(ಡೆಪ್ಯುಟಿ ಕಮೀಷನರ್) ಕಳುಹಿಸಿದರು. ಗಲಭೆ ನಡೆಯುವಾಗ ಶಂಕರ ನಾರಾಯಣರಾಯರೂ ಅಲ್ಲಿಗೆ ಬಂದರು. ಬಿ.ಕೆ. ಗರುಡಾಚಾರ್ಯರ ಸಲಹೆಯಂತೆ ಜಿಲ್ಲಾ ನ್ಯಾಯಾಧೀಶರು ಕುದುರೆ ಸವಾರರನ್ನು ಹಿಂದಕ್ಕೆ ಕಳುಹಿಸಿದರು. ಅವರು ಹಿಂದುರುಗಿ

ಹೋಗುತ್ತಿದ್ದಾಗ ಹುಡುಗರು ಪುನಃ ಅವರ ಮೇಲೆ ಕಲ್ಲುಗಳನ್ನು ತೂರಿದರು. ಇದರಿಂದಾಗಿ ಕಾಂತರಾಜ ಅರಸ್ ಸರ್ಕಲ್‌ನಲ್ಲಿ ಪುನಃ ಘರ್ಷಣೆ ಆರಂಭವಾಯಿತು. ಈ ಅವಾಂತರದಲ್ಲಿ ಕೆ. ಶಂಕರನಾರಾಯಣರಾಯರು ಹುಡುಗರಿಗೆ ಬುದ್ಧಿವಾದ ಹೇಳಲು ಪ್ರಯತ್ನಿಸುತ್ತಿದ್ದಾಗ ಒಬ್ಬ ಕುದುರೆ ಸವಾರನು ಅವರ ಕಡೆಗೇ ತನ್ನ ಕುದುರೆಯನ್ನು ನುಗ್ಗಿಸಿದ.

ಈ ವೇಳಗೆ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಇ.ಪಿ. ಮೆಟ್ಕಾಫ್‌ರವರೂ ಬಂದರು, ಕಲ್ಲುಗಳ ಸುರಿಮಳೆಯನ್ನು ಕಣ್ಣಾರೆ ಕಂಡರು. ಜನಸ್ತೋಮ ಹೆಚ್ಚುತ್ತಲೇ ಹೋಯಿತು. ಲ್ಯಾನ್ಸರ್ಸ್ ಪಡೆ ಪುನಃ ಬರಬೇಕಾಯಿತು. ಸಂಜೆ ಐದೂವರೆಯವರೆಗೂ ಪರಿಸ್ಥಿತಿ ಹತೋಟಿಗೆ ಬರಲಿಲ್ಲ. ಆ ವೇಳೆಗೆ ಮೇಜರ್ ಕೃಷ್ಣೇ ಅರಸ್ ಅವರು ಕಾಂತರಾಜ ಅರಸ್ ಸರ್ಕಲ್ಲಿಗೆ ಬಂದು ಅಲ್ಲಿದ್ದ ಕುದುರೆ ಸವಾರರನ್ನು ಕಾರ್ಲ್ಟನ್ ಬಂಗಲೆಯ ಕಡೆಗೆ ಕರೆದೊಯ್ದರು. ಆಗ ಗಲಭೆ ಸ್ವಲ್ಪ ಕಡಿಮೆಯಾಯಿತು.

ಇಷ್ಟೆಲ್ಲಾ ನಡೆಯುತ್ತಿರುವಾಗಲೇ ಕೆಲವು ಖಾಸಗಿ ವ್ಯಕ್ತಿಗಳು ದಿವಾನರನ್ನು ಭೇಟಿಮಾಡಿ, ವಿದ್ಯಾರ್ಥಿಗಳ ಕೋರಿಕೆಯನ್ನು ಮನ್ನಿಸಿ, ನಾಯಕರನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿದರು. ಪ್ರಮುಖ ಲಾಯರ್‌ಗಳೂ ದಿವಾನರನ್ನು ಕಂಡು ಏನಾದರೂ ಮಾಡಿ ಗಲಭೆಯನ್ನು ಅಡಗಿಸಬೇಕೆಂದು ಬೇಡಿಕೊಂಡರು. ಇಷ್ಟೆಲ್ಲಾ ಆದ ಮೇಲೆ ದಿವಾನರು ಜಿಲ್ಲಾ ನ್ಯಾಯಾಧೀಶರಿಗೆ ಟೆಲಿಫೋನ್ ಮಾಡಿ ವಿದ್ಯಾರ್ಥಿಗಳ ಪರವಾಗಿ ಹೋರಾಟ ನಡೆಸಿದ ನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಬಹುದೆಂದು ಸೂಚನೆ ಕೊಟ್ಟರು.[೧೫] ಈ ವಿಷಯವನ್ನು ನ್ಯಾಯಾಧೀಶರು ಸಿಟಿ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ನಾಯಕರ ಬಿಡುಗಡೆಗೆ ಸಿದ್ಧತೆಗಳು ನಡೆದವು. ಹೀಗಾಗಿ ವಿದ್ಯಾರ್ಥಿಗಳು ಚಳವಳಿ ನಡೆಸಿದುದು ಫಲಕಾರಿ ಆಯಿತು. ಸಿಟಿ ಮ್ಯಾಜಿಸ್ಟ್ರೇಟರು ಜೈಲಿನಲ್ಲಿದ್ದ ನಾಯಕರಿಂದ ಮುಚ್ಚಳಿಕೆ ಬರೆಸಿಕೊಂಡು ಸಂಜೆ ಆರೂವರೆ ಗಂಟೆಯ ಹೊತ್ತಿಗೆ ಎಲ್ಲರನ್ನೂ ಬಿಡುಗಡೆ ಮಾಡಿದರು. ಆದರೆ ವಿದ್ಯಾರ್ಥಿಗಳಿಗೆ ಕೆಲವು ಷರತ್ತುಗಳನ್ನೂ ಹಾಕಿದರು. ಅದೇನೆಂದರೆ "ವಿದ್ಯಾರ್ಥಿಗಳು ಪುನಃ ಗದ್ದಲ, ಗಲಭೆಗಳನ್ನು ನಡೆಸಕೂಡದು, ತುಂಟಾಟಮಾಡದೆ ತಂತಮ್ಮ ಮನೆಗಳಿಗೆ ಹೋಗಬೇಕು. ಎಂದಿನಂತೆ ತರಗತಿಗಳಿಗೆ ಹೋಗಿ ವ್ಯಾಸಂಗದಲ್ಲಿ ನಿರತರಾಗಬೇಕು"[೧೬] ಎಂದು ವಿದ್ಯಾರ್ಥಿಗಳು ಹಿರಿಯರ ಬಲವಂತಕ್ಕೆ ತಲೆಬಾಗುವ ರೀತಿಯಲ್ಲಿ ಒಪ್ಪಿಕೊಂಡರು.

ಕೋಮು ಗಲಭೆಯ ಕೊನೆಯ ಹಂತ

ಈ ಘಟನೆಯು ಕೊನೆಯದಾಗಿ 'ಕೋಮು'ಗಲಭೆಯ ಸ್ವರೂಪವನ್ನು ಪಡೆಯಿತು. ಗಲಭೆಯಲ್ಲಿನ ಅನೇಕ ವಿದ್ಯಮಾನಗಳು ಮುಸ್ಲಿಂ ಹಾಗೂ ಹಿಂದೂಗಳ ಭಿನ್ನಾಭಿಪ್ರಾಯಗಳು

ತಾರಕಕ್ಕೇರಿ ಕೋಮುಗಲಾಟೆಯಲ್ಲಿ ಅಂತ್ಯವನ್ನು ಕಂಡವು. ವಿಗ್ರಹದ ಮರು ಪ್ರತಿಷ್ಠಾಪನೆಯ ದಿನ (ಜುಲೈ ೩೦)ರಂದು ಮುಸ್ಲಿಂ ಸಮುದಾಯದವರು ಅಬ್ಬಾಸ್‌ಖಾನ್‌ರ ಬೆಂಬಲವಾಗಿ (ರಕ್ಷಣೆಗಾಗಿ) ಅವರ ಮನೆಯ ಹತ್ತಿರ ಇರಬಹುದೇನೋ? ಎಂಬ ಗುಮಾನಿಗಳಿಂದ ಗಲಾಟೆಯಂತೂ ಆಯಿತು.

ವಿದ್ಯಾರ್ಥಿಗಳು ತಾವು ಒಪ್ಪಿಕೊಂಡಿದ್ದುದನ್ನು ಸಂಪೂರ್ಣವಾಗಿ ಮರೆತರು. ಕೂಗುತ್ತ, ಚೀರುತ್ತ, ಧರ್ಮಾಂಬುಧಿ ಕೆರೆಯ ಏರಿಯ ಮೇಲೆ ಹೊರಟು ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿಗೆ ಬಂದರು. ಅಷ್ಟು ಹೊತ್ತಿಗೆ ಕಟ್ಟು ಮಸ್ತಾದ ಆಳುಗಳು ಕೆಲವರು ಸುಬ್ರಹ್ಮಣ್ಯಂ ಮತ್ತು ರಾಮಲಾಲ್ ತಿವಾರಿಯವರನ್ನು ಭುಜದ ಮೇಲೆ ಕೂಡಿಸಿಕೊಂಡು ದೊಡ್ಡಪೇಟೆ, ಚಿಕ್ಕಪೇಟೆಗಳ ಮಾರ್ಗವಾಗಿ ಸ್ಕೂಲಿನ ಬಳಿಗೆ ಬಂದರು. ಅನಂತರ ಸ್ವಲ್ಪ ಖಾಯಿಲೆಯಾಗಿದ್ದ ಭೀಮರಾಯರನ್ನು ಡಾ.ಗೋಪಾಲಕೃಷ್ಣರಾವ್ ಎಂಬುವವರು ತಮ್ಮ ಕಾರಿನಲ್ಲಿಯೆ ಕರೆತಂದರು. ಅದೇ ಸಮಯಕ್ಕೆ ಸುಪ್ರಸಿದ್ಧ ಲಾಯರ್ ಬೇಲೂರು ಶ್ರೀನಿವಾಸ ಅಯ್ಯಂಗಾರ‍್ಯರು ಧರ್ಮಾಂಬುಧಿ ಕೆರೆ ಅಂಗಳಕ್ಕೆ ಬಂದರು. ಅಲ್ಲಿ ಅವರ ಭಾಷಣಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸಭೆ ನಡೆಯಲಿಲ್ಲ. ಶ್ರೀನಿವಾಸ ಅಯ್ಯಂಗಾರ‍್ಯರು ಅಲ್ಲಿಂದ ಹೊರಟು ಐದು ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿ ವಿಕ್ಟೋರಿಯಾ ಆಸ್ಪತ್ರೆಯ ಕಡೆಗೆ ಬಂದರು. ಆಸ್ಪತ್ರೆಯ ಒಳಕ್ಕೆ ಯಾರನ್ನೂ ಬಿಡಲಿಲ್ಲ. ಹೀಗಾಗಿ ಅವರೂ ಸುಲ್ತಾನ್ ಪೇಟೆಯ ಸ್ಕೂಲಿಗೆ ಬರಬೇಕಾಯಿತು. ಸ್ಕೂಲಿನ ಬಳಿ ಅಯ್ಯಂಗಾರರು ತಮ್ಮ 'ಓಪನ್ ಕಾರ್‌ನಲ್ಲಿ' ನಿಂತುಕೊಂಡೇ ಭಾಷಣ ಮಾಡಿದರು.[೭]

ಚಳವಳಿಯ ನಾಯಕರು ಬಿಡುಗಡೆ ಹೊಂದಿದರೆಂದು ಎಲ್ಲರೂ ಸಂತೋಷ ಸಂಭ್ರಮಗಳಲ್ಲಿ ಮುಳುಗಿರುವಾಗಲೇ ಮುಸ್ಲಿಂ ಬಾಂಧವರು ಅದಕ್ಕೆ ತಮ್ಮದೇ ಆದ ಒಂದು ಹೊಸ ಅರ್ಥವನ್ನು ಕಲ್ಪಿಸಿದರು. ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ ಮತ್ತು ಪೊಲೀಸ್ ಸ್ಟೇಷನ್ ರಸ್ತೆ ಎರಡೂ ಸೇರುವ ಕಡೆ ಇದ್ದ ಒಂದು ಸೈಕಲ್ ಷಾಪ್ ಬಳಿ ಕೆಲವು ಮುಸ್ಲಿಮರು ಗುಂಪುಕೂಡಿದ್ದರು.[೮] ಹೀಗೆಯೇ ಅಲ್ಲಲ್ಲಿ ಸಣ್ಣ ಪುಟ್ಟ ಗುಂಪುಗಳು ಕೂಡಿದ್ದವು. ಈ ಅಂಶವನ್ನು ಪೊಲೀಸರೂ ಗಮನಿಸಿದ್ದಿರಬೇಕು. ಆದ್ದರಿಂದಲೇ ಭಾಷಣ ನಡೆಯುತ್ತಿದ್ದ ಸ್ಥಳದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶೇಷಾದ್ರಿಯವರೂ, ಪೊಲೀಸ್ ಕಾನ್‌ಸ್ಟೇಬಲ್‌ಗಳು ಅತ್ತಿತ್ತ ತಿರುಗಾಡುತ್ತ ಅನಾಹುತಕ್ಕೆಡೆಗೊಡದಂತೆ ನೋಡಿಕೊಳ್ಳುತ್ತಿದ್ದರು. ಸಾರ್ಜೆಂಟ್ ವೆಂಕಟೇಶಯ್ಯ, ಕಾನ್‌ಸ್ಟೇಬಲ್ ನರಸಿಂಹಯ್ಯ ಮತ್ತು ಮರಿಯಪ್ಪ ಸ್ಕೂಲ್ ಗೇಟ್ ಬಳಿಯೇ ಇದ್ದು ಮೇಲುಸ್ತುವಾರಿ ಮಾಡುತ್ತಿದ್ದರು. ಇತರ ಕಾನ್‌ಸ್ಟೇಬಲ್‌ಗಳೂ ನಾಲ್ವಂದ್ ವಾಡಿ

ಚೌಕದಲ್ಲಿ ಉಸ್ತುವಾರಿ ಕೆಲಸದಲ್ಲಿ ನಿರತರಾಗಿದ್ದರು. ಶಾಲೆಯ ಮುಂದೆ ಸುಮಾರು ಐದು ಸಾವಿರ ಮಂದಿ ಸೇರಿದ್ದರೆಂದು ಒಂದು ಅಂದಾಜು. ಸ್ವಲ್ಪ ಹೊತ್ತಾದ ಬಳಿಕ ಚಳವಳಿಯ ನಾಯಕರು ಶಾಲೆಯ ಆವರಣದೊಳಕ್ಕೆ ಗಣಪತಿ ಗೂಡಿನ ಬಳಿಗೆ ಹೋದರು. ದೇವರಿಗೆ 'ಮಂಗಳಾರತಿಯ ಏರ್ಪಾಟಾಗಿತ್ತು. ಕೇವಲ ಐದು ನಿಮಷಗಳಲ್ಲಿ ಗಣಪತಿಯ ಪೂಜೆ, ಮಂಗಳಾರತಿ ನಡೆಯಿತು. ಎಲ್ಲರಿಗೂ ಪ್ರಸಾದ ವಿನಿಯೋಗವಾಯಿತು.

ಗಣಪತಿಯ ಪ್ರತಿಷ್ಠಾಪನೆಯೇನೋ ಆಯಿತು. ಆದರೆ ಇಷ್ಟಕ್ಕೆ ಕಥೆ ಮುಕ್ತಾಯಗೊಳ್ಳಲಿಲ್ಲ. ಹಿಂದೂಗಳ ಈ ಸಂತೋಷ ಸಂಭ್ರಮಗಳು ಮುಸ್ಲಿಂ ಬಾಂಧವರನ್ನು ಕೆರಳಿಸಿತು. ಲಾರಿಗಳನ್ನು ಹಿಡಿದು 'ದೀನ್ ದೀನ್, ಅಲ್ಲಾಹೋ ಅಕ್ಬರ್' ಎಂದು ಕೂಗುತ್ತ, ಮೈಮರೆತ್ತಿದ್ದ ನಿರಾಯುಧ ಗುಂಪಿನ ಮೇಲೆ ಬಂದು ಹೊಡೆದರು. ಯಾರೋ ಗುಂಪಿನತ್ತ ಗುಂಡು ಹಾರಿಸಿದರು.[೧೯] ಶಾಲೆಯ ಎದುರಿಗಿನ ಸೈಕಲ್ ಷಾಪ್‌ನಿಂದ ಗುಂಡುಗಳು ಹಾರಿಸಿದರು. ಗಾಬರಿಗೊಂಡ ಗುಂಪು ಚೆಲ್ಲಾಪಿಲ್ಲಿಯಾಗಿ ಓಡಿತು. ಚಂದ್ರರಾಜ ಎಂಬ ಬಾಲಕನ ಬುಜಕ್ಕೆ ಗುಂಡಿನೇಟು ತಾಗಿತು. ಈ ಘಟನೆಯನ್ನು ಪ್ರತ್ಯಕ್ಷವಾಗಿ ಕಂಡಿದ್ದಾಗಿ ಎಚ್.ಕೆ.ವೀರಣ್ಣಗೌಡರು ತಮ್ಮ ಪುಸ್ತಕ ಬದುಕು-ಮೆಲುಕಿನಲ್ಲಿ ಬರೆದಿದ್ದಾರೆ. ಹಿಂದೆಯೇ ಗದ್ದಲ ಆರಂಭವಾಯಿತು. ಹೊಡೆದಾಟ ಬಡಿದಾಟಗಳು ನಡೆದವು. ೭೪ ಮಂದಿ ಹಿಂದೂಗಳೂ, ಇಬ್ಬರು ಮುಸಲ್ಮಾನರೂ ತೀವ್ರವಾಗಿ ಗಾಯಗೊಂಡರು. ಹೀಗೆ ಗಣಪತಿ ಗಲಭೆಯು ಹಿಂದೂ-ಮುಸ್ಲಿಂ ಘರ್ಷಣೆಯು ಕೋಮುಗಲಭೆಯಗಿ ರೂಪತಾಳಿತು.

ಗಾಯಾಳುಗಳನ್ನು ಸಮೀಪದಲ್ಲಿಯೇ ಇರುವ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಈ ಸುದ್ದಿ ತಿಳಿದೊಡನೆ ಬೆಂಗಳೂರಿನ ಜಿಲ್ಲಾ ಡೆಪ್ಯುಟಿ ಕಮಿಷನರ್, ಜಿಲ್ಲಾ ಪೋಲೀಸ್ ಸೂಪರಿಡೆಂಟರು ಮೊದಲಾದವರು ಗಲಭೆ ನಡೆದ ಪ್ರದೇಶಕ್ಕೆ ಧಾವಿಸಿದರು. ಹಿಂದೆಯೇ ಮೇಜರ್ ಕೃಷ್ಣೇ ಅರಸರೂ ಬಂದರು. ಆಗ ರಾತ್ರಿ ಎಂಟು ಗಂಟೆಯಾಗಿತ್ತು. ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯ ಉತ್ತರ ಭಾಗದಲ್ಲಿ ಹಿಂದೂಗಳೂ, ದಕ್ಷಿಣ ಭಾಗದಲ್ಲಿ ಮುಸ್ಲಿಮರೂ ಜಮಾಯಿಸಿದರು. ಮುಸ್ಲಿಮರ ಕೈಯಲ್ಲಿ ಲಾಠಿಗಳೂ, ಆಯುಧಗಳೂ, ಹಿಂದೂಗಳ ಕೈಯಲ್ಲಿ ಕಲ್ಲುಗಳೂ ಇದ್ದವು. ಮುನಿಸಿಪಲ್ ಪ್ರೆಸಿಡೆಂಟ್ ಅಬ್ಬಾಸ್ ಖಾನರ ಮನೆಯ ಮುಂಬೆ ಬಹಳ ಜನ ಸೇರಿದರು. ಇದ್ದಕ್ಕಿಂದ್ದಂತೆ ಎಲ್ಲಿಂದಲೋ ಗುಂಡು ಹಾರತೊಡಗಿತು. ಧರ್ಮ ಪ್ರಕಾಶ ಚಂದ್ರೇಗೌಡರು ಈ ಗಲಭೆಯ ಸಂಗತಿಯನ್ನು ದಿವಾನರಿಗೆ ತಿಳಿಸಿದರು. ಪ್ರತಿಯಾಗಿ ದಿವಾನರು ಲ್ಯಾನ್ಸರ್ಸ್ ಪಡೆಗಳನ್ನು ರವಾನಿಸಿದರು. ಆಗ ಸಮಯ ಎಂಟೂವರೆ ಗಂಟೆಯಾಗಿತ್ತು.

ಈ ಸಂದರ್ಭವನ್ನು ಡಿ.ವಿ.ಜಿ. ಯವರು ಹೀಗೆ ವರ್ಣಿಸಿದ್ದಾರೆ : "ಈ ಪೂಜೆ ನಡೆದ ಜಾಗ ಅಬ್ಬಾಸ್ ಖಾನರ ಮನೆಯ ಹೆಬ್ಬಾಗಿಲಿನ ನೇರ ಎದುರಿಗೆ ಇತ್ತು. ಈ ಕಾರಣದಿಂದ ಮುಸಲ್ಮಾನರ ಜನಕ್ಕೆ ಅಸಮಾಧಾನವುಂಟಾಯಿತೆಂದೂ ಕೆಲವರ ಹೇಳಿಕೆ. ಕಾರಣ ಹೇಗೋ ದೊಂಬಿ ನಡೆದದ್ದಂತೂ ನಿಜ, ಬಹು ದೊಡ್ಡ ದೊಂಬಿ, ಬಡಿದಾಟವೂ ನಡೆಯಿತು. ಯಾರೋ ಗುಂಡು ಹಾರಿಸಿದರೆಂದೂ, ಪ್ರಾಣ ನಷ್ಟವಾಯಿತೆಂದೂ, ಜನ ಆಡಿಕೊಂಡರು".

ವಿ.ಎಸ್. ನಾರಾಯಣರಾಯರು ತಮ್ಮ ಗ್ರಂಥದಲ್ಲಿ ಈ ಸಂದರ್ಭವನ್ನು ವರ್ಣಿಸಿರುವ ರೀತಿ ಹೀಗಿದೆ : "ಹಿಂದೂಗಳು ಸಂತೋಷದಿಂದ ಮೈಮರೆತಿದ್ದಾಗ ಕೆಲವು ಕಿಡಿಗೇಡಿ ಮುಸಲ್ಮಾನರು 'ದೀನ್ ದೀನ್' ಎಂದು ಕೂಗುತ್ತಾ ಲಾಠಿ ಹಿಡಿದು ಹಿಂದೂಗಳ ಮೇಲೆ ಬಿದ್ದರು. ಎಲ್ಲಿಂದಲೋ ಗುಂಡು ಹಾರಿಸಲ್ಪಟ್ಟಿತು. ಗಲಭೆ ಇಷ್ಟಕ್ಕೆ ನಿಲ್ಲಲಿಲ್ಲ. ಮಾರನೆಯ ದಿನದಿಂದ ಸಂದು-ಗೊಂದುಗಳಲ್ಲಿ ಏಕಾಂಗಿಯಾಗಿ ಹೋಗುತ್ತಿದ್ದ ಹಿಂದೂಗಳನ್ನು ಮುಸಲ್ಮಾನರು ಹೊಡೆಯತೊಡಗಿದರು. ಇದುವರೆಗೂ ಭಯಗ್ರಸ್ತರಾಗಿ ಓಡಿ ಹೋಗುತ್ತಿದ್ದ ಹಿಂದೂಗಳು ಧೈರ್ಯತಾಳಿ ಸಂಘಟಿತರಾಗಿ ಮುಸಲ್ಮಾನರ ಮೇಲೆ ತಿರುಗಿಬಿದ್ದರು." ಸುಮಾರು ಒಂದು ತಿಂಗಳ ಕಾಲ ಈ ಪ್ರಕ್ಷುಬ್ಧ ಪರಿಸ್ಥಿತಿ ಬೆಂಗಳೂರಿನಲ್ಲಿ ಉಳಿದಿದ್ದುದು ಮಾತ್ರವಲ್ಲದೆ ಸಂಸ್ಥಾನದ ಹೊರ ಪ್ರದೇಶಗಳಿಗೂ ಇದರ ಸೋಂಕು ವ್ಯಾಪಿಸಿತು. ಈ ಗಲಭೆಯ ಕೋಲಾಹಲ ಸುದ್ದಿ ಲಂಡನ್ನಿನ 'ಡೇಲಿ ಮೇಲ್' ಪತ್ರಿಕೆಯಲ್ಲೂ ಪ್ರಕಟಗೊಂಡು ಮೈಸೂರು ಸರ್ಕಾರವನ್ನು ಪೇಚಿಗೆ ಸಿಲುಕಿಸಿತು.[೨೦]

ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ ಗುಂಡು ಹಾರಿಸಲ್ಪಟ್ಟ ಸುದ್ದಿಯನ್ನು ನಿರಾಕರಿಸಿದರು. ಆದರೆ 'ಇಂಡಿಯನ್ ಡೇಲಿ ಮೇಲ್' ಎಂಬ ಬೊಂಬಾಯಿಯಿಂದ ಹೊರಡುತ್ತಿದ್ದ ಪತ್ರಿಕೆಯು ಭುಜದಲ್ಲಿ ಗುಂಡು ಹಾರಿದ್ದ ಚಂದ್ರರಾಜ ಎಂಬ ಬಾಲಕನ ಚಿತ್ರವನ್ನು ಪ್ರಕಟಿಸಿತು. ಆಗ ನ್ಯಾಯವಿಧಾಯಕ ಸಭೆ ನಡೆಯುತ್ತಿತ್ತು. ಇದರಿಂದ ಸುಳ್ಳು ಪ್ರಕಟಣೆ ಹೊರಡಿಸಿದೆ ಎಂಬ ನಿಂದನೆಗೆ ಸರ್ಕಾರ ಒಳಗಾಗಬೇಕಾಯಿತು.[೨೧]

ಸೈನಿಕರು ಬಂದ ಕೂಡಲೇ ಜನಗಳು ದಿಕ್ಕಾಪಾಲಾಗಿ ಓಡಿದರು. ಕುದುರೆ ಸವಾರರು ಇಡೀ ರಾತ್ರಿಯೆಲ್ಲಾ ಬೀದಿಗಳಲ್ಲಿ ಸಂಚರಿಸಿ, ಪರಿಸ್ಥಿತಿಯನ್ನು ಹತೋಟಿಗೆ ತಂದರು. ಆ ದಿನವೆಲ್ಲಾ ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯಲ್ಲಿ ಗದ್ದಲವೋ ಗದ್ದಲ, ಸೈನಿಕರ ಸರ್ಪಕಾವಲು, ಮರುದಿನ ಬೆಳಗಿನ ವೇಳೆಗೆ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಶಾಂತವಾಯಿತು. ಆದರೆ ಸುಳ್ಳು ವದಂತಿಗಳು ಮಾತ್ರ ನಿರಂತರವಾಗಿ ಹರಡಿತ್ತು. 'ಹೆಂಗಸರ ಮಾನಭಂಗ

ಆಗಿದೆಯಂತೆ ; ಹಿಂದೂಗಳು ಬಹಳ ಜನ ಸತ್ತರಂತೆ; ಮಕ್ಕಳ ಕೈಕಾಲು ಮುರಿದಿವೆಯಂತೆ' ಇತ್ಯಾದಿ, ಇತ್ಯಾದಿ.

ಈ ಪೊಳ್ಳು ವದಂತಿಗಳು ಬೆಂಗಳೂರಿನ ದಂಡು ಪ್ರದೇಶಕ್ಕೂ ಮುಟ್ಟಿತು. ಕೂಡಲೇ ನೂರಾರು ಮಂದಿ ಮುಸ್ಲಿಮರು ನಗರದ ಕಡೆಗೆ ಧಾವಿಸಿದರು. ರಾತ್ರಿ ಹನ್ನೊಂದು ಗಂಟೆಯ ವೇಳೆಯಲ್ಲಿ ದಂಡಿನ ಮುಸ್ಲಿಮರು ಪ್ರವಾಹೋಪಾದಿಯಲ್ಲಿ ಸಿಟಿ ಪ್ರದೇಶಕ್ಕೆ ನುಗ್ಗಿಬರುತ್ತಿದ್ದರು. ಪೊಲೀಸ್ ಅಧಿಕಾರಿಗಳು ಅವರಿಗೆಲ್ಲಾ ಸಮಾಧಾನಕರವಾದ ಉತ್ತರಗಳನ್ನು ಕೊಟ್ಟು ಸಮಾಧಾನಪಡಿಸಿ ವಾಪಾಸು ಕಳಿಸಿದರು. ಸೈನ್ಯದ ಅಧಿಕಾರಿಗಳ ಸಲಹೆಯಂತೆ ಅಬ್ಬಾಸ್ ಖಾನರು ರಾತ್ರಿ ಹನ್ನೊಂದೂವರೆಗೆ ತಮ್ಮ ಮನೆಯನ್ನು ಬಿಟ್ಟು ಸಂಸಾರ ಸಮೇತ ಘೋಷಾ ಕಾರಿನಲ್ಲಿ ಹೆಬ್ಬಾಳದಲ್ಲಿದ್ದ ಸೈನಿಕ ಬಂಧುಗಳೊಬ್ಬರ ಮನೆಗೆ ಹೊರಟು ಹೋದರು.

ಮರುದಿನ ಅಂದರೆ ೩೧.೭.೨೮ರಂದು ಸಹ ಜನರಲ್ಲಿ ಭೀತಿ ಮೂಡಿತ್ತು. ಆ ದಿನವೂ ಸಹ ದಂಡು ಪ್ರದೇಶದಿಂದ ಬರುತ್ತಿದ್ದ ಮುಸ್ಲಿಮರನ್ನು ಪೊಲೀಸರು ತಡೆದು ಗಲಭೆಯಾಗದಂತೆ ನೋಡಿಕೊಂಡರು. ಈ ಮಧ್ಯೆ ಅತ್ತ ಬಿನ್ನಿಮಿಲ್ ನೌಕರರು ಮುಸ್ಲಿಂ ಗೋರಿಗಳನ್ನು ಅಗೆದು ಹಾಕುತ್ತಾರೆಂಬ ವದಂತಿ ಹಬ್ಬಿತ್ತು. ಡೆಪ್ಯುಟಿ ಕಮೀಷನರು ಕೂಡಲೇ ಬಿನ್ನಿ ಮಿಲ್ಲಿಗೆ ಹೋಗಿ ವಿಚಾರಿಸಲಾಗಿ ಅಂತಹ ದುರುದ್ದೇಶಗಳಾವುವೂ ಇಲ್ಲವೆಂಬುದು ಖಚಿತವಾಯಿತು.

ಪೊಲೀಸ್ ಅಧಿಕಾರಿಗಳು, ಡೆಪ್ಯುಟಿ ಕಮೀಷನರರು ಬ್ರಿಟಿಷ್ ಸೈನ್ಯದಿಂದ ಆರ್ಮಡ್‌ಕಾರ್ (Armed Car)ಗಳನ್ನು ತರಿಸಿಕೊಂಡು ಅದರಲ್ಲಿ ಓಡಾಡುತ್ತಾ ನಗರ ರಕ್ಷಣೆಯನ್ನು ಕೈಗೊಂಡರು, ೧.೮.೯೨೮ರಂದು ಸಹ ಹಗಲೂ, ರಾತ್ರಿ ಗಸ್ತು ತಿರುಗಿ, ಉಸ್ತುವಾರಿ ಕೆಲಸ ಮಾಡಿದರು. ಕೊನೆಗೊಮ್ಮೆ ಗಲಭೆ ಸಂಪೂರ್ಣವಾಗಿ ಅಡಗಿ, ನಗರದಲ್ಲಿ ಶಾಂತಿ ನೆಲೆಸುವಂತೆ ಆಯಿತು. ಬಹುಶಃ ಈ ಘಟನೆ ಮೈಸೂರು ಸಂಸ್ಥಾನದ ಚಾರಿತ್ರಿಕ ಕೋಮುಗಲಭೆಯೇ ಸರಿ.

ಅಡಿಟಿಪ್ಪಣಿಗಳು

೧. ಡಿ.ವಿ.ಜಿ., ಮೈಸೂರು ದಿವಾನರುಗಳು, ಪು.೧೯

೨. ಸುಂದರ್‌ರಾವ್ ಬ.ನ., ಬೆಂಗಳೂರು ಇತಿಹಾಸ, ಪು.೫೩೬

೩. ಎಂ. ವಿಶ್ವೇಶ್ವರಯ್ಯರವರ ಸಮಿತಿಯ ವರದಿ, ಕ.ರಾ.ಪ, ಪ್ಯಾರಾ.೧೪

೪. ಅದೇ, ಪ್ಯಾರ.೧೫

೫. ಸುಂದರ್‌ರಾವ್ ಬ.ನ., ಬೆಂಗಳೂರಿನ ಇತಿಹಾಸ, ಪು.೫೪೦

೬. ಅದೇ, ಪು.೫೪೧

೭. ಎಂ. ವಿಶ್ವೇಶ್ವರಯ್ಯರವರ ಸಮಿತಿಯ ವರದಿ, ಕ.ರಾ.ಪ, ಪ್ಯಾರಾ.೧೪

೮. ಸುಂದರ್‌ರಾವ್ ಬ.ನ., ಬೆಂಗಳೂರಿನ ಇತಿಹಾಸ, ಪು.೫೪೩

೯. ಅದೇ, ಪು.೫೪೩

೧೦. ಅದೇ, ಪು.೫೨

೧೧. ಅದೇ, ಪು.೫೫

೧೨. ಅದೇ, ಪು.೫೪೫

೧೩. ಅದೇ, ಪು.೫೪೬

೧೪. ಲಿಂಗಯ್ಯ ಡಿ., ಶಿವಪುರ ಧ್ವಜ ಸತ್ಯಾಗ್ರಹ, ಪು.೨೨

೧೫. ನಾರಾಯಣರಾವ್ ವಿ.ಎಸ್., ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆ, ಪು.೨೩೦

೧೬. ಸುಂದರ್‌ರಾವ್ ಬ.ನ., ಬೆಂಗಳೂರು ಇತಿಹಾಸ, ಪು.೫೪೯

೧೭. ಅದೇ, ಪು.೫೫೧

೧೮. ವೀರಣ್ಣ ಎಚ್.ಕೆ., ಬದುಕು ಮೆಲಕು, ಪು.೯೭

೧೯. ನಾರಾಯಣರಾವ್ ವಿ.ಎಸ್., ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆ, ಪು.೨೩೦

೨೦. ನಾರಾಯಣರಾವ್ ವಿ.ಎಸ್., ಮಿರ್ಜಾ ಇಸ್ಮಾಯಿಲ್, ಪು.೨೯

೨೧. ಅದೇ, ಪು.೩೦

ಆಧ್ಯಾಯ ೪

ಗಲಭೆಯಲ್ಲಿ ಹಿಂದೂ ಮುಸ್ಲಿಂ ತಾರತಮ್ಯದ ನೆಲೆಗಳು

೪

ಗಲಭೆಯಲ್ಲಿ ಹಿಂದೂ-ಮುಸ್ಲಿಂ ತಾರತಮ್ಯದ ನೆಲೆಗಳು

ಈ ಗಲಭೆಯು ತೀವ್ರ ಸ್ವರೂಪ ಪಡೆದುಕೊಳ್ಳಲು ಕಾರಣ ಹಿಂದೂ-ಮುಸ್ಲಿಂ ಕೋಮು ಗಲಭೆ. ಕೋಮು ಗಲಭೆಗಳು ಭಾರತದಲ್ಲಿ ಹೊಸತೇನೂ ಅಲ್ಲದಿದ್ದರೂ ಕೋಮುವಾದದ ಪರಿಣಾಮ ಮಾತ್ರ ಬಹಳ ತೀವ್ರವಾಗಿರುತ್ತದೆ. ಸರಕಾರಗಳೂ ಬುಡಮೇಲು ಆಗುವಂತಹ ಸಂದರ್ಭಗಳು ತಲೆದೋರಿದೆ. ಬೆಂಗಳೂರಿನ ಗಣೇಶ ಗಲಭೆಯೂ ಸಹಾ ಕೊನೆಯಲ್ಲಿ ಈ ಮಾದರಿಯ ಕೋಮು ಸ್ವರೂಪವನ್ನೇ ಪಡೆಯಿತು.

ಈ ಗಲಭೆಯ ತಾರತಮ್ಯವನ್ನು ಕುರಿತು ಚಿಂತಿಸುವುದಕ್ಕಿಂತಲೂ ಮೊದಲು ಕೋಮುವಾದವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಕೋಮುವಾದ ಎಂದರೆ ಎರಡು ವಿಭಿನ್ನ ಸಾಂಸ್ಕೃತಿಕ ಚಹರೆಗಳಿರತಕ್ಕ ಪಂಗಡಗಳು ಅಥವಾ ಮತಗಳು ಒಂದನ್ನೊಂದು ಅನುಮಾನದ ದೃಷ್ಟಿಯಿಂದ ಕಾಣುವುದು, ದ್ವೇಷ ಸಾಧಿಸುವುದು ಇತ್ಯಾದಿ. ಇದನ್ನೇ ಜಿ. ರಾಜಶೇಖರವರು ಹೀಗೆ ಹೇಳುತ್ತಾರೆ- "ರಾಜಕೀಯ ಅಧಿಕಾರಕ್ಕಾಗಿ ಒಂದು ಧರ್ಮದ ಅನುಯಾಯಿಗಳನ್ನು ಇನ್ನೊಂದು ಧರ್ಮದ ವಿರುದ್ಧ ಎತ್ತಿಕಟ್ಟುವುದು ಮತ್ತು ಬಹುಸಂಖ್ಯಾತರ ಸಂಸ್ಕೃತಿಗೆ ಅಲ್ಪಸಂಖ್ಯಾತರು ಹೊರಗಿನವರು ಎಂದು ವಾದಿಸಿ ಅವರ ಬಗ್ಗೆ ದ್ವೇಷ, ತಿರಸ್ಕಾರಗಳನ್ನು ಬೆಳೆಸುವುದನ್ನು ಕೋಮುವಾದ" ಎನ್ನಬಹುದು.[೧] ಒಟ್ಟಿನಲ್ಲಿ ಈ ಮೇಲಿನ ವ್ಯಾಖ್ಯೆ ಕೇವಲ ಒಂದು ನೆಲೆಯನ್ನು ಮಾತ್ರ ತಿಳಿಸುತ್ತದೆ. ಆದರೆ ಬಹು ನೆಲೆಗಳಲ್ಲಿ ಹೇಳುವುದಾರೆ ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಎನ್ನುವುದಕ್ಕಿಂತಲೂ ಎರಡು ಕೋಮುಗಳು ತಮ್ಮ ತಮ್ಮ ವಿಭಿನ್ನ ತಾತ್ವಿಕ ಸೈದ್ಧಾಂತಿಕ ಹಿನ್ನಲೆಯಲ್ಲಿ ಪರಸ್ಪರ ಇನ್ನೊಂದು ಮತವನ್ನು ಅಗೌರವ, ಅಪನಂಬಿಕೆಯಿಂದ ನೋಡುವುದೇ ಆಗಿದೆ. ಕೆಲವೊಮ್ಮೆ ಅಧಿಕಾರದಲ್ಲಿ ಇರುವವರೇ ಅಲ್ಪಸಂಖ್ಯಾತರಾಗಿದ್ದಲ್ಲಿ, ಬ್ರಾಹ್ಮಣರು ಭಾರತದಲ್ಲಿ ಅಲ್ಪಸಂಖ್ಯಾತರೇ, ಇವರು ದಲಿತ ವರ್ಗಗಳನ್ನು ಪ್ರಾಚೀನತೆಯಿಂದಲೂ ಹೊರಗಿಟ್ಟಿರುವುದು ತಮಗಿಂತಲೂ ಅವರು ವಿಭಿನ್ನ ಎನ್ನುವ ಕಾರಣದಿಂದಲೇ. ಹಾಗಾಗಿ ಅಧಿಕಾರ ಹಾಗೂ ಅಧಿಕಾರರಹಿತರ ನಡುವಿನ ತಾರತಮ್ಯವೇ ಕೋಮುವಾದ.

ಇಂತಹುದೇ ಅಭಿಪ್ರಾಯವನ್ನು ಬಿ. ಕೃಷ್ಣಮೂರ್ತಿಯವರು "ಕೋಮುವಾದವನ್ನು ಸಾಧ್ಯವಾಗಿಸಲು ನೆಲೆ ಧರ್ಮವಲ್ಲವೇ ಅಲ್ಲ. ವಿವಿಧ ಧರ್ಮಗಳಲ್ಲಿರುವ ವಿಭಿನ್ನ ನಂಬಿಕೆ ಆಚಾರ ವಿಚಾರಗಳು ಅಲ್ಲ. ಕೋಮುವಾದ ಮತ್ತು ಕೋಮುವಾದ ಪ್ರಚೋದಿತ ಹಿಂಸೆ ಸಾಮಾಜಿಕ ಸಂಬಂಧಗಳಲ್ಲಿ ಉದ್ಭವಿಸಿ, ಸಾಮಾಜಿಕ ಸಂಬಂಧಗಳಲ್ಲಿ ಅಭಿವ್ಯಕ್ತವಾಗುವ ಪ್ರಕ್ರಿಯೆಗಳು.[೨] ಹಾಗಾಗಿ ಇದೊಂದು ಅಧಿಕಾರವನ್ನು ಪಡೆಯಲಿಚ್ಚಿಸುವ ಒಂದು ಹುನ್ನಾರವಾಗಿ ಬಳಕೆಯಾಗುತ್ತಲಿದೆ. ಗಲಭೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಸಂಗತಿ ಗೊತ್ತಾಗುತ್ತದೆ."

ಎರಡು ಅಸಮಾನ ಸಂಸ್ಕೃತಿಗಳು ಅಥವಾ ಮತದ ಪ್ರತಿನಿಧಿಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಇಂತಹ ಒಂದು ಪ್ರಕ್ರಿಯೆಗೆ ಸಮಾಜದಲ್ಲಿ ಚಾಲನೆಕೊಡುತ್ತಾರೆ. ಅಧಿಕಾರಕ್ಕಾಗಿ ಹಂಬಲಿಸುವ ಒಂದು ವರ್ಗವು ಅಥವಾ ಶೋಷಿಸುವ ವರ್ಗ ಮತ್ತು ಜಾತಿಗಳು, ತಾವೇ ಹುಟ್ಟು ಹಾಕುವ ಈ ನೋವು, ಸಂಕಟವನ್ನು ರಾಜಕೀಯ, ಸಾಂಸ್ಕೃತಿಕ ಮತ್ತಿತರ ತಂತ್ರಗಳ ಭಾವನೆಯನ್ನು ಬಂಡವಾಳವನ್ನಾಗಿ ಪರಿವರ್ತಿಸಿ ತಮ್ಮ ಮುಂದುವರಿಕೆಗಾಗಿಯೇ ಉಪಯೋಗಿಸಿಕೊಳ್ಳುತ್ತದೆ.[೩] ಹಾಗಾಗಿ ಎಲ್ಲ ಕೋಮುಗಲಭೆಗಳನ್ನೂ ಅಧಿಕಾರದ ನೆಲೆಯಲ್ಲಿಯೇ ನೋಡಬೇಕಾದ ಅವಶ್ಯಕತೆ ಇದೆ ಎನ್ನಬಹುದು.

ಈ ನೆಲೆಯಲ್ಲದೆ ಕೋಮುವಾದವನ್ನು ಇನ್ನೊಂದು ನೆಲೆಯಲ್ಲಿಯೂ ನೋಡಬಹುದಾಗಿದೆ. ಅದೇ ಮೂಲಭೂತವಾದಿ ಚಿಂತನೆ. ಮೂಲಭೂತವಾದಿಗಳು ತಮ್ಮ ಮತವೇ ಶ್ರೇಷ್ಠ ಎಂಬ ಭಾವನೆಯ ಅಮಲಿನಲ್ಲಿರುತ್ತಾರೆ. ತಮ್ಮ ಸಂಪ್ರದಾಯಗಳಿಗೆ ಬೆಲೆಕೊಡುವ ಇವರು ಮತ್ತೊಂದು ಮತದ ಸಂಪ್ರದಾಯ ಆಚರಣೆಗಳನ್ನು ಅನುಮಾನದಿಂದಲೇ ಕಾಣುತ್ತಿರುತ್ತಾರೆ. ಹಾಗಾಗಿ ಮೂಲಭೂತವಾದವೂ ಸಹ ಕೋಮುಗಲಭೆಗೆ ಕಾರಣವಾಗಬಲ್ಲದು. ಪ್ರತಿ ಮತವೂ ಮೂಲಭೂತವಾದವನ್ನು ಹೊಂದಿರುತ್ತದೆ ಹಾಗಾಗಿ ಮೂಲಭೂತವಾದದ ಬಗೆಗೆ ವಿವರಿಸುತ್ತಾ 'ಜಿ. ರಾಮಕೃಷ್ಣರವರು ಧಾರ್ಮಿಕ ಮೂಲಭೂತವಾದಿತನ–ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ ಮೂಲಭೂತವಾದದ ಐದು ಪ್ರಮುಖ ಲಕ್ಷಣಗಳನ್ನು ವಿವರಿಸುತ್ತಾರೆ. ಅವು–

೧. ಸಮಾಜಕ್ಕೆ ಅದೊಂದು ಸಂಹಿತೆಯನ್ನು ಒದಗಿಸುತ್ತದೆ.

ಒಂದು ಮತವು ಇಡೀ ಸಮಾಜಕ್ಕೆ ಸಂಪ್ರದಾಯ ಸಾಮಾಜಿಕ ರಚನೆಗಳನ್ನು ನಿರ್ಧರಿಸಿ ಬಿಡುತ್ತದೆ. ಇಂತಹ ಯಾವುದೇ ಕಟ್ಟುಪಾಡುಗಳನ್ನು ಪ್ರಶ್ನಿಸುವಂತಿಲ್ಲ. ಹಾಗಾಗಿ

ಸಮಾಜವು ಸಂಪೂರ್ಣವಾಗಿ ಸ್ಥಗಿತ ವ್ಯವಸ್ಥೆಯಲ್ಲಿರುವಂತೆ ಮಾಡಿ ಚಲನೆ ಹೀನವಾಗಿಸುತ್ತದೆ. ಹೀಗಾಗಿ ಮತವು ಒಂದು ಸಂಸ್ಥೆಯ ಸ್ವರೂಪವನ್ನು ಪಡೆಯುತ್ತದೆ.

೨. ಅದು ಆಭಾದಿತ ಸತ್ಯವನ್ನು ಹೇಳುತ್ತದೆ

ಮತವು ಹೇಳಿದ ಯಾವುದೇ ಮಾತುಗಳನ್ನು ಯಾರು ಕೇಳುವಂತಿಲ್ಲ, ಪ್ರಶ್ನಿಸುವಂತಿಲ್ಲ. ಮೂಲಭೂತವಾದಿಗಳ ಪ್ರಕಾರ ಅದು ಸರ್ವಕಾಲೀಕವಾದುದು, ಸಾರ್ವತ್ರಿಕವಾದುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಎಂದರೆ ಧರ್ಮದ ಗುರುಗಳು ಅಥವಾ ಆ ಸಂಸ್ಥೆಯ ಮುಖ್ಯಸ್ಥರು ಹೇಳಿದ್ದೇ ಕೊನೆಯ ಮಾತು ಆಗಿರುತ್ತದೆ. ಹಾಗಾಗಿ ಇಲ್ಲಿ ಹೊಸ ಜ್ಞಾನಕ್ಕೆ ಅವಕಾಶವಿರುವುದಿಲ್ಲ.

೩. ಅದು ಕಾಲಾತೀತವಾದುದು

ಈಗಾಗಲೇ ಗ್ರಹಿಸಿರುವಂತೆ ಧರ್ಮದ ಸತ್ಯ ಹಾಗೂ ಬೋಧನೆಯು ಆಯಾ ಚಾರಿತ್ರಿಕ ಸನ್ನಿವೇಶಗಳಿಂದ ಪ್ರತಿಬಂಧಕಗಳನ್ನು ಎದುರಿಸಬೇಕಾಗಿಲ್ಲ. ಏಕೆಂದರೆ ಅದು ತ್ರಿಕಾಲಾಭಾಧಿತ ಸತ್ಯ. ಒಂದನೇಯ ಶತಮಾನದ ಜೀವನದ ಹಿನ್ನೆಲೆಯಲ್ಲಿ ಮೂಡಿ ಬಂದ ಬೋಧನೆಯೂ ಇಪ್ಪತ್ತೊಂದನೆಯ ಶತಮಾನದಲ್ಲೂ ಅಷ್ಟೇ ವಿಶುದ್ಧವಾದುದು ಗ್ರಾಹ್ಯವಾದ್ದದ್ದು.

೪. ಅದು ಸರ್ವವ್ಯಾಪಿಯಾಗಿರುವಂತಹದ್ದು

ಮತವು ಜೀವನದ ಎಲ್ಲಾ ಅಂಗಗಳಲ್ಲೂ ವ್ಯಾಪ್ತಿಯನ್ನು ಪಡೆದಿದೆ. ಆದ್ದರಿಂದ ಸಮಾಜದ ಎಲ್ಲಾ ವ್ಯವಹಾರಗಳಲ್ಲೂ ಧರ್ಮದ ಮಾತೆ ಕಡೆಯ ಮಾತು. ನ್ಯಾಯದ ಮಾತು. ಅದನ್ನು ಉಲ್ಲಂಘಿಸುವುದು ಧರ್ಮಕ್ಕೆ ಅಪಚಾರವೆಸಗಿದಂತೆಯೇ. ಸಂಘ ಜೀವನದಲ್ಲಿ ಧರ್ಮ, ಧರ್ಮಗ್ರಂಥ ಮತ್ತು ಧರ್ಮಗುರುಗಳಿಗೆ ಆದ್ಯತೆಯ ಸ್ಥಾನ ನೀಡಬೇಕು. ಅದು ರಾಜ್ಯಯಂತ್ರ, ಸಮಾಜ, ಜೀವನ, ಕಾನೂನು, ಕುಟುಂಬ ಇತ್ಯಾದಿಗಳಿಗೆಲ್ಲಾ ಒಂದು ಗೆರೆಯನ್ನು ಹಾಕಿಕೊಡುತ್ತದೆ.

ಮತಕ್ಕೆ ಆಭಾರ ಗ್ರಂಥಗಳಿವೆ

ಅವು ಅತಿ ಶ್ರೇಷ್ಠವಾದುವು, ಅವನ್ನು ಮೂದಲಿಸುವುದಂತಿರಲಿ, ಅರ್ಥೈಸಹೊರಡುವುದು ಸಹ ಅಪರಾಧವಾಗುತ್ತದೆ. ಉದ್ಧಟತನವೆನಿಸುತ್ತದೆ. ಅದರ ಅರ್ಥವನ್ನು ಧರ್ಮ ಗುರುಗಳು ಮಾತ್ರ ತಿಳಿಯಬಲ್ಲರು.[೪]

ಹೀಗೆ ಮೂಲಭೂತವಾದುದು ಮತದೊಳಗಣ ಸಮಾಜವನ್ನು ಒಂದು ಕಟ್ಟಳೆಯ ಮೂಲಕ ನಿರ್ಬಂಧಿಸುತ್ತಿದೆ. ಮತ್ತೊಂದು ಕಡೆ ಸಮಾಜದ ಮೇಲೆ ಮತದ ಬಗ್ಗೆ ಒಂದು

ಬಗೆಯ ದುರಹಂಕಾರವನ್ನು ಬೆಳೆಸುತ್ತದೆ. ಮತ್ತು ಇತರೆ ಮತಗಳ ಬಗೆಗೆ ಕೀಳರಿಮೆಯನ್ನು ಬೆಳೆಸುತ್ತದೆ.

ಒಟ್ಟಿನಲ್ಲಿ ಗಣೇಶ ಗಲಭೆಯು ಮೇಲೆ ತಿಳಿಸಿದಂತಹ ಅಧಿಕಾರದ ಅಪನಂಬಿಕೆ, ಮೂಲಭೂತವಾದಿಗಳ ವ್ಯಾಮೋಹ ಎರಡು ನೆಲೆಯ ಸ್ವರೂಪವನ್ನು ಪಡೆದುಕೊಂಡಿದೆ ಎನ್ನಬಹುದು. ಅಲ್ಲದೆ ಹಿಂದೂ-ಮುಸ್ಲಿಂ ಮತಗಳೆರಡರಲ್ಲಿಯೂ ಈ ಮೇಲೆ ವಿವರಿಸಿದಂತಹ ಎರಡೂ ಚಿಂತನೆಗಳು ಕೆಲಸಮಾಡಿವೆ ಎಂದರೆ ತಪ್ಪಾಗಲಾರದು.

ಯಾವುದೇ ಮತವೂ ಬಲಿಷ್ಟವಾಗಲು ಈಗಾಗಲೇ ಹೇಳಿರುವಂತೆ ಅದು ಎರಡು ನೆಲೆಗಳಲ್ಲಿ ಇನ್ನೊಂದು ಮತವನ್ನು ಅನುಮಾನದಿಂದ ನೋಡುತ್ತಿರುತ್ತದೆ. ಇಂತಹ ಅಪನಂಬಿಕೆಯ, ಮತ್ತೊಂದು ಮತದ ಬಗೆಗೆ ತಾರತಮ್ಯದ ಭಾವನೆಗಳನ್ನು ಬೆಳೆಸಿಕೊಳ್ಳುತ್ತದೆ. ಅದು ಯಾವ ಹಂತದಲ್ಲಾದರೂ ಸ್ಫೋಟಗೊಳ್ಳುವ ಸ್ಥಿತಿಯಲ್ಲಿರುತ್ತದೆ. ಮೂಲಭೂತವಾದವು ಅಧಿಕಾರವನ್ನು ಬಳಸಿಕೊಂಡು ಬಲಿಷ್ಟವಾಗಲು ಬಯಸುತ್ತಿರುತ್ತದೆ. ಅಧಿಕಾರದಲ್ಲಿರುವ ಮತವು ಮೂಲಭೂತವಾದವನ್ನು ಬೆಳೆಸುತ್ತಲೇ ತನ್ನ ಮತದ ವ್ಯವಸ್ಥೆಯನ್ನೇ ಜಡ್ಡುಗಟ್ಟುವಂತೆ ಮಾಡುತ್ತದೆ. ಮತ್ತು ಇನ್ನೊಂದು ಮತದ ಸಂಸ್ಕೃತಿಯನ್ನು ನಿಯಂತ್ರಣದಲ್ಲಿಡಲು ತನ್ನ ಅಧಿಕಾರವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತದೆ. ಅಧಿಕಾರದಲ್ಲಿ ಇರದ ಮತವು ಅಧಿಕಾರವನ್ನು ಪಡೆಯಲು ಮೂಲಭೂತವನ್ನು ಬಲಿಷ್ಟಗೊಳಿಸುತ್ತದೆ. ಅದು ಅಧಿಕಾರಕ್ಕಾಗಿಯೇ ತನ್ನ ಮತದ ಜನತೆಯಲ್ಲಿ ಕೋಮು ಸ್ವರೂಪದ ಬೀಜಗಳನ್ನು ಬಿತ್ತುತ್ತದೆ ಹಾಗೂ ಜನರನ್ನು ಪ್ರಚೋದಿಸುವ ನೆಲೆಯಲ್ಲೂ ಕೆಲಸ ಮಾಡುತ್ತದೆ. ಆ ಮೂಲಕ ಜನತೆಯನ್ನು ಒಟ್ಟುಗೂಡಿಸಿ ಅಧಿಕಾರದಲ್ಲಿ ಕೆಲಸ ಮಾಡುತ್ತದೆ. ಅಲ್ಲದೆ ಅಧಿಕಾರದ ಬಳಿಕೆಗಾಗಿಯೂ ಹವಣಿಸುತ್ತಿರುತ್ತದೆ. ಗಣೇಶ ಗಲಭೆಯಲ್ಲಿ ಹಿಂದೂ ಮತವು ಅಧಿಕಾರವನ್ನು ಮುಸ್ಲಿಂ ಮತದವರಿಂದ ಹಿಂದಕ್ಕೆ ಪಡೆಯಲು ಪ್ರಯತ್ನಿಸಿದರೆ, ಮುಸಿಲ್ಂ ಮತದವರು ಅಧಿಕಾರವನ್ನು ಬಳಸಿಕೊಂಡು ಮೂಲಭೂತವಾದವನ್ನು ಬಲಿಷ್ಟಗೊಳಿಸುವುದನ್ನು ಗಮನಿಸಬಹುದು. ಈ ಎರಡೂ ಮತದವರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅಧ್ಯಯನಕ್ಕೆ ಒಳಪಡಿಸಿದಾಗ ಈ ವಿಷಯ ತಿಳಿಯುತ್ತವೆ.

ಹಿಂದುಗಳು, ಮುಸ್ಲಿಂ ಜನತೆಯ ಬಗೆಗೆ ತೋರಿಸಿದ ತಾರತಮ್ಯದ ನೆಲೆಗಳು ಗಂಭೀರವಾದುವು. ಅಧಿಕಾರವನ್ನು ಪಡೆಯಲು ಮೂಲಭೂತವಾದವನ್ನು ಹೇಗೆ ಬಳಸಿಕೊಂಡರು ಎಂಬುದನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಈ ಪರಿಶೀಲನೆಯು ಗಲಭೆಗೆ ಕಾರಣಗಳನ್ನು ಅಭಿವ್ಯಕ್ತಿಸುತ್ತದೆ. ಮೊದಲನೆಯದಾಗಿ

ಅಬ್ಬಾಸ್‌ಖಾನ್ ಅಂದು ಮೈಸೂರಿನಲ್ಲಿ ನಡೆಯುತ್ತಿದ್ದ ಬ್ರಾಹ್ಮಣೇತರ ಚಳುವಳಿಯ ಮುಖ್ಯ ನೇತಾರರೂ ಹೌದು. ಬೆಂಗಳೂರು ಮುನ್ಸಿಪಾಲಿಟಿಯ ಅಧ್ಯಕ್ಷರೂ ಆಗಿದ್ದರು. ಓರ್ವ ಬ್ರಾಹ್ಮಣ ಸದಸ್ಯರನ್ನು ಸೋಲಿಸಿ ಅಧ್ಯಕ್ಷ ಪದವಿಯನ್ನು ಪಡೆದಿದ್ದರು. ಹೀಗಾಗಿ ಸಹಜವಾಗಿಯೇ ಬ್ರಾಹ್ಮಣರಲ್ಲಿ ಅಬ್ಬಾಸ್‌ಖಾನ್ ಬಗೆಗೆ ದ್ವೇಷದ ಭಾವನೆ ಇದ್ದಿತು. ಹೀಗಾಗಿ ಒಂದಷ್ಟು ಬ್ರಾಹ್ಮಣರಲ್ಲಿ ಅಬ್ಬಾಸ್‌ಖಾನರು ಅಧಿಕಾರದಲ್ಲಿ ಮುಂದುವರೆಯಲು ಇಷ್ಟ ಆಗಿರಲಿಲ್ಲ.

ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾದ ಮೇಲೆ ಅಬ್ಬಾಸ್‌ಖಾನ್ ಅಧಿಕಾರದಲ್ಲಿ ಬಲಿಷ್ಠನಾಗಿದ್ದಾರೆ ಎನ್ನುವ ಭಾನೆಯು ಹಿಂದೂ ಜನರಲ್ಲಿ ಬೆಳೆಯಿತು. ಮಿರ್ಜಾರವರು ದಿವಾನರಾಗುವವರೆಗೂ ಅಬ್ಬಾಸ್‌ಖಾನ್‌ರು ಸರ್ಕಾರದ ಬಗೆಗೆ ಹೆಚ್ಚು ನಿಷ್ಠೂರವಾದಿಯಾಗಿದ್ದರು. ಅದರೆ ಆಮೇಲೆ ಅದರ ಧೋರಣೆಗಳೇ ಬದಲಾದವು. ಉದಾಹರಣೆಗೆ ಬ್ರಾಹ್ಮಣೇತರರ ನೇಮಕಾತಿ ತಿದ್ದುಪಡಿಯನ್ನು ವಿರೋಧಿಸಬೇಕೆಂದು ಅಬ್ಬಾಸ್‌ಖಾನ್‌ರಿಗೆ ತಿಳಿಸಿದಾಗ ಅವರು ಆ ವಿಷಯದಲ್ಲಿ ಅಷ್ಟೊಂದು ಉತ್ಸುಕತೆ ತೋರದಿದ್ದುದು. ಹೀಗಾಗಿ ಸರ್ಕಾರಕ್ಕೆ ಅಬ್ಬಾಸ್‌ಖಾನ್ ಹತ್ತಿರವಾಗುತ್ತಿದ್ದಾರೆ ಎನ್ನುವ ಭಾವನೆ ಜನರಲ್ಲಿ ನೆಲೆಯೂರಿತು.

ಇದರ ಜೊತೆಗೆ ಮಿಲ್ಲರ್ ಸಮಿತಿ ವರದಿಯ ಹಿನ್ನಲೆಯಲ್ಲಿ ಅರಸರು ಬ್ರಾಹ್ಮಣೇತರರ ಪರವಾಗಿ ನಿಂತಿದ್ದುದು ಸಹ ಮತ್ತೊಂದು ಕಾರಣವಾಗಿತ್ತು. ಇದರಿಂದಾಗಿ ಬ್ರಾಹ್ಮಣರು ಸರ್ಕಾರಿ ಸೇವೆಗಳಲ್ಲಿ ಬಹುಪಾಲು ಉದ್ಯೋಗಗಳನ್ನು ಕಳೆದುಕೊಂಡರು. ಇದು ಸಹಜವಾಗಿಯೇ ಸರ್ಕಾರದ ಬಗೆಗೆ ತಿರಸ್ಕಾರದ ಭಾವನೆ ಬೆಳೆಯಲು ಕಾರಣವಾಯಿತು. ತಮ್ಮ ಅಸ್ತಿತ್ವದ ಬಗೆಗೆ ಬ್ರಾಹ್ಮಣರಲ್ಲಿ ಚಿಂತಿಸುವ ಅನಿವಾರ್ಯತೆ ಬೆಳೆದಿತ್ತು. ಸುಬ್ರಹ್ಮಣ್ಯಂ ಎನ್ನುವವರು ಭಾಷಣ ಮಾಡುತ್ತಾ ಅಬ್ಬಾಸ್‌ಖಾನ್ ಹಾಗೂ ದಿವಾನರನ್ನು ಖಂಡಿಸಿದುದನ್ನು ಗಮನಿಸಬಹುದು.

ಸರ್ಕಾರಿ ಸೇವೆಗಳಲ್ಲಿ ಮುಸ್ಲಿಂ ಮತದವರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿ ಕೊಳ್ಳಲಾರಂಭಿಸಿದ್ದು ಸಹಜವಾಗಿಯೇ ಬ್ರಾಹ್ಮಣರಲ್ಲಿ ಹೊಟ್ಟೆಕಿಚ್ಚನ್ನುಂಟು ಮಾಡಿತು. ಅಲ್ಲದೇ ಬ್ರಾಹ್ಮಣೇತರರಾದ ಇನ್ನಿತರೆ ಬಹುಸಂಖ್ಯಾತ ಒಕ್ಕಲಿಗ, ಕುರುಬ ಮತ್ತಿತರಿಗೂ ಸರ್ಕಾರದ ಬಗೆಗೆ ನಂಬಿಕೆ ಕಳೆದು ಹೋಗಲು ಕಾರಣವಾಯಿತು. ಕಾಕತಾಳಿಯವೋ ಎಂಬಂತೆ ಸರ್ಕಾರಿ ಕೆಲಸಗಳಲ್ಲಿ ಮುಸ್ಲಿಂ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಯಾವುದೇ ಅಥಾರಿಟಿಯ ಅನುಮತಿ ಇಲ್ಲದೇ ಜೂನ್ ೨೧ ರಂದು ವಿದ್ಯಾ ಇಲಾಖೆಯ ನಿರ್ದೇಶಕರ ಜೊತೆ ಬಂದಿದ್ದ ಅಬ್ಬಾಸ್‌ಖಾನರು (ಮುನ್ಸಿಪಾಲಿಟಿ ಅಧ್ಯಕ್ಷರು) ಶಾಲೆಯ ಮುಖ್ಯಸ್ಥರನ್ನು ಜರೆದಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ಹಿಂದೂ

ಕೋಮಿನವರಾದುದರಿಂದ ಒಂದು ರೀತಿಯಲ್ಲಿ ಅಬ್ಬಾಸ್‌ಖಾನರಿಂದ ಅವಮಾನಕ್ಕೆ ಒಳಗಾದರು ಎಂಬಂತೆ ಸುದ್ದಿಗಳು ಹರಡತೊಡಗಿದವು.

ಒಂದು ವೇಳೆ ಮುನ್ಸಿಪಾಲಿಟಿಯ ಅಧ್ಯಕ್ಷರಾಗಲೀ, ದಿವಾನರಾಗಲೀ, ಹಿಂದೂಗಳೇ ಆಗಿದ್ದಲ್ಲಿ ಗಣೇಶನ ವಿಗ್ರಹಕ್ಕೆ ಗೂಡು ಕಟ್ಟುವುದರ ವಿರುದ್ಧವಾಗಿರುತ್ತಿದ್ದಿದ್ದರೆ ಹಾಗೂ ಇಂಥ ಆದೇಶವನ್ನು ನೀಡುತ್ತಿರಲಿಲ್ಲ ಎಂಬುದು ಹಿಂದೂ ಜನರಲ್ಲಿ ಗಾಢವಾಗಿ ಬೆಳೆಯಿತು. ಮುಖ್ಯವಾಗಿ ಈ ಭಾವನೆಯೇ ಜನರಲ್ಲಿ ಸಂಚಲನ ಉಂಟುಮಾಡಿದ್ದು. ಈ ಮೇಲಿನ ಎಲ್ಲಾ ಕಾರಣಗಳು ಅಧಿಕಾರಿ ವಲಯಗಳಲ್ಲಿ ಗಮನಿಸಬಹುದಾಗಿದೆ.

ಮೂಲಭೂತವಾದದ ಇನ್ನಿತರೆ ಆಯಾಮಗಳು

ಶೇಕಡ ೮೮ ರಷ್ಟು ಪಟ್ಟು ಮೈಸೂರು ರಾಜ್ಯದಲ್ಲಿ ಹಿಂದುಗಳೇ ಇದ್ದರು, ಹೀಗಾಗಿ ಅವರಲ್ಲಿ ಇದು 'ಹಿಂದುಗಳ ರಾಜ್ಯ' ಎಂಬ ಭಾವನೆ ಬೆಳೆದಿತ್ತು. ಹೀಗಾಗಿ ಬಹುಪಾಲು ಹಿಂದುಗಳು ಮುಸ್ಲಿಂ ಆಳ್ವಿಕೆಯನ್ನು ಸಹಿಸಲಿಲ್ಲ ಎಂಬ ಗುಮಾನಿಗಳಿವೆ.

ಅಶ್ವತ್ಥ ಕಟ್ಟೆಗಳನ್ನು ತೆಗೆಸಿದುದು ಮೂಲಭೂತವಾದಿಗಳಿಗೆ ಹಿಡಿಸಿರಲಿಲ್ಲ. ಅಂದರೆ ಮುನ್ಸಿಪಾಲಿಟಿ ಅಧ್ಯಕ್ಷರು ಓರ್ವ ಮುಸ್ಲಿಂ ಜನಾಂಗದವರಾಗಿದ್ದುದರಿಂದ ಕೆಲವರಲ್ಲಿ ದ್ವೇಷ ಉಂಟಾಯಿತೆಂದು ಹೇಳಬಹುದು. ಈ ಹಿಂದೆ ಅನೇಕ ಸಲ ಹಿಂದೂ, ಕ್ರೈಸ್ತ, ಮುಸ್ಲಿಂ, ಎನ್ನದೇ ನಗರದ ರಸ್ತೆಗಳನ್ನು ಅಗಲೀಕರಣಗೊಳಿಸಿದರೂ ಯಾರೂ ಚಕಾರ ಎತ್ತಿರಲಿಲ್ಲ. ಆದರೆ ಅಂದು ಅಬ್ಬಾಸ್‌ಖಾನ್‌ರ ಕಾಲದಲ್ಲಿ ಆದ ಘಟನೆಯಿಂದಾಗಿ ಹಿಂದೂಗಳೂ ಆಕ್ರೋಶಗೊಂಡಿದ್ದರು.

ವಿಚಾರಣಾ ವೇಳೆಯಲ್ಲಿ ಗಣೇಶ ವಿಗ್ರಹವು ಎಷ್ಟೋ ವರ್ಷಗಳಿಂದ ಅಲ್ಲಿಯೇ ಇದೆ. ಈಗಲೂ ಅಲ್ಲೇ ಇರುವ ಹಕ್ಕು ಇದೆ ಎಂಬುದನ್ನು ಅನೇಕರು ವಾದ ಮಾಡಿದರು. ಅದಕ್ಕೆ ಗೂಡು ಕಟ್ಟಿಸಿದರೆ ತಪ್ಪೇನು ಎಂಬುದು ಪ್ರಶ್ನೆ. ಆದರೆ ಅದು ಸಾರ್ವಜನಿಕ ಸ್ಥಳ ಎಂಬುದನ್ನು ಅವರು ತಿಳಿದಿರಬೇಕಾಗಿತ್ತು.

ಗಣೇಶ ಹಿಂದೂ ದೇವರು, ಇದನ್ನು ರಾಜಕೀಯವಾಗಿ ಬಳಸಿಕೊಳ್ಳಲು ಸಾಧ್ಯ ಎಂಬುದನ್ನು ಅರಿತ ಮುಖಂಡರು ಚಳವಳಿಗೆ ಇಳಿದರು. ಸುಬ್ರಹ್ಮಣ್ಯಂ ಎಂಬುವವರು ಮೊದಲು ವಿದ್ಯಾರ್ಥಿಗಳನ್ನು ಮೊದಲು ಪ್ರಚೋದಿಸಿದರು.

ಇದೇ ಸಂದರ್ಭದಲ್ಲಿ ಈ ಘಟನೆಯನ್ನು ಕೆಲವು ಪತ್ರಿಕೆಗಳು ವೈಭವೀಕರಿಸಿ ಪ್ರಕಟಗೊಳಿಸಿದ್ದು ವಿದ್ಯಾಧಿಪತಿಯಾದ ಗಣಪತಿ ಕತ್ತಲಲ್ಲಿ ಇದ್ದಂತೆ ಚಿತ್ರಿಸಿ, ಜನರ ಮನಸ್ಸಿನಲ್ಲಿ

ಆ ಬಗೆಗೆ ಪ್ರಚೋದನೆಯನ್ನುಂಟು ಮಾಡಿದ್ದು ಇನ್ನೆಲ್ಲಾ ಆಗು-ಹೋಗುಗಳಿಗೂ ಕಾರಣವಾಯಿತು.

ತಾರತಮ್ಯದ ನೆಲೆಗಳು

ಮುಸ್ಲಿಮರು ಈ ಗಲಭೆಗೆ ಮುಖ್ಯ ಕಾರಣರು ಎಂದೇನೂ ಅಲ್ಲ ಇವರಿಗೂ ಇರುವ ಅಧಿಕಾರವನ್ನು ಉಳಿಸಿಕೊಳ್ಳಬೇಕು ಹಾಗೂ ತಮ್ಮ ಮೂಲಭೂತವಾದವನ್ನು ಬಲಿಷ್ಟ ಗೊಳಿಸಬೇಕೆಂಬ ಉತ್ಕಟ ಆಲೋಚನೆಯೂ ಇದ್ದಿತು. ಹಾಗಾಗಿ ಇವರೂ ಸಹ ಅಧಿಕಾರದ ನೆಲೆ ಹಾಗೂ ಮೂಲಭೂತತನದ ನೆಲೆಗಳೆರಡನ್ನೂ ಗಲಭೆಗೆ ಪ್ರಧಾನ ಕಾರಣಗಳನ್ನಾಗಿ ಬಿಂಬಿಸಿದ್ದಾರೆ.

ದಿವಾನರು ಮುಸ್ಲಿಮರೇ ಆಗಿರುವುದರಿಂದ ಹಾಗೂ ಅವರು ಹತ್ತಿರದ ಪರಿಚಯ ಇರುವುದರಿಂದಲೇ ಅಬ್ಬಾಸ್‌ಖಾನ್‌ರು ತಮ್ಮ ಪ್ರಭಾವವನ್ನು ಬಳಸಿ ವಿಗ್ರಹಕ್ಕೆ ಗೂಡನ್ನು ಕಟ್ಟಿಸುವುದನ್ನು ತಡೆದರು ಎಂದು ಹೇಳಬಹುದಾದ ಅನೇಕ ವದಂತಿಗಳು ಇದನ್ನು ಪುಷ್ಟೀಕರಿಸುತ್ತವೆ. ಒಂದು ವೇಳೆ ದಿವಾನರು ಹಿಂದೂ ಆಗಿದ್ದಲ್ಲಿ ದಿವಾನರ ಆಪ್ತ ಕಾರ್ಯದರ್ಶಿಗಳಿಂದ ವಿದ್ಯಾ ಇಲಾಖೆಯ ನಿರ್ದೇಶಕರಿಗೆ ಅಂದರೆ ಅಷ್ಟು ಮೇಲ್ಮಟ್ಟದ ಅಧಿಕಾರದಿಂದ ಆದೇಶ ಹೊರಡುತ್ತಿರಲಿಲ್ಲ. ಒಟ್ಟಿನಲ್ಲಿ ಈ ಅಧಿಕಾರವನ್ನು ಬಳಸಿಕೊಂಡಿದ್ದು ಈ ಘಟನೆಗೆ ಕಾರಣವಾಯಿತು.

ಅಬ್ಬಾಸ್‌ಖಾನ್‌ರು ತಾವು ಮುನ್ಸಿಪಾಲಿಟಿಯ ಅಧ್ಯಕ್ಷರಾಗಿರುವುದರಿಂದಲೇ ಅಧಿಕಾರವನ್ನು ಉಪಯೋಗಿಸಿಕೊಂಡು ಅನಧಿಕೃತವಾಗಿ ಕಟ್ಟಿದ ಗೂಡಿನ ಬಗೆಗೆ ವಿದ್ಯಾ ಇಲಾಖೆಯ ಒಬ್ಬ ನೌಕರನನ್ನು ಜರೆದಿದ್ದರು. (೨೧ ಜೂನ್ ೧೯೨೮). ಈ ಘಟನೆಯು ಎಲ್ಲರ ಸಮಕ್ಷಮದಲ್ಲಿ ನಡೆದಿತ್ತು. ಹಾಗಾಗಿ ಅಬ್ಬಾಸ್‌ಖಾನರು ಗಣೇಶ ವಿಗ್ರಹಕ್ಕೆ ಗೂಡುಕಟ್ಟಿಸುವುದಕ್ಕೆ ವಿರೋಧಿಸಿದರು ಎಂಬ ವಿಷಯವು ಪ್ರಚಾರವಾಯಿತು. ಇದು ರೆಕ್ಕೆ ಪುಕ್ಕಗಳನ್ನು ಕಟ್ಟಿಕೊಂಡು ಪತ್ರಿಕೆಗಳಲ್ಲಿ ಪ್ರಕಟವಾಯಿತು.

ನಾಯಕರನ್ನು ಬಿಡುಗಡೆ ಮಾಡಿದ ನಂತರ ವಿದ್ಯಾರ್ಥಿಗಳು ಹಾಗೂ ನಾಯಕರು ಮಾಡಿದ್ದು ಅತಿರೇಕವೇ ಸರಿ. ಆದರೂ ಗಣೇಶನ ವಿಗ್ರಹಕ್ಕೆ ಪೂಜೆ ಸಲ್ಲಿಸಿದ್ದು, ಇದ್ದಕ್ಕಿದ್ದಂತೆ ಗುಂಡು ಹಾರಿದ್ದು, ಲಾಟಿಗಳನ್ನು ಬಳಸಿಕೊಂಡಿದ್ದು ಅಪರಾಧ. ಸುಮಾರು ೭೦ ಮಂದಿ ಹಿಂದೂಗಳು ಅಲ್ಲಿ ಸೇರಿದ್ದವರಲ್ಲಿ ಗಾಯಗೊಂಡರೆಂದರೆ ಹಾಗೂ ಅನೇಕ ಸಾಕ್ಷಿಗಳು ಹೇಳುವಂತೆ ಆ ವೇಳೆಗಾಗಲೇ ಅಬ್ಬಾಸ್‌ಖಾನ್‌ರ ಮನೆಯ ಮುಂದೆ ಸುಮಾರು ಜನ

ಮುಸ್ಲಿಂ ಜನರು ಸೇರಿದ್ದರು. ಇದೊಂದು ಪೂರ್ವ ನಿಯೋಜಿತ ಘಟನೆ ಎನಿಸುತ್ತದೆ. ಹಾಗಾಗಿ ದೊಡ್ಡ ಮಟ್ಟದ ಗಲಭೆಗೆ ಕಾರಣವಾಯಿತು.

ಈ ಘಟನೆಗೆ ಸಂಬಂಧಿಸಿದಂತೆ ವಿವರಗಳು ದಿವಾನರಿಗೆ ಗೊತ್ತಿದ್ದರೂ ಯಾವುದೇ ರೀತಿಯ ಕ್ರಮಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಲಿಲ್ಲ. ವಿದ್ಯಾರ್ಥಿಗಳು ಅಷ್ಟೆಲ್ಲಾ ದಾಂಧಲೆ ನಡೆಸುವಾಗಲೂ ಯಾವ ರೀತಿಯಿಂದಲೂ ಮುನ್ನಡೆದಿರುವುದಿಲ್ಲ. ಹಾಗಾಗಿ ಗಲಭೆಯು ತೀವ್ರವಾಗುತ್ತಾ ಸಾಗಿತು ಎಂದು ಹೇಳಬಹುದು.

ಉರ್ದುಶಾಲೆಯು ಎ.ವಿ. ಸ್ಕೂಲಿನ ಹಿಂಬದಿಯಲ್ಲಿಯೇ ಇತ್ತು. ಅಲ್ಲಿಗೆ ಮುಸ್ಲಿಂ ವಿದ್ಯಾರ್ಥಿಗಳು ಹೊಗಬೇಕಾದರೆ ಎರಡು ದಾರಿಗಳು ಒಂದು ಎ.ವಿ. ಸ್ಕೂಲ್ ಮುಖಾಂತರ ಹೋಗುವುದು, ಇನ್ನೊಂದು ಉರ್ದುಶಾಲೆಗೆ ಮುಖ್ಯರಸ್ತೆ. ಮುಸ್ಲಿಮರು ಕೊಡುವ ಕಾರಣ ಎ.ವಿ. ಸ್ಕೂಲಿನ ಹಿಂಬದಿಯಲ್ಲಿಯೇ ಉರ್ದುಶಾಲೆಯಿರುವುದರಿಂದ ಗಣೇಶನಿಗೆ ಮಾಡುವ ಪೂಜೆ ಇತ್ಯಾದಿಗಳಿಂದ ಶಾಲೆಗೆ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ಕಿರಿಕಿರಿಯಾಗುತ್ತಿದೆ ಎಂಬುದು. ಮುಖ್ಯರಸ್ತೆ ಇರುವಾಗ ಹೀಗೆ ಹೋಗುವ ಅವಶ್ಯಕತೆ ಇದೆ. ಎಲ್ಲ ಪ್ರಶ್ನೆಗಳು ಹುಟ್ಟಿಕೊಂಡಿದ್ದು ತಾರತಮ್ಯದ ನೆಲೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತವೆ.

ಶಾಲೆಯ ಮುಂದೆ ಗೋಶಾ ಗಾಡಿಗಳನ್ನು ನಿಲ್ಲಿಸಿದುದು ಮುಸ್ಲಿಮರನ್ನು ಕೆರಳಿಸಿತ್ತು. ಉರ್ದು ಶಾಲೆಗೆ ಹೋಗುವ ಬಾಲಕಿಯರನ್ನು ಹೊತ್ತ ಗೋಶಾ ಗಾಡಿಯು ವಿದ್ಯಾರ್ಥಿಗಳ ಚಳವಳಿ ನಡೆದ ಸಂದರ್ಭದಲ್ಲಿ ಎ.ವಿ. ಸ್ಕೂಲಿನ ಮುಂದೆ ನಿಲ್ಲಸಲಾಗಿತ್ತು. ಇದೂ ಸಹಾ ಮುಸ್ಲಿಂ ಜನಾಂಗಕ್ಕೆ ಹಿಂದೂಗಳ ಮೇಲೆ ಕೋಪ ಬರಲು ಕಾರಣವಾಗಿತ್ತು ಎನ್ನಲಾಗಿದೆ.

ಮಸೀದಿಯ ಮುಂದೆ ದೇವಾಲಯ ಬೆಳೆಯುತ್ತಿದೆ ಎನ್ನುವ ಕಾರಣದಿಂದಾಗಿ ಗೂಡಿನ ಬಗೆಗೆ ಫಿರ್ಯಾದು ದಿವಾನರ ಬಳಿಗೆ ಹೋಯಿತು. ದೇವಾಲಯದ ಪೂಜೆಗೆ ಬಳಸುವ ಪ್ರಕ್ರಿಯೆಗಳು ಅಲ್ಲಿನ ಮಸೀದಿಗೆ ಹೋಗುವ ಜನರಿಗೆ ಅಡ್ಡಿಯನ್ನುಂಟುಮಾಡುತ್ತಿದೆ ಎನ್ನುವ ಕಾರಣ ಕೊಡುತ್ತಾರೆ. ಆದರೆ ಎಷ್ಟೋ ಕೋಮು ಸಂಯಮ ತಾಣಗಳು ಇಂದು ಕರ್ನಾಟಕದಲ್ಲಿದೆ. ಇಂತಹ ಕ್ಷುಲಕ ಕಾರಣಗಳು ಎರಡು ಜನಾಂಗದವರಲ್ಲಿ ಭಿನ್ನಾಭಿಪ್ರಾಯಗಳನ್ನು ಹರಡಲು ಕಾರಣವಾದವು. ಅಲ್ಲದೆ ದೊಡ್ಡ ಗಲಭೆಗೂ ಕಾರಣವಾಯಿತು.

ಸಾರ್ವಜನಿಕ ಸ್ಥಳ ಎನ್ನುವುದನ್ನು ಬಿಟ್ಟರೆ ಗಣೇಶನಿಗೆ ಗೂಡು ಕಟ್ಟಲು ಯಾವುದೇ ಅಡ್ಡಿಯಿರಲಿಲ್ಲ. ಎರಡೂ ಕೋಮಿನವರು ಸಹಕಾರ, ಸಂಯಮದಿಂದ ಇದ್ದದ್ದೇ ಆದರೆ ಇಲ್ಲಿ ಯಾವುದೇ ತಾರತಮ್ಯ, ಭಿನ್ನಾಭಿಪ್ರಾಯಗಳು ತಲೆದೋರುತ್ತಿರಲಿಲ್ಲ. ಒಟ್ಟಿನಲ್ಲಿ ಇಲ್ಲಿ ಭಿನ್ನಭಿಪ್ರಾಯಗಳಿಂದಾಗಿಯೇ ಕೋಮು ಗಲಭೆ ಆರಂಭವಾಯಿತು.

ಅಡಿಟಿಪ್ಪಣಿಗಳು

೧. ರಾಜಶೇಖರ್ ಎಸ್., ಫಣಿರಾಜ ಕೆ., ಫಕೀರ್ ಮುಹಮ್ಮದ್ ಕಟ್ಪಾಡಿ., **ಕೋಮುವಾದದ ರಾಜಕೀಯ,** ಪು.೭

೨. ಬರಗೂರು ರಾಮಚಂದ್ರಪ್ಪ, ರಂಜಾನ್‌ದರ್ಗಾ, **ಕೋಮುವಾದ,** ಪು.೨

೩. ಅದೇ, ಪು.೨

೪. ಕೃಷ್ಣಮೂರ್ತಿ ಬಿ., **ಕೋಮುವಾದ,** ಪು.೧೯

ಅಧ್ಯಾಯ ೫

ಸರ್.ಎಂ.ವಿಶ್ವೇಶ್ವರಯ್ಯನವರ ಸಮಿತಿಯ ನೇಮಕ ಹಾಗೂ ವಿಚಾರಣೆ

೫

ಸರ್.ಎಂ.ವಿಶ್ವೇಶ್ವರಯ್ಯನವರ ಸಮಿತಿಯ ನೇಮಕ ಹಾಗೂ ವಿಚಾರಣೆ

ಒಟ್ಟಿನಲ್ಲಿ ಗಲಭೆಯು ಅಂತೂ ಇಂತೂ ತಣ್ಣಗಾಯಿತು. ಆ ಸಂದರ್ಭದಲ್ಲಿ ಎಚ್.ಕೆ. ವೀರಣ್ಣಗೌಡ, ಪಿ.ಆರ್. ರಾಮಯ್ಯ, ತಿ.ತಾ. ಶರ್ಮ, ತಗಡೂರು ರಾಮಚಂದ್ರರಾವ್, ವೀರಕೇಸರಿ, ಸೀತರಾಮಶಾಸ್ತ್ರಿ, ಆನೇಕಲ್ಲಿನ ಸರ್ವಜ್ಞಭಟ್ಟರು ಮೊದಲಾದ ೬೨ ಮಂದಿಯ ಮೇಲೆ ಪೊಲೀಸರು ಕೇಸು ಹಾಕಿದರು. ಆದರೆ ಗಲಭೆ ನೇರವಾಗಿ ಕಾರಣರಾಗಿದ್ದ ಆರೋಪಿಗಳನ್ನು ಗುಂಡು ಹಾರಿಸಿದವರನ್ನು ಬಂಧಿಸಿರಲಿಲ್ಲ. ಹಾಗಾಗಿ ಸರ್ಕಾರದ ಈ ಕ್ರಮದ ಬಗೆಗೆ ಸಾರ್ವಜನಿಕರಲ್ಲಿ ಅಸಮಧಾನ ಭುಗಿಲೆದ್ದಿತು.

ಗಣೇಶ ಗಲಾಟೆಯ ಬಗೆಗೆ ಅನೇಕ ವದಂತಿಗಳು ಹರಡಿದವು. ಹೆಂಗಸರ ಮಾನಭಂಗ ಆಗಿದೆಯಂತೆ, ಹಿಂದೂಗಳು ಬಹಳ ಜನ ಸತ್ತರಂತೆ, ಮಕ್ಕಳ ಕೈಕಾಲು ಮುರಿದಿವೆಯಂತೆ, ಅಬ್ಬಾಸ ಖಾನರ ಮನೆಯಲ್ಲಿ ಜನರನ್ನು ಕೊಂದಿದ್ದಾರಂತೆ ಹೀಗೆ ಹಲವು ವದಂತಿಗಳು ನಗರದ ಸುತ್ತ ಮುತ್ತಲೆಲ್ಲಾ ಹರಡಿ, ನಗರದ ಸ್ಥಿತಿ ಇನ್ನು ಪ್ರಕ್ಷುಬ್ಧವಾಗಿಯೇ ಇದ್ದಿತು. ಇದಕ್ಕೆ ಪುಷ್ಠಿ ನೀಡುವಂತೆ ಕೆಲ ಮುಸ್ಲಿಂ ಜನರು ಹಿಂದೂ ಮೇಲಾಧಿಕಾರಿಗಳಿಗೆ ಹೀಗೆ ಪತ್ರ ಬರೆದಿದ್ದರು– "ಅಬ್ಬಾಸ್ ಖಾನ್‌ರ ಮನೆಯಲ್ಲಿ ನಡೆಸಿದಂತೆ ರಕ್ತದ ಕೋಡಿಯನ್ನೇ ಹರಿಸುತ್ತೇವೆ" ಎಂಬಿತ್ಯಾದಿ. ಹಾಗಾಗಿ ಗಲಭೆಯ ಬಗೆಗೆ ಹಲವಾರು ಉಹಾಪೋಹಗಳು ಜನ ಮನಸ್ಸಿನಲ್ಲಿ ಉಳಿಯಿತು. ಇದು ಸರ್ಕಾರವು ಮುಸ್ಲಿಂ ಆಪ್ತತೆಯನ್ನು ಕಾಯ್ದುಕೊಳ್ಳುತ್ತಿದೆ ಎಂಬ ವಾದಗಳು ಕೇಳಿ ಬರಲಾರಂಭಿಸಿದವು.

ಈ ಗಲಭೆಯ ಬಗೆಗಿನ ಸುದ್ದಿಯು ಲಂಡನ್ನಿನ 'ಡೇಲಿ ಮೇಲ್' ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಈ ಸಂದರ್ಭ ಮೈಸೂರು ಸರ್ಕಾರವನ್ನು ಪೇಚಿಗೆ ಸಿಲುಕಿಸಿತು. ಒಂದು ಕೋಮಿನ ಪರವಾಗಿ ಸರ್ಕಾರದ ನೀತಿ ರಚನೆಯಾಗುತ್ತಿದೆ ಎಂಬ ಕೂಗು ಸರ್ಕಾರದ ಬಗೆಗೆ ಜನರಲ್ಲಿ ಭಾವನೆ ಬೆಳೆಯಿತು. ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ ಗುಂಡು ಹಾರಿಸಲ್ಪಟ್ಟ ಸುದ್ದಿಯನ್ನು ನಿರಾಕರಿಸಿದರು. ಆದರೆ 'ಇಂಡಿಯನ್ ಡೇಲಿ ಮೇಲ್' ಎಂಬ ಬೊಂಬಾಯಿಯಿಂದ ಪ್ರಕಟಗೊಳ್ಳುತ್ತಿದ್ದ ಪತ್ರಿಕೆಯು ಭುಜದಲ್ಲಿ ಗುಂಡು ತಾಕಿದ್ದ ಚಂದ್ರರಾಜ

ಎಂಬ ಬಾಲಕನ ಚಿತ್ರ ಪ್ರಕಟಿಸಿತು. ಇದು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ನಡೆದು ಸರ್ಕಾರ ಸುಳ್ಳು ಪ್ರಕಟಣೆ ಹೊರಡಿಸಿದೆ ಎಂಬುದಾಗಿ ನಿಂದನೆಗೆ ಗುರಿಯಾಬೇಕಾಯಿತು. ಹೀಗೆ ಗಣಪತಿ ಗಲಭೆಯಿಂದ ಸರ್ಕಾರಕ್ಕೆ ಮುಖಭಂಗ ವಾದಂತಾಯಿತು. ಸ್ವತಃ ಮಹಾರಾಜರೇ ಮಿರ್ಜಾರವರಿಗೆ ಸಹಾನುಭೂತಿ ತೋರಿಸುತ್ತಾ ಈ ಘಟನೆಯಿಂದ ನಿಮ್ಮ ಆರೋಗ್ಯ ಕೆಡದಿರಲೆಂದು ಈ ಪತ್ರವನ್ನು ಬರೆದರು.

ಒಟ್ಟಿನಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಯಾವುದೇ ಮುಸ್ಲಿಂ ವ್ಯಕ್ತಿಗೂ ಶಿಕ್ಷೆ ಆಗಿರಲಿಲ್ಲ. ಹಾಗಾಗಿ ಒಂದು ಸಮಿತಿಯನ್ನು ನೇಮಿಸಲು ಜನರು ಒತ್ತಾಯಿಸಿದರು. ಗಣಪತಿ ಗಲಾಟೆಯ ವಿಚಾರಣೆ ನಡೆಯಬೇಕೆಂದು ಸಂಪಿಗೆ ವೆಂಕಟಪತಯ್ಯನವರ ನೇತೃತ್ವದಲ್ಲಿ ಪ್ರಬಲವಾಗಿ ಚಳವಳಿ ಮಾಡಿದರು. ಮೊದಲು ಪೊಲೀಸ್ ಅಧಿಕಾರಿಗಳಾದ ಇವರು ನಂತರ ರಾಜಕೀಯ ಕ್ಷೇತ್ರದ ಪ್ರಬಲ ವ್ಯಕ್ತಿಯಾಗಿದ್ದರು. ಮಿರ್ಜಾ ಇಸ್ಮಾಯಿಲ್‌ರು ಸ್ವಜನ ಪಕ್ಷಪಾತಿ ಎಂಬ ಕೂಗು ಪ್ರಬಲವಾಗುತ್ತಾ ಹೋಯಿತು. ಇನ್ನೊಂದು ಕಡೆ ಜನತೆಯು ಸಹಾ ಗಣಪತಿ ಗಲಾಟೆಗೆ ಸಂಬಂಧಿಸಿದಂತೆ ವಿಚಾರಣೆಯನ್ನು ಭಾರತ ಸರ್ಕಾರವೇ ನಡೆಸಬೇಕೆಂದು ಕೂಗೆಬ್ಬಿಸಿತು. ಅಂತೆಯೇ ಬ್ರಿಟೀಷ್ ಭಾರತ ಸರ್ಕಾರವು ತನಿಖೆ ನಡೆಸುವ ಸೂಚನೆಯನ್ನು ನೀಡಿತು. ಅಷ್ಟರಲ್ಲಿಯೇ ಮೈಸೂರು ಸರ್ಕಾರವು ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ೬ ಜನರ ವಿಚಾರಣಾ ಸಮಿತಿಯನ್ನು ನೇಮಿಸಿತು.

ಅಂತೂ ಕೊನೆಗೂ ಸಮಿತಿಯು ನೇಮಕಗೊಂಡಿತು. ಸರ್ಕಾರದ ಬಗೆಗೆ ಜನತೆಯಲ್ಲಿ ನಂಬಿಕೆ ಉಳಿಸಿಕೊಳ್ಳುವಲ್ಲಿ ಇದೊಂದು ಪರ್ಯಾಯ ಮಾರ್ಗವಾಗಿದ್ದಿತು. ಸಮಿತಿಯ ನೇಮಕದಲ್ಲಿ ಮಾತ್ರ ಸರ್ಕಾರವು ಎಡವಲಿಲ್ಲ. ಕಾರಣ ಆಗಲೇ ಬಹಳ ಜನಪ್ರಿಯರಾಗಿದ್ದಂತಹ ಉತ್ತಮ ಸ್ಥಾನಮಾನವನ್ನು ಹೊಂದಿದ್ದ ವಿಶ್ವೇಶ್ವರಯ್ಯನವರನ್ನೇ ನೇಮಿಸಿತು. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ವಿಶ್ವೇಶ್ವರಯ್ಯನವರು ಬ್ರಾಹ್ಮಣಪರ ಎಂಬುದು ಆ ವೇಳೆಗಾಗಲೇ ಪ್ರಚಾರದಲ್ಲಿತ್ತು. ಬ್ರಾಹ್ಮಣರಿಗೆ ವಿಶ್ವೇಶ್ವರಯ್ಯನವರ ನೇಮಕ ಆದದ್ದು ಸಮಧಾನ ತಂದಿತ್ತು. ಈಗ ಮೊತ್ತೊಮ್ಮೆ ಕೆಲ ವದಂತಿಗಳು ಹರಡಲಾರಂಭಿಸಿದವು. ಉದಾಹರಣೆಗೆ ಅಬ್ಬಾಸ್ ಖಾನ್ ಹಾಗೂ ಮಿರ್ಜಾರವರು ಅಧಿಕಾರದಿಂದ ಕೆಳಗೆ ಇಳಿಯಬೇಕಾಗುತ್ತದೆ ಇತ್ಯಾದಿ.

ವಿಚಾರಣಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು

೧. ಸರ್.ಎಂ.ವಿ. ವಿಶ್ವೇಶ್ವರಯ್ಯನವರು : ಅಧ್ಯಕ್ಷರು

೨. ಜಸ್ಟೀಸ್ ಡಿ.ಕೆ. ರಾಮರಾವ್ : ಸದಸ್ಯರು

೩. ಎಚ್.ಜಿ. ಬಸಯ್ಯ : ಸದಸ್ಯರು

೪. ಗುಲಾಂ ಅಹಮದ್ ಕಲಾಮಿ : ಸದಸ್ಯರು

೫. ವಿ. ಮಾಣಿಕ್ಯವೇಲು ಮೊದಲಿಯಾರ್ : ಸದಸ್ಯರು

೬ ಬ್ಯಾರಿಸ್ಟರ್ ಬಿ. ನಾಗಪ್ಪ : ಸದಸ್ಯರು

೭ ಮಿಸ್ಟರ್ ರಾಲ್ಫ್ ನೈ : ಸದಸ್ಯರು

ವಿಚಾರಣಾ ಸಮಿತಿಯ ನೇಮಿಸಿದ್ದು ೧೯೨೮ರ ಆಗಸ್ಟ್‌ರಂದು

ಈ ಸಮಿತಿಯು ಡ್ಯಾಲಿ ಮೆಮೋರಿಯಲ್ ಹಾಲಿನಲ್ಲಿ (ಈಗ ಮಿಥಿಕ್ ಸೊಸೈಟಿ) ಸೆಪ್ಟಂಬರ್ ೧೨ ರಿಂದ ೩೦ದಿನಗಳ ಕಾಲ ವಿಚಾರಣೆ ನಡೆಸಿತು.[೧] ಇಲ್ಲಿ ಒಟ್ಟು ೧೫೬ ಸಾಕ್ಷಿಗಳನ್ನು ವಿಚಾರಿಸಿತು. ೮ ಸಾಕ್ಷಿಗಳು ಅಂತರಂಗವಾಗಿ ಸಾಕ್ಷಿ ನೀಡಿದರು. ೨೮ ಜನ ಬಹಿರಂಗವಾಗಿಯೂ, ಅಂತರಂಗವಾಗಿಯೂ ಸಾಕ್ಷ್ಯ ನೀಡಿದರು.[೨] ಉಳಿದವರು ಬಹಿರಂಗವಾಗಿಯೇ ಸಾಕ್ಷಿ ನೀಡಿದರು.

ಈ ವಿಚಾರಣೆ ನಡೆದಾಗ ಅನೇಕ ಅಧಿಕಾರಿಗಳು, ಗಣ್ಯವ್ಯಕ್ತಿಗಳು ಸಾಕ್ಷ್ಯ ನೀಡಿದ್ದಾರೆ. ಅವುಗಳಲ್ಲಿ ಚಂದ್ರರಾಜ ಎಂಬ ಮರಾಠಿ ಹುಡುಗನ ಸಾಕ್ಷ್ಯ ಬಹಳ ಗಂಭೀರವಾದುದಾಗಿದೆ. ಪೊಲೀಸ್ ಅಧಿಕಾರಿಗಳೂ, ಕಂಟ್ರೋಲರ್ ಮುಂತಾದವರೂ ಸೂಕ್ತವಾದ ಹೇಳಿಕೆಗಳನ್ನಿತ್ತಿದ್ದಾರೆ.

ಸಾಕ್ಷಿ ನೀಡಿದ ಅಂದಿನ ಮುಖ್ಯ ಅಧಿಕಾರಿಗಳು ಹಾಗೂ ಗಣ್ಯವ್ಯಕ್ತಿಗಳು

೧. ಸಿ. ಮಾಚಯ್ಯ, ಬೆಂಗಳೂರು ಸಿಟಿ ಮುನಿಸಿಪಲ್ ಕಮಿಷನರ್

೨. ಅಬ್ಬಾಸ್ ಖಾನ್, ಸಿಟಿ ಮುನಿಸಿಪಾಲಿಟಿ ಅಧ್ಯಕ್ಷರು

೩. ಆರ್. ತಮ್ಮಾಜಿರಾವ್, ಸ್ಪೆಷಲ್ ಮ್ಯಾಜಿಸ್ಟ್ರೇಟ್

೪. ತಿರುಮಲೆ ತಾತಾಚಾರ್ಯ ಶರ್ಮರವರು, ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರು

೫. ಬಿ. ಶ್ರೇಷಾದ್ರಿ ಅಯ್ಯರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್

೬. ಎಸ್. ನಂಜುಂಡಯ್ಯ, ಗಣೇಶನ ಗೂಡು ಕಟ್ಟಿಸಿಕೊಟ್ಟ ಕಂಟ್ರಾಕ್ಟರ್

೭. ಜಾರ್ಜ್ ಮಾಥನ್, ಮಂತ್ರಾಲೋಚನಾ ಸಭೆಯ ಪ್ರಥಮ ಸದಸ್ಯರು

೮. ಎಸ್. ಹಿರಣ್ಣಯ್ಯ, ಐ.ಜಿ.ಪಿ.

೯. ಬಿ.ಬಿ. ಹೆಬಿಳಿಕಾರ್, ಜಿಲ್ಲಾ ಮ್ಯಾಜಿಸ್ಟ್ರೇಟರ್

೧೦. ಜಾನ್ ಅಪ್ಪಾಜಿ, ಸುಲ್ತಾನ್ ಪೇಟೆಯ ಎ.ವಿ. ಸ್ಕೂಲಿನ ಮುಖ್ಯೋಪಧ್ಯಾಯರು

೧೧. ಎನ್.ಎಸ್. ಸುಬ್ಬರಾವ್, ಡಿ.ಪಿ.ಐ

೧೨. ಸಿರಾಜುದ್ದೀನ್ ಮಹಮ್ಮದ್, ಖಿ.ಎಸ್.ಪಿ

೧೩. ಬಿ.ಎಚ್. ಸಂಜೀವಪ್ಪ, ಸಿಟಿ ಮಾರ್ಕೆಟ್ ಕಂಟ್ರಾಕ್ಟರ್

೧೪. ಎಂ.ಕೆ. ನರಸಿಂಹ ಅಯ್ಯಂಗಾರ್, ಎಸ್.ಪಿ.

೧೫. ಕೆ. ಸಿದ್ದರಾಮಪ್ಪ, ಸೆಂಟ್ರಲ್ ಜೈಲ್ ಸೂಪರಿಡೆಂಟರು.

ವಿಚಾರಣೆಯಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದವರು

೧.	ಹಿಂದುಗಳ ಪರವಾಗಿ	:	ಸಂಪಿಗೆ ವೆಂಕಟಪತಯ್ಯ
೨.	ಮಹಮದೀಯರ ಪರವಾಗಿ	:	ಮಹಮದ್ ಷರೀಫ್ ಖಲೀಲ್
೩.	ವಿದ್ಯಾರ್ಥಿಗಳ ಪರವಾಗಿ	:	ಕೆ. ಶಾಮಣ್ಣ
೪.	ಪತ್ರಿಕೆಗಳ ಪರವಾಗಿ	:	ವಿ. ಎಸ್. ಸಂಜೀವರಾವ್

ಪ್ರಧಾನ ಸಾಕ್ಷಿಗಳು

ಚಂದ್ರರಾಜ್ : 'ಇಂಡಿಯನ್ ಡೇಲಿ ಮೇಲ್' ಎಂಬ ಬೊಂಬಾಯಿಯಿಂದ ಹೊರಡಿಸುತ್ತಿದ್ದ ಪತ್ರಿಕೆಯಲ್ಲಿ ಈ ಚಂದ್ರರಾಜನ ಭಾವಚಿತ್ರ ಸಹಿತ ಅಚ್ಚಾಗಿತ್ತು. ಈ ಹುಡುಗನು ಹನ್ನೆರೆಡು ವರ್ಷ ವಯಸ್ಸಿನವನು. ಇವನಿಗೆ ಓದು ಬರಹ ಬರುತ್ತಿರಲಿಲ್ಲ. ದರ್ಜಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂಬುದಾಗಿ ವರದಿಯಿಂದ ತಿಳಿದುಬರುತ್ತದೆ "ಗಣೇಶ ಇರುವಲ್ಲಿಗೆ ಏಕೆ ಬಂದೆ" ಎಂಬ ಪ್ರಶ್ನೆಗೆ "ಮಂಗಳಾರತಿ ಆದ ಮೇಲೆ ಪ್ರಸಾದ ತೆಗೆದುಕೊಳ್ಳುವುದಕ್ಕೆ" ಎಂಬ ಉತ್ತರವನ್ನು ಈ ಬಾಲಕ ನೀಡಿದ್ದಾನೆ. ಇವನು ತನ್ನ ಸಾಕ್ಷ್ಯದಲ್ಲಿ ಅಬ್ಬಾಸ್ ಖಾನ್ ಮನೆಯಿಂದಲೇ ಯಾರೋ ಹೊಡೆದ ಗುಂಡಿನೇಟು ತನಗೆ ಬಿದ್ದಿತೆಂದು ಸ್ಪಷ್ಟವಾಗಿ ಹೇಳಿದ್ದಾನೆ.[೩]

ವಿಚಾರಣೆಗೆ ಸಂಬಂಧಿಸಿದಂತೆ ಈ ಕೆಳಗೆ ಎರಡೂ ಸಮುದಾಯದವರು ನೀಡಿರುವ ಸಾಕ್ಷ್ಯಗಳನ್ನು ವರದಿಯಲ್ಲಿ ಈ ಕೆಳಗಿನಂತೆ ಕ್ರೋಢೀಕರಿಸಿ ಹೇಳಲಾಗಿದೆ. ಮತ್ತು ಈ ಭಾಗದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಸಮಿತಿಯು ಜವಾಬ್ದಾರಿ ಅಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೆ.

ವರದಿಯಲ್ಲಿ ಹಿಂದೂ ಜನರ ಪರವಾಗಿ ಅಭಿಪ್ರಾಯಗಳನ್ನು ಒಂದು ಕಡೆ ಕ್ರೋಢೀಕರಿಸಿದ್ದರೆ ಇನ್ನೊಂದೆಡೆ ಮುಸ್ಲಿಂ ಸಾಕ್ಷಿಗಳ ಅಭಿಪ್ರಾಯ ವಿಮರ್ಶಾ ವರದಿಯಲ್ಲಿ ವಿವರಿಸಿದ್ದಾರೆ. ವರದಿಗಾರರು ತಿಳಿಸುವಂತೆ ಕೆಲವು ಹಿಂದೂಗಳು ಮುಸಲ್ಮಾನರ ಹೇಳಿಕೆಗಳನ್ನು ಬೆಂಬಲಿಸಿದ್ದಾರೆ ಎಂಬುದಾಗಿಯೂ ತಿಳಿಸಿದ್ದಾರೆ. ಒಟ್ಟಿನಲ್ಲಿ ವಿಚಾರಣೆಯ ಸಾರಾಂಶವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಗಲಭೆಗೆ ಮುನ್ನವೇ ಹಿಂದೂಗಳು ನೊಂದಿರಲು ಕಾರಣಗಳು

೧. ೧೯೨೮ ಜೂನ್‌ಗೆ ಮುನ್ನ ನಗರವನ್ನು ಉತ್ತಮಗೊಳಿಸಲು ರಸ್ತೆಗಳನ್ನು ಅಗಲೀಕರಣಗೊಳಿಸುವ ಪಕ್ರಿಯೆಯಲ್ಲಿ ಅಬ್ಬಾಸ್‌ಖಾನ್‌ರ ಮಾರ್ಗದರ್ಶನದಲ್ಲಿ ಕೆಲವು ಅಶ್ವಥ ಕಟ್ಟೆಗಳಿಗೆ ಕೊಡಲಿ ಪೆಟ್ಟು ಕೊಡಲಾಗಿತ್ತು. ಹಿಂದೂ ಮಹತ್ವ ಪಡೆದಿದ್ದ ಈ ಅರಳಿ ಮರಗಳನ್ನು ೧೯೨೭ರ ಡಿಸೆಂಬರ್‌ನಲ್ಲಿ ಯಲಹಂಕ ದ್ವಾರದ ಚೌಕದಲ್ಲಿ ಶ್ರೀ ಆಂಜನೇಯ ದೇವಸ್ಥಾನಕ್ಕೆ ಸೇರಿದ ಎರಡು ಅಶ್ವಥ ಕಟ್ಟೆಗಳನ್ನು ತೆಗೆಸಲಾಯಿತು. ನಂತರ ೧೯೨೮ ಜೂನ್ ನಲ್ಲಿ ಕಲಾಸಿಪಾಳ್ಯಂ ಮತ್ತು ಫೋರ್ಟ್‌ನಲ್ಲಿ ಇನ್ನೆರಡು ಕಟ್ಟೆಗಳನ್ನು ತೆಗೆಸಲಾಯಿತು. ಇದೇ ರಸ್ತೆ ಅಗಲೀಕರಣದಲ್ಲಿ ರಸ್ತೆ ಮಧ್ಯೆ ಕಂಡುಬರುವ ಮುಸಲ್ಮಾನ್ ಗೋರಿಗಳನ್ನು ಮುಟ್ಟದೇ ಹಾಗೆ ಬಿಡಲಾಗಿತ್ತು. (ಉದಾಹರಣೆಗೆ ಸಿಟಿ ಮಾರ್ಕೆಟ್ಟಿನ ಎದುರಿನ ಗೋರಿ) ಈ ವಿಷಯವನ್ನು ಸಾಕ್ಷ್ಯಗಳು ವಿವರವಾಗಿ ತಿಳಿಸಿ ಮುನ್ಸಿಪಾಲಿಟಿ ಅಧ್ಯಕ್ಷರು ಮುಸಲ್ಮಾನರಾಗಿದ್ದರಿಂದಲೇ ಹೀಗೆ ಮಾಡಲು ಸಾಧ್ಯ ಎಂಬುದಾಗಿ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದ್ದರು.

೨. ಗಣೇಶನ ವಿಗ್ರಹವನ್ನು ಗೂಡಿನಲ್ಲಿ ಪುನಃ ಸ್ಥಾಪಿಸಬಾರದು ಎಂಬ ನಿರ್ದೇಶಕರ ಆದೇಶ, ದಿವಾನರಿಗೆ ಕೊಟ್ಟ ದೂರು ಇವುಗಳಿಗೆಲ್ಲಾ ಅಬ್ಬಾಸ್ ಖಾನರ ಕೈವಾಡವೇ ಕಾರಣ. ಎಂಬುದಾಗಿ ಹಿಂದೂ ಸಾಕ್ಷಿಗಳು ಸಾಕ್ಷ್ಯ ನೀಡಿ ಪ್ರಮಾಣ ಮಾಡಿದರು. ಜೂನ್ ೨೧ ರಂದು ಅಬ್ಬಾಸ್‌ಖಾನ್‌ರು ಅನುಮತಿ ಇಲ್ಲದೇ ವಿಗ್ರಹಕ್ಕೆ ಗೂಡೊಂದನ್ನು ಕಟ್ಟಲು ಬಿಟ್ಟಿರುವುದಕ್ಕೆ ಶಾಲೆಯ ಮೇಲ್ವಿಚಾರಕರನ್ನು ಜರೆದಿದ್ದರು. ಈ ವಿಷಯವನ್ನು ಪ್ರಸ್ತಾಪಿಸುತ್ತಾ ಅಬ್ಬಾಸ್‌ಖಾನ್‌ರೇ ಈ ಕೋಮುಗಲಭೆಗೆ ಮೂಲ ಕಾರಣ ಎಂಬುದಾಗಿತ್ತು. ಒಟ್ಟಿನಲ್ಲಿ ಹಿಂದೂ ಸಾಕ್ಷಿಗಳ ಪ್ರಕಾರ 'ವರ್ಷಗಳಿಂದ ವಿಗ್ರಹ ಅಲ್ಲೇ ಇದೆ ಮುಂದೆ ಕೂಡ ಅಲ್ಲೇ ಇರುವ ಹಕ್ಕು ಅದಕ್ಕಿದೆ, ಅದಕ್ಕಾಗಿ ಒಂದು ಗೂಡನ್ನು ಕಟ್ಟುವುದರಲ್ಲಿ ತಪ್ಪೇನು' ಎಂಬುದು ಹಿಂದುಗಳ ಪ್ರಶ್ನೆ.[೪]

೩. ವಾರ್ತಾ ಪತ್ರಿಕೆಯವರ ವಿಚಾರಣೆ: ೧೯೨೮ ಜೂನ್ ೨೭ರಂದು ಕನ್ನಡ ದಿನಪತ್ರಿಕೆ "ವೀರಕೇಸರಿ" ಪತ್ರಿಕೆಯು ವಿಗ್ರಹ ಮರುಪ್ರತಿಷ್ಠಾಪನೆಗಾಗಿ ನೀಡಿದ ವಿಜ್ಞಾಪನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಅದೇ ರೀತಿ ೧೯೨೮ ಜೂನ್ ೨೯ರಂದು ವಾರ ಪತ್ರಿಕೆ "ವಿಶ್ವ ಕರ್ನಾಟಕ" ಸಂಪಾದಕರು ಸರ್ಕಾರಕ್ಕೆ ಬರೆದ ಕಾಗದವನ್ನು ನಿರ್ದೇಶಕರು ಒಪ್ಪಲೇ ಇಲ್ಲ. ಪತ್ರಿಕೆಗಳಲ್ಲಿ ಪ್ರಕಟಗೊಂಡಾಗಲಾದರೂ ಸರ್ಕಾರವು ಎಚ್ಚೆತ್ತುಕೊಂಡು ವಿಗ್ರಹವನ್ನು ಸ್ವಸ್ಥಾನದಲ್ಲಿಡಬಹುದಿತ್ತು.

ಘಟನೆಗೆ ಕಾರಣ

೧೧ ರಿಂದ ೧೪ ವರ್ಷ ವಯಸ್ಸಿನ ಹಿಂದೂ ಯುವಕರನ್ನೊಳಗೊಂಡ ಶಾಲೆಯ ವಿದ್ಯಾರ್ಥಿಗಳಿಗೆ ಗಣೇಶನನ್ನು ಪೂಜಿಸಿ ಅಭ್ಯಾಸ. ಆದ್ದರಿಂದ ಅವರು ಗಣೇಶನಿಗಾಗಿ ಒಂದು ಗೂಡನ್ನು ಕಟ್ಟಿಸುವ ತೊಂದರೆ ತೆಗೆದುಕೊಂಡರು. ಈ ವಿಗ್ರಹವನ್ನು ಗೂಡಲ್ಲಿ ಪುನಃ ಸ್ಥಾಪನೆ ಮಾಡಲು ಆಗುವುದಿಲ್ಲ ಎಂದಾಗ ಅವರಿಗೆ ಅತೀವ ದುಃಖ ಮತ್ತು ನೋವು ಆಗಿತ್ತು. ಇವರ ಪರವಾಗಿ ಹೋರಾಡಲು ಮುಂದೆ ಬಂದವರು ಎಚ್.ವಿ. ಸುಬ್ರಮಣ್ಯಂ, ರಾಮಲಾಲ್ ತಿವಾರಿ ಮತ್ತು ಭೀಮರಾವ್ ಈ ಮೂವರು ಬೆಂಬಲಕ್ಕೆ ಬಂದಾಗ ಸುಲ್ತಾನ್ ಪೇಟೆ ಶಾಲೆಯ ವಿದ್ಯಾರ್ಥಿಗಳ ಭಾವನೆಗಳು ಆಸ್ಫೋಟಗೊಂಡವು.

ವಿದ್ಯಾರ್ಥಿಗಳ ಮುಷ್ಕರ: ಅಧಿಕಾರಿಗಳು ಈ ಚಳುವಳಿಯನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದಾಗ ವಿದ್ಯಾರ್ಥಿಗಳು ಸತ್ಯಾಗ್ರಹಕ್ಕೆ ಶರಣಾಗಬೇಕಾಯಿತು. ಅಧಿಕಾರಿಗಳು ಘಟನೆ ಬೆಳೆಯುತ್ತಿದ್ದ ಗತಿಯನ್ನು ಗ್ರಹಿಸಿ ಕಾಲ ಮೀರುವ ಮುನ್ನ ವಿಗ್ರಹವನ್ನು ಪುನಃ ಸ್ಥಾಪಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಶಾಲೆಯ ಮುಂದೆ ಹುಡುಗರು ಮಳೆ, ಗಾಳಿಯಲ್ಲಿ ಆಹಾರವಿಲ್ಲದೆ ಕುಳಿತಿರುವಾಗ ಸ್ವಾಭಾವಿಕವಾಗಿ ಹಿಂದೂಗಳು ಮಕ್ಕಳಿಗೆ ಆಹಾರ ಇತ್ಯಾದಿಗಳನ್ನು ಕೊಟ್ಟರೆ ಕೆ.ಪಿ. ಪುಟ್ಟಣ ಚೆಟ್ಟಿ ದಿವಾನರಿಗೆ ಪತ್ರ ಬರೆದಿದ್ದರು. ಒಳಸಂಚು ಯಾವುದೂ ಇರಲಿಲ್ಲ. ವಿದ್ಯಾರ್ಥಿಗಳು ನಡೆಸಿದ ಚಳುವಳಿ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ನಡುವಣ ಕೋಮುವಾದದ ಪ್ರಶ್ನೆಯನ್ನಾಗಿ ಮಾಡಲು ಎಲ್ಲಾ ಹಿಂದುಗಳು ಪ್ರಯತ್ನಿಸಲಿಲ್ಲ. ಹಿಂದೂ ಕೋಮಿನವರಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆ ಇದಾಗಿತ್ತು" ಎಂಬುದು ಹಿಂದುಗಳ ವಾದ. ಅವರ ಕೊರಗೆಂದರೆ ವಿಗ್ರಹದ ಸ್ಥಾಪನೆಗೆ ಸರ್ಕಾರ ಹಸ್ತಕ್ಷೇಪ ಮಾಡಿದ್ದು. ಹೆಣ್ಣು ಮಕ್ಕಳ ಶಾಲೆಯ ಬಳಿ ಗೋಶಾ ಗಾಡಿಗಳನ್ನು ಸ್ವಲ್ಪ ಕಾಲ ನಿಲ್ಲಿಸಿದ್ದ ಘಟನೆಯನ್ನು ಮುಸ್ಲಿಂ ಜನತೆ ತಪ್ಪಾಗಿ ಗ್ರಹಿಸಿದ್ದಾರೆ. ಆ ಸಮಯದಲ್ಲಿ ದಾರಿಯಲ್ಲಿ ಜನಸಂದಣಿ ಅತಿಯಾಗಿದ್ದ ಕಾರಣ ಗಾಡಿಗಳು ಮುಂದೆ ಹೋಗಲು ಆಗುತ್ತಿರಲಿಲ್ಲ. ಇದಕ್ಕೆ ಆ ಹುಡುಗರು

ಜವಾಬ್ದಾರರಲ್ಲ. ನಂತರ ಗಣೇಶನ ವಿಗ್ರಹ ಸ್ಥಾಪನೆಗೆ ೨೯ರಂದು ಅನುಮತಿ ಸಿಕ್ಕರೂ ಸಹಾ ನಾಯಕರನ್ನು ಬಂಧಿಸಲಾಗಿತ್ತು. ಹಾಗಾಗಿ ಸತ್ಯಾಗ್ರಹ ಮುಂದುವರೆಯಿತು.

ಜುಲೈ ೩೦ರ ಗಲಾಟೆ : ಸೆಂಟ್ರಲ್ ಜೈಲ್ ಸಾರ್ವಜನಿಕ ಇಲಾಖೆ ಆಗಿತ್ತು. ದಿವಾನರ ಗೃಹಗಳಿಗೆ ವಿದ್ಯಾರ್ಥಿಗಳು ಹೋಗುವ ಅವಶ್ಯಕತೆ ಇರಲಿಲ್ಲ. ನಾಯಕರ ಬಿಡುಗಡೆಗಾಗಿ ಸೆಂಟ್ರಲ್ ಜೈಲಿಗೆ ಹೋದಾಗ ಸೆಂಟ್ರಲ್ ಜೈಲ್ ಮೇಲ್ವಿಚಾರಕರು ನಾಯಕರನ್ನು ಬಿಡುಗಡೆ ಗೊಳಿಸಲು ಶಕ್ತರಲ್ಲ ಎಂದು ತಿಳಿದಾಗ ವಿದ್ಯಾರ್ಥಿಗಳು ದಿವಾನರ ಮನೆಯ ಕಡೆ ಹೋದರು. ದಿವಾನರು ಸಹಾನುಭೂತಿಯಿಂದ ಮಾತನಾಡಿದರಾದರೂ ಉತ್ತರ ನೀಡದೆ ಹೊರಡಲು ಪ್ರಯತ್ನಿಸಿದರು. ಹುಡುಗರು ಅಲ್ಲಿಯೇ ಉಳಿಯಲು ನಿರ್ಧರಿಸಿದರು. ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ತನ್ನ ಛಾಟಿಯಿಂದ ಇವರನ್ನು ಚದುರಿಸಲು ಪ್ರಯತ್ನಿಸುವವರೆಗೂ ಇವರ ನಡತೆ ಶಾಂತಿಯುತವಾಗೇ ಇತ್ತು.

ಸಾರ್ವಜನಿಕ ಇಲಾಖೆಗಳ ಬಳಿ ಆ ಹುಡುಗರ ನಡತೆ ಶಾತಿಯಿಂದ ಕೂಡಿತ್ತು. ಯಾವುದೇ ಹಿಂಸಾತ್ಮಕ ಪ್ರವೃತ್ತಿ ಕಂಡುಬರಲಿಲ್ಲ. ದಿವಾನರ ಅಧಿಕಾರಿಗಳು ನಿಯಂತ್ರಿಸದೇ ಬಿಟ್ಟ ಕುದುರೆ ಸವಾರರು ಹುಡುಗರ ಮಧ್ಯೆ ಕುದುರೆಗಳನ್ನೋಡಿಸಿ ತಮ್ಮ ಈಟಿಗಳನ್ನು ಬಳಿಸಿ ಹುಡುಗರನ್ನು ಚೆಲ್ಲಾಪಿಲ್ಲಿಗೊಳಿಸಲು ಪ್ರಯತ್ನಿಸಿದಾಗ ಹುಡುಗರು ಕಲ್ಲು ತೂರಿದರು. ೧೨ ವರ್ಷದ ಹುಡುಗ ಚೊಕ್ಕಣ್ಣನ ಎಡ ಕಿವಿಯ ಮೇಲೆ ಸವಾರನೊಬ್ಬ ಈಟಿಯಿಂದ ಗಾಯಗೊಳಿಸಿದ. ವಿದ್ಯಾರ್ಥಿ ಮೈಲಾರಯ್ಯ ಬಿದ್ದು ಅವನ ಮೇಲೆ ಕುದುರೆ ಹೋಗಿ ಅವನ ಕಾಲು ಗಾಯವಾಗಿ ನಂತರ ಅದನ್ನು ಕತ್ತರಿಸಬೇಕಾಯಿತು. ಯುವಕರ ವಿರುದ್ಧ ಸವಾರರನ್ನು ಕರೆಸಿ, ಮಿಲಟರಿ ಶಕ್ತಿಯನ್ನು ಬಳಕೆ ಮಾಡಿದ್ದರಿಂದ ಪೋಷಕರ ಹಾಗೂ ಸಾಮಾನ್ಯ ನಾಗರೀಕರ ಕೋಪ ಹಾಗೂ ಸಹಾನುಭೂತಿ ಭುಗಿಲೆದ್ದವು.

ಮುಸಲ್ಮಾನರ ಕೋಪ ಹಾಗೂ ತಯಾರಿ : ಸಂಜೆ ಸೆರೆಯಾದವರನ್ನು ಬಿಡುಗಡೆ ಮಾಡಿದಾಗ ಎಲ್ಲವೂ ಶಾಂತಿಯಿಂದ ಕೊನೆಗೊಳ್ಳಬಹುದಾಗಿತ್ತು. ಆದರೆ, ಅದು ಹಾಗಾಗಲಿಲ್ಲ. ಗಣೇಶನ ವಿಗ್ರಹ ಪುನಃ ಸ್ಥಾಪನೆ ಆಗದೆ ಇರುವ ತನಕ ಮುಸಲ್ಮಾನರು ಸಹ ಸುಮ್ಮನಿದ್ದರು. ಅದು ಪುನಃ ಸ್ಥಾಪನೆಯಾದ ನಂತರ ಅಬ್ಬಾಸ್ ಖಾನ್ ಮತ್ತು ಸಾಮಾನ್ಯ ಮುಸಲ್ಮಾನ ಜನತೆ ಅಸಮಧಾನಗೊಂಡರು. ಅಂದು ಸಂಜೆ ಶಾಲೆಯ ಎದುರು ರಸ್ತೆ ಹಾಗೂ ಬೈಸಿಕಲ್ ಅಂಗಡಿಯ ಬಳಿ ಮುಸಲ್ಮಾನರ ಗುಂಪುಗಳು ಕಂಡು ಬಂದವು.[೬] ಅವರ ಚಲನ-ವಲನಗಳು ಅನುಮಾನಾಸ್ಪದವಾಗಿದ್ದವು. ಹಾಗೂ ವಿಗ್ರಹಕ್ಕೆ ತೊಂದರೆ ಮಾಡುವ ಸೂಚನೆಗಳು ಕಂಡು ಬಂದವು.

ಹಿಂದುಗಳ ಬೇಡಿಕೆಗೆ ತಲೆಬಾಗಿ ಸರ್ಕಾರದವರು ಸೆರೆಯಾದವರನ್ನು ಬಿಡುಗಡೆ ಮಾಡಿದಾಗ ತಳಮಳ ಹೆಚ್ಚಾಯಿತು. ಅಬ್ಬಾಸ್‌ಖಾನ್‌ರವರ ಸಹಾಯದಿಂದ ಶಾಲೆಯ ಸುತ್ತಮುತ್ತ ಇರುವ ಮುಸಲ್ಮಾನರು ಆಕ್ರಮಣಕ್ಕೆ ಸಿದ್ಧತೆ ನಡೆಸಿದ್ದರು. ಮುಸಲ್ಮಾನರ ಒಡೆತನದಲ್ಲಿದ್ದ ಸೈಕಲ್ ಅಂಗಡಿಯಲ್ಲಿ ಬೊಂಬಿನ ಲಾಟಿಗಳನ್ನು ಹಿಡಿದ ಜನರು ಸಣ್ಣ ಕಾರಣ ಸಿಕ್ಕರೆ ಸಾಕು ಎಂಬಂತೆ ಹಿಂದುಗಳ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದರು. ಮೆರವಣಿಗೆಯಲ್ಲಿನ ಹಿಂದೂ ಗುಂಪುಗಳು ಶಾಂತಿಯುತವಾಗಿದ್ದವು. ಏಕೆಂದರೆ, ಅವರಿಗೆ ಬೇಕಾಗಿದ್ದು ಸಿಕ್ಕಿತ್ತು. ಅವರಿಗೆ ಯಾರ ಮೇಲೂ ಕೋಪವಿರಲಿಲ್ಲ. ರಸ್ತೆಗಳಲ್ಲಿ ಮೆರವಣಿಗೆ ಹೋಗುವಾಗ ಯಾವುದೇ ಹಿಂಸೆಯಾಗಲೀ, ಅವ್ಯವಸ್ಥೆಯಾಗಲೀ ಇರಲಿಲ್ಲ.

ಮೆರವಣಿಗೆ ಬರುವುದಕ್ಕೆ ಸ್ವಲ್ಪ ಮುಂಚೆ ಎನ್. ವೆಂಕಟಸುಬ್ಬಯ್ಯ ಶಾಲೆಯ ಬಳಿ ಇದ್ದರು. ಅಬ್ಬಾಸ್ ಖಾನ್‌ರವರ ಮನೆಯ ಬಳಿ ಮತ್ತು ಸೈಕಲ್ ಅಂಗಡಿಯ ಬಳಿ ಮುಸಲ್ಮಾನರ ದೊಡ್ಡ ಗುಂಪೊಂದನ್ನು ವೆಂಕಟಸುಬ್ಬಯ್ಯ ಕಂಡರು. ಸುಮಾರು ಸಂಜೆ ೭.೩೦ರ ವೇಳೆಗೆ ಸಬ್‌ಇನ್ಸ್‌ಪೆಕ್ಟರ್ ಶೇಷಾದ್ರಿ ಅಯ್ಯರ್ ಕಂಡಂತೆ ೩ ಅಥವಾ ೪ ಮುಸಲ್ಮಾನರು ಅಬ್ಬಾಸ್ ಖಾನರ ಮನೆಯೊಳಗೆ ಹೋಗಿ ಬರುವುದನ್ನು ಕಂಡರು. ಮೆರವಣಿಗೆ ಹತ್ತಿರ ಬಂದಾಗ, ಪೊಲೀಸ್ ಸಾರ್ಜೆಂಟ್ ವೆಂಕಟೇಶಯ್ಯ ಕಂಡಂತೆ ೮೧೦ ಮುಸಲ್ಮಾನರು ಅಬ್ಬಾಸ್ ಖಾನ್‌ರ ಮನೆಯ ಒಳಗೆ ಹಾಗೂ ೧೦-೧೫ ಮುಸಲ್ಮಾನರು ಮನೆಯ ಹೊರಗೆ ಇದ್ದರು. ಮಾರ್ಕೆಟ್ ಗುತ್ತಿಗೆದಾರರಾದ ಸಂಜೀವಪ್ಪ ಕಂಡಂತೆ ೪-೫ ವ್ಯಕ್ತಿಗಳು ಅಬ್ಬಾಸ್‌ಖಾನ್‌ರವರ ಮನೆಯ ಆವರಣದಲ್ಲಿ ಠಳಾಯಿಸುತ್ತಿದ್ದರು. ಶ್ರೀನಿವಾಸ್ ಅಯ್ಯಂಗಾರರು ಭಾಷಣ ಮಾಡುವಾಗ ೧೦-೧೫ ಮುಸಲ್ಮಾನರು ಅವರ ಕಾರಿನ ಬಳಿ ಇದ್ದರು ಎಂದು ವಾಜಪೇಯಿ ವೆಂಕಟೇಶಯ್ಯ ಹೇಳಿದರು. ಗೊಂದಲದ ಸಮಯದಲ್ಲಿ ತಮ್ಮ ವಿರೋಧ ವ್ಯಕ್ತಪಡಿಸಿದ ಅಬ್ಬಾಸ್‌ಖಾನ್‌ರ ಆವರಣಕ್ಕೆ ಹೋದಾಗ ಅಲ್ಲಿ ಹಸಿರು ಬೊಂಬುಗಳನ್ನು, ಲಾಠಿ ಹಿಡಿದ ಜನರನ್ನು ಕಂಡೆವೆಂದು ಪಿ. ಸುಬ್ರಾಮ ಚೆಟ್ಟಿ ಮತ್ತು ವಾಜಪೇಯಿ ವೆಂಕಟೇಶಯ್ಯ ಹೇಳಿದ್ದಾರೆ.

ಗಲಭೆ ಕುರಿತು ಹಿಂದೂಗಳ ವರದಿ : ಅಬ್ಬಾಸ್‌ಖಾನ್‌ರ ಮನೆಯ ಬಳಿ ಮುಸಲ್ಮಾನರು ಗುಂಪುಗೂಡಿ, ಹಿಂದೂಗಳ ಮೇಲೆ ಅಕ್ರಮಣ ಮಾಡಲು ತಯಾರಾಗಿದ್ದರು. ನಾಯಕರ ಮೆರವಣಿಗೆ ಆಗಮಿಸಿದಾಗ, ವೀಕ್ಷಕರ ದೊಡ್ಡ ಗುಂಪೊಂದು ಅವರನ್ನು ಹಿಂಬಾಲಿಸಿತು. ಆದರೆ ಮುಂದೆ ಆಗಲಿರುವ ಘಟನೆಗಳ ಬಗ್ಗೆ ಅವರಿಗೆ ಪೂರ್ವಸೂಚನೆ ಇರಲಿಲ್ಲ. ನಾಯಕರೊಬ್ಬರ ಜೊತೆಗೆ ಆಗಮಿಸಿದ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರ ಕಾರು

ಶಾಲೆಯ ಬಾಗಿಲ ಬಳಿ ನಿಂತಿತು. ಅವರೊಂದು ಸಣ್ಣ ಭಾಷಣ ಮಾಡಿದರು. ವಿಗ್ರಹವನ್ನು ಪುನಃ ಸ್ಥಾಪಿಸಲು ಪಟ್ಟ ಶ್ರಮದ ಯಶಸ್ಸಿಗೆ ಮತ್ತು ನಾಯಕರು ಬಿಡುಗಡೆಯಾದುದಕ್ಕೆ ವಂದನೆಗಳನ್ನು ನೀಡುವ ಮಾತುಗಳು, ಮಂಗಳಾರತಿ ಆದ ನಂತರ ನಾಯಕರೆಲ್ಲ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಆ ಸಮಯಕ್ಕೆ ಸರಿಯಾಗಿ ಕಲ್ಲುಗಳು ಮತ್ತು ಹಳೆ ಪಾದರಕ್ಷೆಗಳನ್ನು ಅಬ್ಬಾಸ್‌ಖಾನ್‌ರ ಮನೆಯ ಕಡೆಯಿಂದ ಯಾರೋ ತೂರತೊಡಗಿದರು. ಯಾರೋ ಅಪಾಯ ಸೂಚಿಸಿ ಕೂಗು ಹಾಕಿದರು, ಆದರೆ ಏನಾಗುತ್ತಿದೆ ಎಂಬ ಅರಿವು ಜನರಿಗೆ ಬರುವ ಮುಂಚೆ ೫–೬ ಗುಂಡುಗಳು ಸೈಕಲ್ ಮನೆಯ ಮಹಡಿಯಿಂದ ಹೊಡೆಯಲ್ಪಟ್ಟವು.[೭] ಅದರ ಹಿಂದೆಯೆ ಅಬ್ಬಾಸ್‌ಖಾನ್‌ರ ಮನೆಯ ಮಹಡಿಯಿಂದ ೨–೩ ಗುಂಡುಗಳು ಹಾರಿದವು. ಆ ಗೊಂದಲ ಮತ್ತು ನುಗ್ಗಾಟದಲ್ಲಿ ಅಬ್ಬಾಸ್‌ಖಾನ್‌ರ ಮನೆಗೆ ಕೆಲವು ಹುಡುಗರನ್ನು ಎಳೆದುಕೊಂಡು ಹೋದರು ಎಂಬ ಕೂಗು ಕೇಳಿ ಬಂತು. ಅಬ್ಬಾಸ್‌ಖಾನ್‌ರ ಮನೆ ಒಳಗೆ ಮತ್ತು ಹೊರಗೆ ಇದ್ದ ಮುಸಲ್ಮಾನರು ಲಾಟಿಗಳನ್ನು ಹಿಡಿದು ಬಂದರು. ಎರಡು ಗುಂಪುಗಳಾಗಿ ಮಾಡಿಕೊಂಡು ಅಲ್ಲಿದ್ದ ಹಿಂದೂಗಳ ಮೇಲೆ ಲಾಟಿಯ ಸುರಿಮಳೆ ಸುರಿಸಲಾರಂಭಿಸಿದರು. ಕೈಯಲ್ಲಿ ಯಾವ ಆಯುಧವೂ ಇಲ್ಲದ ಹಿಂದೂಗಳು ಭೀತಿಯಿಂದ ಎಲ್ಲಾ ದಿಕ್ಕುಗಳಲ್ಲಿ ಓಡಿದರು.

ಸ್ವಲ್ಪ ಸಮಯದಲ್ಲೆ ರಸ್ತೆಗಳು ಖಾಲಿಯಾದವು, ಗಾಯಗೊಂಡವನ್ನು ಹೇಗೊ ಬೇರೆಡೆಗೆ ರವಾನಿಸಲಾಯಿತು. ಸಂಪೂರ್ಣ ಘಟನೆ ೨೦–೩೦ ನಿಮಿಷದಲ್ಲಿ ಮುಗಿದು ಹೋಯಿತು. ಅಬ್ಬಾಸ್‌ಖಾನ್ ರವರ ಮಹಡಿಯ ಕೋಣೆಯಲ್ಲಿ ನಾಲ್ಕು ವ್ಯಕ್ತಿಗಳು ಬಟ್ಟೆಯನ್ನು ಹೊದ್ದು ಅನುಮಾನಾಸ್ಪದ ರೀತಿಯಲ್ಲಿ ಬಿದ್ದಿದ್ದರು ಎಂದು ಹೇಳಲಾಗಿದೆ. ಪೊಲೀಸ್ ಅಧ್ಯಕ್ಷಕರು ಮತ್ತು ಜಿಲ್ಲಾ ನ್ಯಾಯಾಧೀಶರು ಭೇಟಿ ನೀಡಿದಾಗ ಅವರಿಗೆ ಪದೇ ಪದೇ ಜನ ವಿಜ್ಞಾಪಿಸಿಕೊಂಡರು. ಅಬ್ಬಾಸ್‌ಖಾನ್‌ರ ಮನೆಯಲ್ಲಿ ಶಸ್ತ್ರಾಸ್ತ್ರಗಳನ್ನು ಶೋಧಿಸಬೇಕು. ರೌಡಿಗಳನ್ನು ಸೆರೆ ಹಿಡಿಯಬೇಕು ಮತ್ತು ಕೆಲವು ಹುಡುಗರನ್ನು ಎಳೆದುಕೊಂಡು ಹೋಗಿರುವ ಬಗ್ಗೆ ತನಿಖೆ ಮಾಡಬೇಕು ಎಂದು ಕೇಳಿಕೊಂಡರೂ ಸರ್ಕಾರ ತನಿಖೆ ಮಾಡದೆ ತಮ್ಮ ಕರ್ತವ್ಯದಿಂದ ವಿಮುಖರಾಗಿದ್ದಾರೆ.

ಶಾಂತಿ ಸಮ್ಮೇಳನಗಳಲ್ಲಿ ಪಿತೂರಿಯ ಆರೋಪ : ಆಗಸ್ಟ್ ೩ರಂದು ಮೊದಲನೆಯ ಸಮ್ಮೇಳನ ನಡೆಯಿತು. ಅದರಲ್ಲಿ ಮಾತನಾಡಿದ ಅಬ್ಬಾಸ್‌ಖಾನ್ ಮತ್ತು ಅವರ ಗೆಳೆಯರು ಬ್ರಾಹ್ಮಣರ ಮೇಲೆ ಬಲವಾದ ಪ್ರಹಾರ ನಡೆಸಿದರು. ಬ್ರಾಹ್ಮಣರು, ಅಧಿಕಾರದಲ್ಲಿರುವ ಹಾಗೂ ಇಲ್ಲದಿರುವ ಬ್ರಾಹ್ಮಣರೆಲ್ಲ ಸೇರಿ ಅಬ್ಬಾಸ್ ಖಾನ್‌ರ ಮುಖಕ್ಕೆ ಮಸಿ ಬಳಿದು, ದಿವಾನರ ಹೆಸರು ಕೆಡಿಸಿ ಸರ್ಕಾರವನ್ನು ಬುಡಮೇಲು ಮಾಡುವ ಪಿತೂರಿ ನಡೆಸಿದ್ದಾರೆ ಎಂದು ಹೇಳಿದರು.

ಬ್ರಾಹ್ಮಣರಿಗೆ ಈ ಮಾತುಗಳಿಂದ ಅತ್ಯಾಶ್ಚರ್ಯವಾಯಿತು. ನಿಜವಾದ ಸಮಸ್ಯೆಗಳನ್ನು ಮುಚ್ಚಿಹಾಕಿ, ತಪ್ಪಿತಸ್ಥರನ್ನು ಮರೆಮಾಚುವ ಒಂದೇ ಉದ್ದೇಶದಿಂದ ಅಬ್ಬಾಸ್‌ಖಾನ್‌ರು ಬಹಳ ಬುದ್ಧಿವಂತಿಕೆಯಿಂದ ಈ ದಾಳಿ ಮಾಡಿದರು.

ವಾರ್ತಾ ಪತ್ರಿಕೆಗಳಲ್ಲಿ ಆಕ್ರೋಶ : ಹೀಗಿರುವಾಗ ಸರ್ಕಾರದ ಅಧಿಕೃತ ಪ್ರಕಟಣೆಗಳು ಉರಿಯುವ ಗಾಯಕ್ಕೆ ಬಿಸಿ ತುಪ್ಪ ಸುರಿಯುವ ಕೆಲಸ ಮಾಡಿದವು. ನೂರಾರು ಜನ ವೀಕ್ಷಿಸಿದ ಮೂವತ್ತರ ರಾತ್ರಿ ಗುಂಡು ಹಾರಿಸಿದ ಘಟನೆಯನ್ನು ಸರ್ಕಾರ ನಡದೇ ಇಲ್ಲ ಎಂದು ಪ್ರಕಟಿಸಿತು. ವಾರ್ತಾಪತ್ರಿಕೆಗಳಲ್ಲಿ ಬರುತ್ತಿರುವ ವರದಿಗಳು ಸುಳ್ಳು ಹಾಗೂ ಕುಚೋದ್ಯ ಎಂದಿತು.[೮] ಹಿಂದೂ ಸಮುದಾಯದ ವಿರುದ್ಧ ಸರ್ಕಾರವು ಪೂರ್ವಾಗ್ರಹ ಹೊಂದಿರುವುದು ಇದರಿಂದ ಸ್ಪಷ್ಟವಾಯಿತು. ವಾರ್ತಾಪತ್ರಿಕೆಗಳ ಬಾಯಿ ಕಟ್ಟಿದಂತಾಯಿತು. ಹಿಂದೂ ವಕ್ತಾರರು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು, ಸರ್ಕಾರದ ತಪ್ಪುಗಳನ್ನು ಹೊರಗೆಳೆಯಲು ವಿದೇಶಿ ವಾರ್ತಾಪತ್ರಿಕೆಗಳ ಮೊರೆ ಹೋಗಬೇಕಾಯಿತು.

ಮುಸಲ್ಮಾನರ ವರದಿ : ಪಿತೂರಿಯ ಕೂಟ ಅಥವ ಗುಪ್ತ ಸಮಾಜ ಮುಸಲ್ಮಾನ ಸಮುದಾಯದಿಂದ ಬಂದ ಸಾಕ್ಷಿಗಳು ನೀಡಿದ ವರದಿಗಳನ್ನು ಇಲ್ಲಿ ನೋಡಬಹುದು. ವಿಚಾರಣೆ ವೇಳೆ ಬಂದ ಕೆಲವು ಹಿಂದೂ ಸಾಕ್ಷಿಗಳೂ ಕೂಡ ಮುಸಲ್ಮಾನರ ದೃಷ್ಟಿಕೋನವನ್ನು ಬೆಂಬಲಿಸಿದರು. ಗಲಭೆಯ ಮುಖ್ಯ ಕಾರಣ ಅಥವಾ ಪರೋಕ್ಷ ಕಾರಣ ಕೂಡ ಗಣೇಶ ವಿಗ್ರಹದ ಘಟನೆಯೇ ಎಂದು ಅವರು ಒಪ್ಪಿಕೊಳ್ಳುವುದಿಲ್ಲ. ಅವರ ಪ್ರಕಾರ, ಅಬ್ಬಾಸ್‌ಖಾನ್‌ರ ಹೆಸರು ಕೆಡಿಸುವುದು, ದಿವಾನರನ್ನು ತೆಗೆಯುವುದು ಮತ್ತು ಸಂವಿಧಾನವನ್ನು ಬುಡಮೇಲು ಮಾಡುವ ಉದ್ದೇಶದಿಂದ ಕೆಲವು ಬ್ರಾಹ್ಮಣ ಚಳವಳಿಗಾರರು ತಮ್ಮ ಸ್ವಾರ್ಥ ಸಾಧನೆಗೆ ಈ ಘಟನೆಯನ್ನು ನೆಪವನ್ನಾಗಿ ಮಾಡಿಕೊಂಡರು. ಅವರ ದೃಷ್ಟಿಯಲ್ಲಿ ಈ ಚಳವಳಿಗಾರರು ಒಂದು "ಪಿತೂರಿ ಕೂಡ" ಅಥವ "ಗುಪ್ತ ಸಮಾಜ" ಹೊಂದಿದ್ದಾರೆ.[೯] ಈ ಸಿದ್ಧಾಂತವನ್ನು ಸ್ಥಾಪಿಸಲು ಅರ್ಪಣೆಯ ಕಾಲ ಅಥವಾ ಇನ್ನೂ ಮುಂಚಿನ ಕಾಲದಲ್ಲಿ ಇಂತಹ ಚಳವಳಿಗಾರರ ಚಟುವಟಿಕೆಗಳನ್ನು ಗುರುತಿಸುತ್ತಾರೆ.

ಬೆಂಗಳೂರಿನ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಅಬ್ದುಲ್ ರೆಹಮಾನ್‌ರ ಪ್ರಕಾರ ಬಹಳ ಹಿಂದಿನಿಂದಲೂ ಒಂದು ಶಕ್ತಿಶಾಲಿ ಸಂಸ್ಥೆ ಅಥವ ಹೊರಗಿನವರ ಶಕ್ತಿಶಾಲಿ ಕೂಟ ಮೈಸೂರಿನವನರನ್ನು ನಿಂದಿಸುತ್ತಾ ಅವರನ್ನು ಅಧಿಕಾರದಿಂದ ಹೊರಗಿಡುತ್ತಾ ಬಂದಿದೆ. ಯಾವಾಗ ಯಾವುದೇ ಮೈಸೂರಿನವರು ದಿವಾನಗಿರಿಗೆ ಏರಿದರೆಂದರೆ ಆಗೆಲ್ಲ ಈ ಪರಕೀಯ ಕೂಟ ದನಿ ಎತ್ತುತ್ತಿತ್ತು.

ಮದ್ರಾಸಿಗಳು ಮತ್ತು ಮೈಸೂರಿನವರ ನಡುವೆ ಈ ಹೋರಾಟ ೧೯೧೮ರವರೆಗೆ ನಡೆದಿತ್ತು. ಸರ್ಕಾರಿ ಸೇವೆಗಳಲ್ಲಿ ಬ್ರಾಹ್ಮನೇತರ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಲಹೆಗಳನ್ನು ಕೊಡುವುದಕ್ಕಾಗಿ ಮಿಲರ್ ಸಮಿತಿ ನೇಮಿಸಿದ ಫಲವಾಗಿ ಬ್ರಾಹ್ಮಣರಿಗೂ ಹಾಗೂ ಬ್ರಾಹ್ಮಣೇತರರಿಗೂ ಕಲಹ ಏರ್ಪಟ್ಟಿತು ಎಂಬುದು ಅಬ್ದುಲ್ ರಹಮಾನರ ಅಭಿಪ್ರಾಯ. ೧೯೧೮ ಮತ್ತು ೧೯೨೨ ರ ನಡುವೆ ಈ ಎರಡು ಸಮುದಾಯಗಳ ನಡುವಿನ ವೈಮನಸ್ಯ ಹೆಚ್ಚಾಯಿತು. ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನಗಳನ್ನು ನೀಡುವಿಕೆ ಮತ್ತು ಶೈಕ್ಷಣಿಕ ಅಧಿಕಾರಿಗಳು ತಯಾರಿಸಿದ ಶಿಕ್ಷಣ ನಿವೇದನಾ ಪತ್ರ ಹಾಗೂ ಮಿಲ್ಲರ್ ಸಮಿತಿ ವರದಿ, ಇವರುಗಳ ಮೇರೆಗೆ ಬ್ರಾಹ್ಮಣೇತರರು ಪ್ರಗತಿ ಹೊಂದಲೆಂದು ನೀಡಿದ ಹೆಚ್ಚಿನ ಸೌಕರ್ಯಗಳೇ ಇದಕ್ಕೆ ಕಾರಣ. ಪ್ರತಿನಿಧಿಗಳ ಸಭೆ ಮತ್ತು ವಿಧಾನ ಪರಿಷತ್‌ಗಳ ಸಂಖ್ಯೆಯನ್ನು ಹೆಚ್ಚಿಸಿದಾಗ. ಅಬ್ಬಾಸ್‌ಖಾನ್‌ರವರು ನಗರ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು. ಮುಸ್ಲಿಂ ಮತ್ತು ಇತರ ಬ್ರಾಹ್ಮಣೇತರ ಚಳುವಳಿಗಳಿಗೆ ಅವರೇ ನಾಯಕರು. ಮುನಿಸಿಪಲ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಾದಾಗ ಅವರಿಗೆ ಕೆಲವು ಬ್ರಾಹ್ಮಣ ಗೆಳೆಯರು ಬೆಂಬಲ ನೀಡಿದ್ದರು. ನಂತರ ಇವರೆಲ್ಲ ಗುಪ್ತ ಸಮಾಜ ಸೇರಿ ಅಬ್ಬಾಸ್ ಖಾನ್ ಹಾಗೂ ದಿವಾನರ ವಿರುದ್ಧ ಕೆಲಸ ಮಾಡಲು ಆರಂಭಿಸಿದರು.

ಸರ್ಕಾರವನ್ನು ಬುಡಮೇಲು ಮಾಡುವುದು, ದಿವಾನರನ್ನು ಸ್ಥಾನಪಲ್ಲಟ ಮಾಡುವುದು, ಅಬ್ಬಾಸ್ ಖಾನ್‌ರಿಗೆ ಮಸಿ ಬಳಿಯುವುದು ಮತ್ತು ತೊಂದರೆ ಕೊಡುವುದು (ಅಬ್ಬಾಸ್ ಖಾನ್‌ರ ಪ್ರಕಾರ) ರಾಜ್ಯದಾದ್ಯಂತ ಸುತ್ತೋಲೆಗಳನ್ನು ಗುಪ್ತವಾಗಿ ಕಳುಹಿಸಿ ಸರ್ಕಾರದ ವಿರುದ್ಧ ಜನತೆಯನ್ನು ಹುರಿದುಂಬಿಸುತ್ತಿದ್ದರು.

ಪಿತೂರಿಯ ವಾದ : ಈ ಸಮಯದಲ್ಲಿ, ಬೆಂಗಳೂರು ನಗರ ಸುಧಾರಣೆ ಸಂಬಂಧದಲ್ಲಿ ಹಲವಾರು ಅರಳಿ ಮರಗಳು ಮತ್ತು ದೇವಸ್ಥಾನದ ನೆಲ, ಕಟ್ಟಡಗಳನ್ನು ತೆಗೆಸಿ ಹಾಕಲಾಗಿತ್ತು. ಈ ಹಿಂದೆಯೂ ಸಹ, ಅರಳಿ ಮರಗಳು, ಹಿಂದೂ ದೇವಸ್ಥಾನಗಳು, ಮಸೀದಿಗಳು, ಛತ್ರಗಳು ಮತ್ತು ಕೆಲವು ಕ್ರೈಸ್ತ ಇಗರ್ಜಿಗಳನ್ನು ತೆಗೆದುಹಾಕಲಾಗಿತ್ತು. ಯಾರು ಸಹ ಇವುಗಳನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ ಈಗ ಚಳವಳಿಗಾರರು ಸರ್ಕಾರದ ವಿರುದ್ಧ ಜನರನ್ನು ಕಲೆ ಹಾಕಲಾರಂಭಿಸಿದರು.[೧೦] ಇಂತಹ ವಾತಾವರಣದ ಬಹುಸಂಖ್ಯಾತ ಬ್ರಾಹ್ಮಣೇತರರು ಈ ಸಾರ್ವಜನಿಕ ಮಂಡಲಿಗಳಲ್ಲಿ ಬ್ರಾಹ್ಮಣರ ಸ್ಥಾನಗಳನ್ನು ಕಬಳಿಸಿದರು. ಅಲ್ಲದೆ ಈ ಎರಡೂ ಸಾರ್ವಜನಿಕ ಮಂಡಳಿಗಳ ಮೂಲಕ ದೇಶದ ಸರ್ಕಾರದಲ್ಲಿ ಅಧಿಕಾರಿಗಳಲ್ಲದವರು ಸಹ ಹೆಚ್ಚು ಹೆಚ್ಚು ಅಧಿಕಾರವನ್ನು ಪಡೆಯುತ್ತಿರುವುದರ ಬಗ್ಗೆ

ಅಧಿಕಾರಿಗಳಿಗೆ ಅತೃಪ್ತಿ ಇತ್ತು. ಆದ್ದರಿಂದ ಮದ್ರಾಸಿನನರಾಗಲಿ, ಮೈಸೂರಿನವರಾಗಲಿ, ಬ್ರಾಹ್ಮಣರೆಲ್ಲರೂ ಒಂದು ಗೂಡಿ, ಬ್ರಾಹ್ಮಣೇತರರ ಮೇಲೆ ಯದ್ಧ ಸಾರಿದರು. ಈ ಹೊಸ ಬ್ರಾಹ್ಮಣರ ಕೂಟ ಒಬ್ಬ ಬ್ರಾಹ್ಮಣೇತರ ವ್ಯಕ್ತಿಯೊಬ್ಬ ದಿವಾನ ಸ್ಥಾನವನ್ನು ಅಲಂಕರಿಸುವುದನ್ನು ಸಹಿಸಲಾರದಾಯಿತು.

ದಿವಾನರನ್ನು ವಿರೋಧಿಸುವುದು: ಗುಪ್ತ ಸಮಾಜದ ಸದಸ್ಯರು ಸಂಖ್ಯೆ ೬೦ ರಿಂದ ೧೦೦ರವರೆಗಿತ್ತು ಏನಾದರೂ ಆಗಿರಬಹುದು ತಮ್ಮ ಪ್ರಚಾರ ನಡೆಸಿದ್ದರು. ಸರ್ಕಾರದ ಕಾರ್ಯಗಳನ್ನು ಟೀಕೆ ಮಾಡುವ ಬರಹಗಳನ್ನು ಸಹಾಯಧನ ಸ್ವೀಕರಿಸುವ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಕೆಲವು ಪತ್ರಿಕೆಗಳ ಬಡ ಸಂಪಾದಕರು ಈ ಸುಪ್ತ ಸಮಾಜದಿಂದ ಧನ ಸಹಾಯ ಪಡೆಯುತ್ತಿದ್ದಾರೆ. ಸಮಾಜ ಅಥವ ಕೂಟದ ಸದಸ್ಯರು ಸ್ಥಳೀಯ ಹಾಗೂ ವಿದೇಶಿ ಪತ್ರಿಕೆಗಳಲ್ಲಿ ಬರೆಯುತ್ತಿರುವ ಬರಹಗಳಲ್ಲಿ ವಸ್ತುಸ್ಥಿತಿಯನ್ನು ತಿರುಚಿ, ಇಂದಿನ ದಿವಾನರು ದೇಶದ ಹಿತಾಸಕ್ತಿಯಲ್ಲಿ ಮಾಡುತ್ತಿರುವ ಉಪಯುಕ್ತ ಕೆಲಸಗಳನ್ನು ಕಾರ್ಯದರ್ಶಿಯಾಗಿದ್ದ ದಿವಾನರಲ್ಲಿ ಮಹಾರಾಜರಿಗೆ ವಿಶೇಷ ನಂಬಿಕೆ, ವಿಶ್ವಾಸ, ಈ ಕಾರಣಕ್ಕೆ ಏನೋ ದಿವಾನರ ಬಗ್ಗೆ ಬಹಳ ಜನಕ್ಕೆ ಬಲವಾದ ಹೊಟ್ಟೆ ಕಿಚ್ಚು, ಜುಲೈ, ಆಗಸ್ಟ್‌ನಲ್ಲಿ ಈ ಹೊಟ್ಟೆಕಿಚ್ಚು ಇನ್ನೂ ಹೆಚ್ಚಾಯಿತು. ಬೆಂಗಳೂರು ನಗರದಲ್ಲಿ ಮೆರವಣಿಗೆ ಹೋಗುವಾಗ ಮಹಾರಾಜರ ಜೊತೆಗೆ ದಿವಾನರಿಗೂ ಆನೆಯ ಮೇಲೆ ಕೂಡಲು ಅವಕಾಶ ನೀಡಿ ಬೆಳ್ಳಿ ಹಬ್ಬಕ್ಕೆ ವಿಶೇಷವಾಗಿ ದಿವಾನರಿಗೆ ಮಾನ್ಯತೆ ನೀಡಿದ್ದಕ್ಕಾಗಿ ಅವರ ವಿರುದ್ಧ ಭಾವನೆಗಳು ಕೆರಳಿದವು.

ಅಬ್ಬಾಸ್‌ಖಾನರಿಗೆ ವಿರೋಧ: ದಿವಾನರ ವಿರುದ್ಧ ನಡೆದ ಈ ಚಳವಳಿ, ಅಬ್ಬಾಸ್‌ಖಾನರ ವಿರುದ್ಧವೂ ಆಗಿತ್ತು. ಮೊನ್ನೆ ಮೊನ್ನೆಯವರಿಗೂ ಆ ಗಣೇಶ ವಿಗ್ರಹದ ಘಟನೆ ನಡೆಯಿತು. ಇದು ಚಳವಳಿಗಾರರಿಗೆ ದೇವರೇ ಕಳುಹಿಸಿದ ವಿಗ್ರಹದ ಪುನಃ ಸ್ಥಾಪನೆಗೆ ಒಪ್ಪದಿರದು ಸರಿ, ಏಕೆಂದರೆ ಒಂದು ಸಾರ್ವಜನಿಕ ಶಾಲೆಯ ಆವರಣದಲ್ಲಿ ದೇವಸ್ಥಾನವೊಂದು ನಿರ್ಮಾಣವಾಗದಿರಲಿ ಎಂದು ಗಣೇಶನ ಪುನಃಸ್ಥಾಪನೆಗೆ ಸ್ವಾಭಾವಿಕವಾಗಿ ಹುಡುಗರು ಆಸಕ್ತಿವಹಿಸುವರು ಎಂಬುದನ್ನು ತಿಳಿದ ಗುಪ್ತ ಕೂಟ, ನಿರ್ದೇಶಕರ ಆದೇಶ ಬಂದು ಒಂದು ತಿಂಗಳ ನಂತರ ವಿದ್ಯಾರ್ಥಿಗಳನ್ನು ಹುರಿದುಂಬಿಸಿ, ಆಂದೋಲನ ನಡೆಸಲು ಸಹಾಯ ಮಾಡಿ, ತಾನು ಹಿಂದೆ ನಿಂತು ನೋಡುತ್ತಿತ್ತು.

ಅಬ್ಬಾಸ್‌ಖಾನ್‌ರನ್ನು ವಿಚಾರಣೆ ವೇಳೆಯಲ್ಲಿ ವಿಚಾರಿಸುವಾಗ ಗಣಪತಿ ಘಟನೆಗೂ ಸರ್ಕಾರವನ್ನು ಉರುಳಿಸುವುದಕ್ಕೂ ಏನು ಸಂಬಂಧ? ಎಂಬ ಪ್ರಶ್ನೆಗೆ

ಉತ್ತರ : "ಆ ಸಮಯದಲ್ಲಿ ಸುಲಭವಾಗಿ ಅದನ್ನು ಬಳಸಿಕೊಳ್ಳ ಬಹುದಿತ್ತು.

ಪ್ರಶ್ನೆ : ಇದನ್ನು ಏಕೆ ಕೈಗೆತ್ತಿಕೊಂಡರು?

ಉತ್ತರ : ಏಕೆಂದರೆ, ಗಣಪತಿಯನ್ನು ಎಲ್ಲರೂ ಗೌರವಿಸುತ್ತಾರೆ. ಇಡೀ ಹಿಂದೂ ಸಮುದಾಯ ಪೂಜಿಸುತ್ತದೆ. ಎಲ್ಲಾ ಬ್ರಾಹ್ಮಣೇತರರು ಈ ಚಳವಳಿಯಲ್ಲಿ ಭಾಗವಹಿಸುತ್ತಾರೆಂಬ ನಿರೀಕ್ಷೆ .

ಪ್ರಶ್ನೆ : ಯಾರೊಡನೆ ಭಾಗವಹಿಸುವುದು?

ಉತ್ತರ : ಬ್ರಾಹ್ಮಣರೊಡನೆ ಬ್ರಾಹ್ಮಣರು, ಬ್ರಾಹ್ಮಣರೇತರರು ಎಂಬ ಬೇದಭಾವ ಇಲ್ಲ. ಒಂದು ಗುಪ್ತ ಸಮಾಜ ಎಲ್ಲವನ್ನೂ ಮಾಡುತ್ತದೆ ಅವರ ಮನಸ್ಸಿನ ಶಕ್ತಿ ಇದನ್ನು ಕೈಗೆತ್ತಿಕೊಂಡು ಬೆಳಸಿದೆ.

ಪ್ರಶ್ನೆ : ಯಾವ ಉದ್ದೇಶದಿಂದ?

ಉತ್ತರ : ಸರ್ಕಾರವನ್ನು ಖಂಡಿಸಲು ಗಿರಣಿ ಮುಷ್ಕರ ಕೂಡ ಆಗಬಹುದು, ಹಿಂದೆ ಅವರು ಮಾಡಿಸಿದ ರೀತಿಯಲ್ಲಿ ಸರ್ಕಾರದ ಹೆಸರು ಕೆಡಸಲು ಏನನ್ನು ಬೇಕಾದರೂ ಮಾಡುತ್ತಾರೆ. ಮೈಸೂರಿನಲ್ಲಿ ಹಾಗೂ ಬ್ರಿಟೀಷ್ ಭಾರತದಲ್ಲಿ.

ಈ ಬಗೆಯ ಅವರ ಮನೋಭಾವ ಮತ್ತು ಕ್ರಮಬದ್ಧವಾದ ಪ್ರಚಾರವನ್ನು ನೋಡಿದರೆ ಗಣೇಶ ಘಟನೆ ಆಗದಿದ್ದರೂ ಸಹ, ಅವಕಾಶಕ್ಕಾಗಿ ಕಾಯುತ್ತಿದ್ದ ಚಳವಳಿಗಾರರು, ಬೇರೆ ಯಾವುದೇ ಘಟನೆಯನ್ನು ಬಳಸಿಕೊಂಡು ಜನರ ಮಧ್ಯೆ ಅತೃಪ್ತಿಯನ್ನುಂಟು ಮಾಡಿ ಗೊಂದಲವನ್ನೆಬ್ಬಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಇನ್ನೂ ಈ ಬಗ್ಗೆ ವಿವರಿಸುತ್ತಾ, ವೈಯಕ್ತಿಕವಾಗಿ ನನಗೆ ತಿಳಿದಿದ ಕೆಲವು ವಾಸ್ತವಾಂಶಗಳನ್ನು ತೋರಿಸಿ, ಪಿತೂರಿ ನಡೆದಿದೆ ಹಾಗೂ ಗುಪ್ತ ಸಮಾಜವೊಂದು ನಡೆಸಿದೆ, ಸಮರ್ಥಿಸಬಲ್ಲ ಇವೆಲ್ಲವನ್ನು ಆ ಸಮಾಜವೇ ಸಂಘಟಿಸಿದೆ. ಹಾಗೂ ಚಳವಳಿಯನ್ನು ಆರಂಭಿಸಿದ್ದು, ಆ ಸಮಾಜವೆ ಸಹಾಯ ಮಾಡುತ್ತಿರುವುದು, ಆ ಸಮಾಜವೇ ವಿದ್ಯಾರ್ಥಿಗಳಿಗೆ ಆಹಾರ ಒದಗಿಸುತ್ತಿರುವುದು. ಸೆಂಟ್ರಲ್ ಜೈಲ್ ದಿವಾನರ ಗೃಹ ಹಾಗೂ ಸಾರ್ವಜನಿಕ ಇಲಾಖೆಗಳನ್ನು ಮೂರು ಜಾಗಗಳಲ್ಲಿ ಮೂರು ಗುಂಪುಗಳೂ ದಾಳಿ ಮಾಡಲು ಸಂಘಟನೆಯಾಯಿತು ಎಲ್ಲವನ್ನು ವ್ಯವಸ್ಥಿತವಾಗಿ ಮಾಡಲಾಯಿತು.

ಚಳವಳಿಗಾರರ ಪ್ರಚೋದನೆಯಿಂದಾಗಿ ನಡೆದ ಘಟನೆಗಳು : ಇಂತಹ ಪರಿಸ್ಥಿತಿಯ ಬೆಳಕಿನಲ್ಲಿ ನಡೆದ ಘಟನೆಗಳು ಮತ್ತು ಅವುಗಳ ಕಾರಣದ ಬಗ್ಗೆ ತೀರ್ಮಾನಕ್ಕೆ

ಬರಬೇಕಾಗುತ್ತದೆ. ಸಂಚು ಮಾಡುವ ಚಳವಳಿಗಾರರು ನಮ್ಮ ಅನುಕೂಲಕ್ಕೆ ಗಣೇಶನ ಘಟನೆಯನ್ನು ದೊಡ್ಡದು ಮಾಡದಿದ್ದ ಪಕ್ಷದಲ್ಲಿ ಅದು ಶಾಂತಿಯಿಂದ ನಡೆದು ಹೊಗುತ್ತಿತ್ತು. ನಿರ್ದೇಶಕರು, ಕಳಿಸಿದ ಆದೇಶಕ್ಕೂ ಅಬ್ಬಾಸ್ ಖಾನ್‌ರಿಗೂ ಯಾವ ಸಂಬಂಧವೂ ಇರಲಿಲ್ಲ. ವಾಸ್ತವಾಗಿ "ವೀರಕೇಸರಿ"ಯ ಸಂಪಾದಕರೊಂದಿಗೆ ಸಾರ್ವಜನಿಕವಾಗಿ ಮಾತನಾಡಿ ಗಣಪತಿ ವಿಗ್ರಹವನ್ನು ಪುನಃ ಸ್ಥಾಪಿಸುವುದನ್ನು ಬೆಂಬಲಿಸಲೂ ಸಹ ಒಪ್ಪಿದ್ದರು. ಗಣೇಶ ತನ್ನ ಗೂಡಿನಲ್ಲಾಗಲಿ, ಬೇರೆಲ್ಲಾಗಲಿ ಇರಿಸಲು ಮುಸಲ್ಮಾನರಿಗೆ ಯಾವುದೇ ಅಭ್ಯಂತರ ಇಲ್ಲ. ಆದರೆ ಅವರು ಅಬ್ಬಾಸ್ ಖಾನ್‌ರು ವಾಸುಸುತ್ತಿದ್ದ ಬಡಾವಣೆಯಲ್ಲೇ ದೊಡ್ಡ ದೇವಸ್ಥಾನ ಕಟ್ಟಬೇಕೆಂಬ ಯೋಚನೆಯನ್ನು ವಿರೋಧಿಸುತ್ತಿದ್ದರು. ಹುಡುಗರನ್ನು ಹುರಿದುಂಬಿಸಿದ ನಾಯಕರು, ಅದರಲ್ಲೂ ವಿಶೇಷವಾಗಿ ಸುಬ್ರಹ್ಮಣ್ಯಂ ಅವರು ತಮ್ಮ ಭಾಷಣದ ಮುಖಾಂತರ "ಮುಸಲ್ಮಾನರನ್ನು ಕೆರಳಿಸಿ ಹುಡುಗರು ಹಿಂಸಾಚಾರದಲ್ಲಿ ತೊಡಗುವಂತೆ ಪ್ರಚೋದಿಸುತ್ತಾ" ಆಡಳಿತಾಧಿಕಾರಿಗಳು ತಮ್ಮ ಸಮುದಾಯದವರು ಎಂಬ ಧೈರ್ಯದಿಂದ ಮುಸಲ್ಮಾನರು ಕುತಂತ್ರಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಹಿಂದೂಗಳು ರೌಡಿ ಮುಸಲ್ಮಾನರ ವಿರುದ್ಧ ರಕ್ಷಿಸಿಕೊಳ್ಳಲು ಆಯುಧಗಳನ್ನು ಇರಿಸಿಕೊಳ್ಳಬೇಕು. ಎಂದು ಸುಬ್ರಹ್ಮಣ್ಯಂ ಹೇಳಿದರು. ಇದೇ ರೀತಿ ಉದ್ರೇಕದಿಂದ ಮಾತನಾಡುತ್ತಾ ಇಂದಿನ ಆಡಳಿತವನ್ನು ತೆಗಳಿ ಸಾಮಾನ್ಯವಾಗಿ ಮುಸಲ್ಮಾನರು "ಹಿಂದೂ ಸಮಾಜವನ್ನು ಬುಡಮೇಲು ಮಾಡಲು" ಈ ಅವಕಾಶವನ್ನು ಬಳಸಿಕೊಂಡಿದ್ದಾರೆ ಎಂದರು.[೧೧]

ಹುಡುಗರ ಮೆರವಣಿಗೆ, ಸೆಂಟ್ರಲ್ ಜೈಲ್ ಬಳಿ ಅವರು ಹಿಂಸಾಕೃತ್ಯದಲ್ಲಿ ತೊಡಗುತ್ತಿದ್ದು ನಂತರ ದಿವಾನರ ಗೃಹ ಹಾಗೂ ಸಾರ್ವಜನಿಕ ಇಲಾಖೆ ಬಳಿ ನಡೆದದ್ದು ಎಲ್ಲವೂ ಸರ್ಕಾರದ ಹೆಸರು ಕೆಡಿಸಲು ಯೋಜಿಸಿದ ಚಟುವಟಿಕೆಯ ಭಾಗವಾಗಿದೆ. ಅಬ್ಬಾಸ್‌ಖಾನ್‌ರ ಮನೆಯ ಪಕ್ಕದಲ್ಲಿದ್ದ ಉರ್ದು ಬಾಲಕೀಯರ ಶಾಲೆಯ ಬಳಿ ಶಾಲೆಗೆ ಹೋಗುತ್ತಿದ್ದ ಗಾಡಿಗಳನ್ನು ತಡೆದು ಮುಸ್ಲಿಂ ಬಾಲಕಿಯರನ್ನು ಅಪಮಾನಗೊಳಿಸಿದರು. ಮುಸಲ್ಮಾನರು ತುಂಬಾ ನೊಂದುಕೊಂಡುರಾದರೂ ಪೊಲೀಸರು ಬುದ್ಧಿವಾದದ ಮೇರೆಗೆ, ತಮ್ಮ ಸಂಯಮ ಕಳೆದುಕೊಳ್ಳಲಿಲ್ಲ.

ಜುಲೈ ೩೦ರಂದು ಶಾಲೆಯ ಬಳಿ ಹುಡುಗರ ಸಭೆ ಇರಲಿಲ್ಲ. ಬೆಳಿಗ್ಗೆ ಗೇಟಿನ ಬಳಿ ಹಾಕಿದ್ದ ಸೂಚನೆಯ ಮೇರೆಗೆ, ಗಾಂಧಿ ಮೈದಾನದಲ್ಲಿ ಸಭೆ ಸೇರುವುದಿತ್ತು. ಅಬ್ಬಾಸ್‌ಖಾನ್‌ರಿಗೆ ಆಗಲಿ ಅಥವಾ ಬೇರೆ ಮುಸಲ್ಮಾನರಿಗೆ ಆಗಲಿ, ನಾಯಕರನ್ನು ಅಂದು ಸಂಜೆ ಬಿಡುಗಡೆ ಮಾಡಿ ಶಾಲೆಯ ಆವರಣಕ್ಕೆ ಮೆರಣಿಗೆಯಲ್ಲಿ ಕರೆತರುತ್ತಾರೆಂಬುದು

ತಿಳಿದಿರಲಿಲ್ಲ. ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವ ಕಾರಣವು ಅವರಿಗಿರಲಿಲ್ಲ. ಆದ್ದರಿಂದ ಒಂದು ಗುಂಪು ಜನ ಶಾಲೆಯ ಬಳಿ ಸೇರಿ ಅವರ ಹಾಗೂ ದಿವಾನರ ವಿರುದ್ಧ ಕೂಗು ಹಾಕಲು ಆರಂಭಿಸಿದಾಗ ಅವರಿಗೆ ಆಶ್ಚರ್ಯವಾಯಿತು. ಶಾಲೆಯ ದ್ವಾರದ ಎದುರು ಒಂದು ಮೋಟರು ಗಾಡಿಯಲ್ಲಿ ನಿಂತ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರು ಭಾವವೇಶದಿಂದ ಮಾತನಾಡಿದರು. ಅಬ್ಬಾಸ್ ಖಾನ್‌ರವರ ಮನೆಯ ಕಡೆ ಬೆರಳು ಮಾಡಿ ತೋರಿಸುತ್ತಾ, 'ಆ ಮನೆಯ ಒಡೆಯರೆ ಎಲ್ಲಾ ತೊಂದರೆಗಳಿಗೂ ಕಾರಣರಾಗಿದ್ದು, ಅವರಿಂದಲೆ ಈ ಹುಡುಗರು ಇಷ್ಟೆಲ್ಲಾ ಅನುಭವಿಸಬೇಕಾಯಿತು' ಎಂದರು. ಬ್ರಾಹ್ಮಣರ ಮಧ್ಯೆ ಮಧ್ಯೆ ಗುಂಪಿನಿಂದ ಕೂಗು ಕೇಳಿ ಬರುತ್ತಿತ್ತು. "ಅಬ್ಬಾಸ್‌ಖಾನ್ ಸತ್ತ" "ದಿವಾನ ಸತ್ತ".[೧೨] ಮೊದಲೇ ಯೋಜಿಸಿದಂತೆ ಒಂದು ಶಿಳ್ಳೆಯ ಸದ್ದು ಬಂದಾಗ ಉದ್ವೇಗಗೊಂಡ ಗುಂಪು ಅಬ್ಬಾಸ್‌ಖಾನ್‌ರ ಮನೆಯೆಡಗೆ ಕಲ್ಲು ತೂರಲು ಆರಂಭಿಸಿತು. ಅಬ್ಬಾಸ್‌ಖಾನ್ ಮತ್ತು ಅವರ ಮಗ ದೀಪಗಳನ್ನು ಆರಿಸಿ ಮಹಡಿ ಮೇಲಿನ ನಿಲುಗಡೆಯಲ್ಲಿ ಕಿಟಕಿಯ ಗಾಜಿನ ಮೂಲಕ ಗುಂಪನ್ನು ವೀಕ್ಷಿಸುತ್ತಾ ನಿಂತಿದ್ದರು. ಒಂದು ಕಲ್ಲು ಗಾಜಿನ ಮೂಲಕ ಬಂದು ಅಬ್ಬಾಸ್ ಖಾನ್‌ರ ಮಗನ ಹಣೆಗೆ ಬಡಿಯಿತು. ಇದೇ ಸಮಯಕ್ಕೆ ನೂರು, ಇನ್ನೂರು ಜನರಿರುವ ಹಿಂದೂ ಗುಂಪೊಂದು ಕೋಲುಗಳನ್ನು ಹಿಡಿದು ಮನೆಯ ಆವರಣದೊಳಗೆ ನುಗ್ಗಿತು. ಅವರು ಕೂಗುತ್ತಿದ್ದರು, "ಅಬ್ಬಾಸ್ ಖಾನ್ ಎಲ್ಲಿ?" "ಹೊರಗೆಳೆಯಿರಿ" "ಹೆಂಗಸರನ್ನು ಹೊರೆಗೆಳೆಯಿರಿ" "ಮನೆಯನ್ನು ಸುಡಿ" ಎಂದು ಅಲ್ಲೇ ಇದ್ದ ಅವರ ಕೆಲಸದವನು ದಾಳಿಗೆ ಒಳಗಾಗಿ ತೋಳಿನ ಮೂಳೆ ಮುರಿಯಿತು.[೧೩] ಗುಂಪು ಮನೆಯೊಳಗೆ ನುಗ್ಗಲು ಪ್ರಯತ್ನಿಸಿತು. ಮನೆಯಲ್ಲಿದ್ದ ಹೆಂಗಸರು ಮಕ್ಕಳು ಸುಮಾರು ೧೨ ಮಂದಿ ಭಯದಿಂದ ಅಳಲು ಆರಂಭಿಸಿದರು. ಸ್ವತಃ ಅಬ್ಬಾಸ್ ಖಾನರಿಗೆ ಧೈರ್ಯಗುಂದಿ ಏನು ಮಾಡಲು ತೋಚಲಿಲ್ಲ.[೧೪]

ಎಲ್ಲಿಂದ ಮುಸಲ್ಮಾನರು ಬಂದರು, ಹೇಗೆ ಹಿಂದುಗಳ ಮೇಲೆ ಅಕ್ರಮಣ ಆರಂಭವಾಯಿತೋ ಗೊತ್ತಿಲ್ಲ. ಒಂದು ಅಸಂಭವವಲ್ಲದ ವಿವರಣೆಯೆಂದರೆ ಅಬ್ಬಾಸ್‌ಖಾನ್‌ರ ಮನೆಯಡೆಗೆ ತೂರಲ್ಪಟ್ಟ ಕಲ್ಲುಗಳು ಅವರ ಮನೆಯ ಪಕ್ಕದಲ್ಲಿದ್ದ ಮಸೀದಿಗೆ ಬಿದ್ದಿರಬಬಹುದು. ಮಸೀದಿಯ ತಗಡಿನ ಶೀಟುಗಳ ಮೇಲೆ ಬಿದ್ದ ಕಲ್ಲುಗಳು ದೊಡ್ಡ ಸದ್ದು ಮಡಿರಬೇಕು. ಅಬ್ಬಾಸ್‌ಖಾನ್‌ರ ಮನೆಯ ಮೇಲೆ ದಾಳಿ ಆಗುತ್ತಿರುವುದು ಆ ಬಡಾವಣೆಯ ಮುಸಲ್ಮಾನರಿಗೆ ಆಶ್ಚರ್ಯವಾಗಿ ಹೊರಗೋಡಿ ಬಂದು ಹಲವು ಹಿಂದು ರೌಡಿಗಳ ಮೇಲೆ ಆಕ್ರಮಣ ಮಾಡಿರಬಹುದು. ಪ್ರಚೋದನೆ ಮಾತ್ರ ಬಂದಿದ್ದು ಹಿಂದುಗಳಿಂದ. ಅಬ್ಬಾಸ್‌ಖಾನ್‌ರ ಮನೆಯಿಂದಾಗಲಿ, ಅವರ ಆದೇಶದ ಮೇಲಾಗಲಿ ಗುಂಡುಗಳು ಹಾರಿರಲಿಲ್ಲ. ಸೈಕಲ್ ಅಂಗಡಿಯಿಂದ ಗುಂಡುಗಳನ್ನು ಹೊಡೆದುದಾಗಿ ಹೇಳಲಾಗಿದೆ. ಅದು ನಿಜವಾದರೆ ಅದಕ್ಕೆ

ಯಾರು ಜವಾಬ್ದಾರರೆಂಬುದು ತಿಳಿದಿಲ್ಲ. ಮೊದಲ ಗಲಭೆಯ ನಂತರ ಹಿಂದೂಗಳು ಅಕ್ಕಪಕ್ಕದ ರಸ್ತೆಗಳಲ್ಲಿ ಗುಂಪುಗೂಡಿದರು. ಸೌದೆ ಅಂಗಡಿಗಳಿಂದ ಕ್ಯಾಸೋರಿನಾ ಮರದ ತುಂಡುಗಳನ್ನು ತೆಗೆದುಕೊಂಡು ಕಂಡ ಕಂಡ ಮುಸಲ್ಮಾನರಿಗೆ ತೀವ್ರವಾದ ಗಾಯಗಳನ್ನು ಮಾಡಿದರು.

ಅಬ್ಬಾಸ್‌ಖಾನ್‌ರ ಮನೆ ದಾಳಿಯಾದುದು ಮತ್ತು ದಿವಾನರಿಗೆ ಗಾಯವಾದ ಗಾಳಿಮಾತುಗಳನ್ನು ಕೇಳಿ ಪೌರ ಮತ್ತು ಮಿಲಿಟರಿ ನಿಲ್ದಾಣದ ಮುಸಲ್ಮಾನರು ನಗರಕ್ಕೆ ಆಗಮಿಸಿದರು. ಅಲ್ಲದೆ ಗಿರಿಣಿಯ ಕೆಲಸಗಾರರು ಮುಷ್ಕರ ಹೂಡಬಹುದು ಎಂಬ ಸುದ್ದಿ ಬಂದಿತು. ಗಿರಣಿ ಕಲೆಸಗಾರರು ಮಾರ್ಕೆಟ್ ಚೌಕದಲ್ಲಿದ್ದ ಮುಸ್ಲಿಂ ಗೋರಿಯನ್ನು ನಾಶಗೊಳಿಸಬಹುದು. ಹಿಂದುಗಳು ತಮ್ಮ ಮನೆಗಳನ್ನು ಧ್ವಂಸ ಮಾಡಬಹುದು ಎಂಬ ಭೀತಿ ಮುಸಲ್ಮಾನರ ನಡುವೆ ಹರಡಿತು. ವಾಸ್ತವವಾಗಿ ಎರಡು ಸಮುದಾಯಗಳ ನಡುವೆ ಯಾವ ಕೋಮು ಭಾವನೆಯು ಇರಲಿಲ್ಲ. ಮತ್ತು ವ್ಯಕ್ತಿಗತವಾಗಿ ಅಲ್ಲೊಬ್ಬ ಇಲ್ಲೊಬ್ಬ ಮುಸಲ್ಮಾನ ಆವೇಶದಿಂದ ವರ್ತಿಸಿದ್ದರೆ, ಅದನ್ನು ಸಂಪೂರ್ಣ ಮುಸ್ಲಿಂ ಸಮುದಾಯದ ಲೆಕ್ಕಕ್ಕೆ ಹಾಕಬಾರದು. ಸ್ಥಳೀಯ ಬ್ರಾಹ್ಮಣರ ವಾರ್ತಾ ಪತ್ರಿಕೆಗಳು ಮತ್ತು ವಿದೇಶಿ ಪತ್ರಿಕೆಗಳ ಹಿಂದು ಸಂಪಾದಕರು ಇದನ್ನೇ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬೆಲ್ಲಾ ಹೇಳಿಕೆಗಳು, ಪ್ರತಿಹೇಳಿಕೆಗಳು ವಿಶ್ವೇಶ್ವರಯ್ಯನವರು ನೀಡಿದ ವರದಿಯಲ್ಲಿ ಸಾಕ್ಷಿಗಳ ಮಾತುಗಳಾಗಿ ದಾಖಲಾಗಿವೆ.

ಅಡಿಟಿಪ್ಪಣಿಗಳು

೧. ಗಲಭೆಯ ಕುರಿತ ಪೊಲೀಸ್ ಕಡತ

೨. ಶೇಷಗಿರಿರಾವ್ ಎಲ್.ಎಸ್., ಬೆಂಗಳೂರು ದರ್ಶನ, ಪು.೫೫೧

೩. ನಾರಾಯಣರಾವ್ ವಿ.ಎಸ್., ಮಿರ್ಜಾ ಇಸ್ಮಾಯಿಲ್, ಪು.೩೩

೪. ಅದೇ, ಪು.೩೩

೫. ಲಿಂಗಯ್ಯ ಡಿ., ಶಿವಪುರ ಧ್ವಜ ಸತ್ಯಾಗ್ರಹ, ಪು.೨೩

೬. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಪು.೧೯

೭. ಅದೇ, ಪು.೨೦

೮. ನಾರಾಯಣರಾವ್ ವಿ.ಎಸ್., ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆ, ಪು.೨೩೧

೯. ಬೆಂಗಳೂರು ದರ್ಶನ, ಪು.೫೫೬

೧೦. ಸಮಿತಿಯ ವರದಿ, ಕ.ರ.ಪ. ಪ್ಯಾರ.೪೨

೧೧. ಅದೇ, ಪ್ಯಾರ.೪೪

೧೨. ಅದೇ, ಪ್ಯಾರ.೪೪

೧೩. ಅದೇ, ಪ್ಯಾರ.೪೭

೧೪. ಅದೇ, ಪ್ಯಾರ.೫೦

ಅಧ್ಯಾಯ ೬

ವರದಿಯಲ್ಲಿನ ಪ್ರಮುಖ ಅಂಶಗಳು ಹಾಗೂ ಪರಿಣಾಮ

೬

ವರದಿಯಲ್ಲಿನ ಪ್ರಮುಖ ಅಂಶಗಳು ಹಾಗೂ ಪರಿಣಾಮ

ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯ ಎರಡು ತಿಂಗಳ ನಂತರ ವರದಿಯನ್ನು ಸಲ್ಲಿಸಿತು. ವರದಿಯಲ್ಲಿ ಜನತೆಯ ಆಶೋತ್ತರಗಳನ್ನು ಅಮೂಲಾಗ್ರವಾಗಿ ವಿವರಿಸಿ ಇನ್ನೂ ಹೆಚ್ಚು ಕಾಲ ಜನರ ರಾಜಕೀಯ ದಾಹವನ್ನು ತೃಪ್ತಿಪಡಿಸಿದ್ದರೆ, ವಿನಾಯಕನ ಗಲಭೆಯಂತಹ ಜಾತಿ ಅಸಮಾನತೆಯನ್ನು ತಡೆಗಟ್ಟಲು ಸಾಧ್ಯವಾಗಲಾರದೆಂದು ವಾದಿಸಿದರು.[೧] ಈ ವರದಿಯನ್ನು ಪ್ರಕಟಿಸಲು ಸರ್ಕಾರದವರು ನಿರ್ಧರಿಸಿದರು. ಹಾಗಾಗಿ ಜನರಲ್ಲಿ ಈ ವರದಿಯನ್ನು ಪ್ರಕಟಿಸಿದರೆ ಸರ್ಕಾರವೇ ಕುಸಿಯುತ್ತದೆ ಎಂಬ ಸುದ್ದಿಗಳು ಹರಡಿದವು. ಆದರೆ ಎಚ್.ಕೆ.ವೀರಣ್ಣ ಗೌಡರು ವಿಚಾರಣ ಸಮಿತಿಯ ಏಳು ಸದಸ್ಯರ ಪೈಕಿ ಒಬ್ಬರಿಂದ ವರದಿಯನ್ನು ಪಡೆದುಕೊಂಡು ಪತ್ರಿಕೆಯಲ್ಲಿ ಕನ್ನಡದ ಭಾಷಾಂತರವನ್ನು ಹಂತ ಹಂತವಾಗಿ ಪ್ರಕಟಿಸಿದರು.

ಪತ್ರಿಕೆಯಲ್ಲಿ ಪ್ರಕಟಣೆಗೊಂಡ ನಂತರ ಗಲಭೆಯ ವರದಿಯ ಬಗೆಗೆ ಜನರಲ್ಲಿ ತೀವ್ರ ಕುತೂಹಲವುಂಟಾಯಿತು. ಕೂಡಲೇ ಜಾಗೃತವಾದ ಸರ್ಕಾರವು ಇಂಗ್ಲಿಷ್‌ನಲ್ಲಿ ವರದಿಯನ್ನು ಪ್ರಕಟಿಸಿ ಬಹಿರಂಗಪಡಿಸಿದರು. ಅದರ ಕನ್ನಡ ಅನುವಾದವನ್ನು ಪ್ರಕಟಿಸಬೇಕೆಂದು ನ್ಯಾಯ ವಿಧೇಯಕ ಸಭೆಯಲ್ಲಿ ಕೆಲವು ಮಂದಿ ಸದಸ್ಯರು ಸೂಚಿಸಿದಾಗ ಕನ್ನಡವನ್ನು ಅನುವಾದವನ್ನು ಈಗಾಗಲೇ ಬೇರೆಯವರು ಪ್ರಕಟಿಸುತ್ತಿರುವುದರಿಂದ ಅದರ ಅವಶ್ಯಕತೆ ಇಲ್ಲವೆಂದು ಮಿರ್ಜಾ ಅವರು ಸೂಚಿಸಿದರು. ಎಂದು ಎಚ್.ಕೆ.ವೀರಣ್ಣ ಗೌಡರು ತಿಳಿಸಿದ್ದಾರೆ. ಒಟ್ಟಿನಲ್ಲಿ ವಿಶ್ವೇಶ್ವರಯ್ಯನವರ ಸಮಿತಿಯ ವರದಿಯು ಪ್ರಗತಿಪರವಾಗಿತ್ತು. ಇದು ಕೇವಲ ಬೆಂಗಳೂರು ಗಲಭೆ ಅದರ ಹುಟ್ಟು ಹಿನ್ನೆಲೆ ಇವುಗಳಿಗೆ ಮಾತ್ರ ತಮ್ಮ ವರದಿಯನ್ನು ಸೀಮಿತಗೊಳಿಸದೇ ನಿರುದ್ಯೋಗ ಮತೀಯ ಹಾಗೂ ಜಾತಿಯ ಭಿನ್ನತೆ ಇವುಗಳ ನಿವಾರಣೋಪಾಯಗಳು ಜನರಿಗೆ ಜವಾಬ್ದಾರಿ ವಹಿಸಿಕೊಡಬೇಕೆಂಬ ಅಂಶಗಳನ್ನು ಈ ವರದಿಯಲ್ಲಿ ಉಲ್ಲೇಖಿಸಿದ್ದಾರೆ.[೨]

ಈ ಅಧ್ಯಾಯದಲ್ಲಿ ಸಮಿತಿಯ ವರದಿಯನ್ನು ಎರಡು ನೆಲೆಯಲ್ಲಿ ವಿಭಾಗಿಸಲಾಗಿದೆ. ಒಂದನೇಯದಾಗಿ ಗಲಭೆಯ ಸಾಮಾನ್ಯ ವಿವರಣೆ ಸರ್ಕಾರದ ನ್ಯೂನತೆಗಳನ್ನು ಒಂದೆಡೆಯಲ್ಲಿ

ಸೇರಿಸಲಾಗಿದೆ. ಮತ್ತೊಂದು ಭಾಗದಲ್ಲಿ ಗಲಭೆಯ ನಂತರದಲ್ಲಿ ಸರ್ಕಾರವು ವಹಿಸಿಕೊಳ್ಳಬೇಕಾದ ಕ್ರಮಗಳು, ಪರಿಹಾರಕ್ಕೆ ಸರ್ಕಾರವು ನಿರ್ವಹಿಸಿಬೇಕಾದ ಆರ್ಥಿಕ, ಸಾಮಾಜಿಕ ಅಂಶಗಳನ್ನು ಸೂಚಿಸಲಾಗಿದೆ.

ಎರಡು ಸರ್ಕಾರಿ ಇಲಾಖೆಗಳಲ್ಲಿ ಯಾವುದರ ಒಪ್ಪಿಗೆಯನ್ನು ಪಡೆಯದೆ ಗಣೇಶನಿಗೆ ಒಂದು ಗೂಡನ್ನು ಕಟ್ಟಲು ಕಂಟ್ರಾಕ್ಟರ್‌ನಿಗೆ ಬಿಟ್ಟಿದ್ದೆ ಮೊದಲ ತಪ್ಪು; ಈ ತಪ್ಪೇ ಗಲಭೆಗೆ ಮೂಲ. ಗೂಡನ್ನು ಕಟ್ಟಿದ ಮೇಲೆ ಗಣೇಶನ ವಿಗ್ರಹವು ಒಂದು ಧಾರ್ಮಿಕ ಸಂಕೇತವಾಗಿ ಪ್ರಾಮುಖ್ಯತೆ ಹೆಚ್ಚಾಯಿತು. ನಂತರದಲ್ಲಿ ವಿಚಾರಣೆಯಾಗದೆ ವಿಗ್ರಹವನ್ನು ಪುನಃ ಸ್ಥಾಪಿಸಬಾರದು ಎಂಬ ಆದೇಶ ಸಂಪೂರ್ಣವಾಗಿ ನ್ಯಾಯಬದ್ಧವಾಗಿತ್ತು. ಹುಡುಗರ ಅತೃಪ್ತಿಯು ಸ್ವಾಭಾವಿಕವಾಗಿತ್ತು. ಕೆಲವು ನಾಯಕರು, ಸ್ಥಳೀಯ ವಾರ್ತಾಪತ್ರಿಕೆಗಳು ಮತ್ತು ಕೊನೆಗೆ ನಗರದ ಹಿಂದೂ ಜನಸಂಖ್ಯೆಯಿಂದ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಿದಾಗ, ಅದಕ್ಕೆ ಚಾಲನಶಕ್ತಿ ದೊರೆಯಿತು. ಇಂತಹ ಧಾರ್ಮಿಕ ಮತ್ತು ಕೋಮು ಗಲಭೆಯ ವಿಚಾರದಲ್ಲಿ ವಿಳಂಬಗಳಾದರೆ ಏನಾಗಬಹುದು ಎಂಬುದರ ಅರಿವು ಇಲಾಖೆಯ ಅಧಿಕಾರಿಗಳಿಗೆ ಇದ್ದಿದ್ದಲ್ಲಿ ಪರಿಸ್ಥಿತಿಯನ್ನು ಅಲ್ಲೇ ನಿಯಂತ್ರಿಸುವ ಸಾಧ್ಯತೆ ಇತ್ತು. ವಿಷಯವನ್ನು ಪರಿಶೀಲಿಸಲು ಶಿಕ್ಷಣ ಇಲಾಖೆ, ಸಮಯ ತೆಗೆದುಕೊಂಡಿದೆ. ಹಾಗಾಗಿ ಪುನಃ ಶಾಂತಿ ಸ್ಥಾಪನೆ ನಿಧಾನವಾಯಿತು. ಹಾಗಾಗಿ ಒಟ್ಟು ಪರಿಣಾಮ ಅನಾಹುತಕ್ಕೆ ಎಡೆಮಾಡಿಕೊಟ್ಟಿತು.

"ಸರ್ಕಾರವನ್ನು ಬುಂಡಮೇಲು ಮಾಡುವ ಪ್ರಯತ್ನದ ಬಗ್ಗೆ ಯಾವ ಸ್ಪಷ್ಟ ಸಾಕ್ಷಿಗಳು ನಮಗೆ ದೊರಕಿಲ್ಲ. ಅಬ್ಬಾಸ್ ಖಾನ್‌ರ ಅದೃಷ್ಟವನ್ನು, ದಿವಾನರ ಕೆಲವು ದೋರಣೆ ಮತ್ತು ಸರ್ಕಾರದೊಂದಿಗೆ, ಪಿತೂರಿಯ ಸಿದ್ಧಾಂತ ಗುರುತಿಸುತ್ತದೆ. ದಿವಾನರ ಕೆಲವು ದೋರಣೆಗಳ ವಿರುದ್ಧ ಅತೃಪ್ತಿ, ಇದ್ದಿರಬಹುದು. ಹಾಗೆಯೆ, ಕೆಲವು ದುರಭಿಮಾನಿ ಹಿಂದೂಗಳು ನಗರ ಸುಧಾರಣೆ ಕೆಲಸಗಳನ್ನು ವಿರೋಧಿಸಿರಬಹುದು. ಆದರೆ, ಅವರ ಕೆಲಸದಿಂದ ದಿವಾನರನ್ನು ತೆಗೆದುಕೊಳ್ಳಲು ಆಳವಾಗಿ ಯೋಚಿಸಿದ ಉದ್ದೇಶ ಅಥವ ಗಂಭೀರ ಸಂಘಟನೆಯಾಗಲಿ ಕಾಣಲಿಲ್ಲ". ದಿವಾನರ ಧರ್ಮ ಅಥವಾ ಜಾತಿಯ ಕಾರಣವಾಗಿ ಅವರಿಗೆ ಎಂದೂ ವಿರೋಧವಿರಲಿಲ್ಲ ಎಂದು ವಿಶ್ವೇಶ್ವರಯ್ಯನವರು ಹೇಳುವಂತೆ ಬರೆಯಬೇಕು.

ಪತ್ರಿಕೆಗಳಲ್ಲಿ ಬಂದಂತ ಅವರ ವಿರುದ್ಧದ ಟೀಕೆ ಅಥವಾ ಸರ್ಕಾರದ ವಿರುದ್ಧ ಟೀಕೆಯಾಗಲಿ, ಅದು ಕೆಲವು ಅಂಶಗಳಲ್ಲಿ ದೇಶ ವಿರೋಧಿ ಮತ್ತು ಉದ್ರೇಕಕಾಗಿ ಎನಿಸಿದರೂ, ಪಿತೂರಿ ಎಂದು ಹೇಳುವಂತಿರಲಿಲ್ಲ.

ವಿದ್ಯಾರ್ಥಿಗಳು ಮತ್ತು ವಾರ್ತಾಪತ್ರಿಕೆಗಳು: ವಿಗ್ರಹವನ್ನು ಪುನಃ ಸ್ಥಾಪನೆ ಮಾಡದಿದ್ದುದಕ್ಕೆ ವಿದ್ಯಾರ್ಥಿಗಳಿಗೆ ಮೊದಮೊದಲು ಅತೃಪ್ತಿಯಾಗಿರಬಹುದು. ಆದರೆ ನಂತರದಲ್ಲಿ ದೊಂಬಿಯ ನಾಯಕರು ಮತ್ತಿತರ ಅಸಮಧಾನಿತ ಮನಸ್ಸುಗಳು ಗಲಭೆಯ ಕಾರ್ಯಗಳನ್ನು ಮುನ್ನಡಿಸಿರುವುದನ್ನು ಕಾಣಬಹುದು. ಶಾಲಾ-ಕಾಲೇಜುಗಳು, ಸೆಂಟ್ರಲ್ ಜೈಲ್, ಕಾರ್ಲಟನ್ ಹೌಸ್ ಅಥವಾ ಸಾರ್ವಜನಿಕ ಇಲಾಖೆಗಳನ್ನು ಅವರು ಮುತ್ತಿಗೆ ಹಾಕಲು ಕಾರಣವಿರಲಿಲ್ಲ. ಅವರು ನಡೆಸಿದ ಈ ರೌಡಿ ಕೆಲಸಗಳು, ಸವಾರರಿಗೆ ಕಲ್ಲು ತೂರುವುದು ಇವೆಲ್ಲವುಗಳನ್ನು ವಿಶ್ವೇಶ್ವರಯ್ಯನವರು ಖಂಡಿಸಿದ್ದಾರೆ. ವಿದ್ಯಾರ್ಥಿಗಳ ನಡುವೆ ಶಿಸ್ತನ್ನು ಮತ್ತು ಸ್ಥಾಪಿಸಲು ಬೇಕಾದ ಕ್ರಮಗಳನ್ನು ಪರಿಶೀಲಿಸಲು ಬೇರೊಂದು ಸಮಿತಿಯನ್ನು ಸರ್ಕಾರ ನೇಮಿಸಲು ಕೋರಿದ್ದಾರೆ.

ಯುವಕರಿಗೆ ಸ್ವಾಭಾವಿಕವಾದ ಉತ್ಸಾಹ ಮತ್ತು ಅವಿವೇಕಗಳಿಂದ ಹುಡುಗರು ಪ್ರೇರಿತರಾದ್ದರಿಂದ ಅವರ ನಡವಳಿಕೆಯನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಮೊದಲಿಗೆ ಪೊಲೀಸ್ ಅಧಿಕಾರಿಗಳು ತುಂಬಾ ಮಾನವೀಯವಾಗಿ, ಸಹನಶೀಲರಾಗಿ ಇದ್ದದು ತಪ್ಪೇನಿಲ್ಲ. ಆದರೆ ಅಂತಹ ಸಹನೆಗೆ ಮಿತಿಯಿರಬೇಕು. ಭವಿಷ್ಯದಲ್ಲಿ ಅಂತಹ ಸ್ಫೋಟಗಳು ಬಗ್ಗೆ ಎಚ್ಚರಿಕೆವಹಿಸಬೇಕು ಮತ್ತು ಕಾನೂನು ಉಲ್ಲಂಘನೆಯ ಸಣ್ಣ ಘಟನೆಯಾದರೂ ಅದನ್ನು ಗಮನಿಸಿ, ಮಿಂಚಿನಂತೆ ತಡೆಯಬೇಕು. ಅಧಿಕಾರ ರಹಿತ ಸಲಹಾ ಮಂಡಳಿಯೊಂದು ಮಾತ್ರ ವಾರ್ತಾಪತ್ರಿಕೆಗಳನ್ನು ಕೆಲವು ನಿಯಮಗಳಿಗೆ ಒಳಪಡಿಸಬಲ್ಲದು. ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ಹಾಗೂ ಸಾರ್ವಜನಿಕ ಅಭಿಪ್ರಾಯ ಇರುವ ಬಲಹೀನ ಸ್ಥಿತಿಯಲ್ಲಿ ವಿವಿಧ ಪತ್ರಿಕೆಗಳ ಅತಿರೇಕಗಳು ಸಂಭವನೀಯವಾಗಿದೆ. ಅಂತಹ ಅತಿರೇಕಗಳನ್ನು ಕೂಡಲೆ ಪರೀಕ್ಷೆಗೆ ಒಳಪಡಿಸಿ ಕ್ರಮ ತೆಗೆದುಕೊಳ್ಳಬೇಕು. ಪ್ರಸ್ತಾಪಿಸಿದ ಮಂಡಳಿಯು ವಾರ್ತಾಪತ್ರಿಕೆಗಳಿಗೆ ಮಾರ್ಗದರ್ಶನ ನೀಡಬಹುದಾಗಿರುತ್ತದೆ. ಸರ್ಕಾರವು ಕ್ರಮ ತೆಗೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಅಹವಾಲುಗಳನ್ನು, ವರದಿಗಳನ್ನು ಸಮಯಕ್ಕೆ ಸರಿಯಾಗಿ ಕಳಿಸಬೇಕು.

ಜುಲೈ ೩೦ರ ಗಲಭೆ : ಜುಲೈ ೩೦ರ ಗಲಭೆ ಎಲ್ಲಕ್ಕಿಂತ ಮುಖ್ಯವಾದ ಘಟನೆಯಾಗಿದೆ. ಅಂದು ಗುಂಡು ಹಾರಿಸಿದುದು ಸತ್ಯ ಎಂಬುದಾಗಿ ವರದಿ ತಿಳಿಸುತ್ತದೆ. ಗುಂಡುಗಳು ಸೈಕಲ್ ಅಂಗಡಿ ಹಾಗೂ ಶಾಲೆಯ ಎದರುಗಡೆ ಯಿಂದ ಹಾರಿದವು ಎಂಬುದು ಸಮಿತಿಯ ಬಹುಭಾಗ ಸದಸ್ಯರ ಅಬಿಪ್ರಾಯವಾಗಿದೆ. ಗುಂಡುಗಳು ಹಾರಿದ ಕೂಡಲೇ ಅಬ್ಬಾಸ್ ಖಾನ್‌ರ ಆವರಣದಿಂದ ಸುಮಾರು ಜನ ಮುಸಲ್ಮಾನರು ಲಾಠಿಗಳನ್ನು ಹಿಡಿದು ಬಂದು ಹಿಂದೂ

ಗುಂಪಿನ ಮೇಲೆ ಅಕ್ರಮಣ ಮಾಡಿದರು. ಆ ಸಮಯಕ್ಕೆ ಹಿಂದೂಗಳ ಬಳಿ ಆಯುಧಗಳು ಇರಲಿಲ್ಲ. ಅವರು ಚಲ್ಲಾಪಿಲ್ಲಿಯಾದರು. ಹೀಗೆ ಬಂದ ಮುಸಲ್ಮಾನರು ಮೊದಲು ಅಬ್ಬಾಸ್‌ಖಾನ್‌ರ ಮನೆಯ ಮುಂದಿದ್ದ ಗುಂಪನ್ನು ಚದುರಿಸಿದರು, ನಂತರ ಮನೆಯ ಎದುರಿಗಿದ್ದ ಶಾಲೆಯ ಆವರಣವನ್ನು ಹೊಕ್ಕರು, ಗಣೇಶ ವಿಗ್ರಹವನ್ನು ಕೆಳಗೆ ಬೀಳಿಸಿದರು.[೩] ಹಾಗೂ ಇತರ ಅಪರಾಧಗಳನ್ನು ಮಾಡಿದರು. ಮಸೀದಿಯ ಸುತ್ತ ಇರುವ ಬೀದಿಗಳಿಂದ ಮತ್ತು ಮನೆಗಳಿಂದ ಮುಸಲ್ಮಾನರ ತಂಡಗಳು ಲಾಠಿ ಹಿಡಿದು ಬಂದವು.

ಇನ್ನು ಗಣೇಶನ ಗಲಭೆಯ ಕುರಿತು ಗಂಭೀರವಾದ ಅಪರಾಧಗಳ ಬಗ್ಗೆ ಆರೋಪಗಳ ವದಂತಿಗಳು ಎಲ್ಲಡೆ ಹಬ್ಬಿದವು. ಅವುಗಳನ್ನು ಈ ವರದಿಯು ಸಂಪೂರ್ಣವಾಗಿ ನಿರಾಕರಿಸುತ್ತದೆ. ಅಂತಹ ಕೆಲವು ಆರೋಪಗಳು ಇಂತಿವೆ.

ಅಬ್ಬಾಸ್‌ಖಾನ್‌ರವರ ಮನೆಗೆ ಹುಡುಗರನ್ನು ಎಳೆದು ತಂದು ಕೊಂದರೆಂದು ಮತ್ತು ಮಾರನೆಯ ದಿನ ಅವರ ಮನೆಯ ಎದುರು ಶಾಲೆಯ ಪ್ರವೇಶದ್ವಾರದ ಬಳಿ ಒಂದು ಹೆಣವು ಪತ್ತೆಯಾಯಿತೆಂದು ಹೀಗೆ ಹಲವು ಆದರೆ ಇವುಗಳಿಗೆ ಸಾಕ್ಷ್ಯಾಧಾರಗಳಿಲ್ಲವೆಂದು ವರದಿಯಲ್ಲಿ ತಿಳಿಸಿದೆ. ಈ ಸಂಬಂಧವಾಗಿ ಬಂದ ಎಲ್ಲಾ ದೂರುಗಳನ್ನು ಕೂಲಂಕಷವಾಗಿ ಪರೀಕ್ಷಿಸಲಾಯಿತು. ಕಾಣೆಯಾದವರು ಯಾರು ಇಲ್ಲ ಮತ್ತು ಅಂತಹ ಪರಿಸ್ಥಿತಿಯಲ್ಲಿ ಯಾವ ಸಾವು ಯಾರಿಗೂ ಗೊತ್ತಾಗದೆ ಆಗಿಲ್ಲ ಎಂಬುದು ನಮ್ಮ ತೀರ್ಮಾನವಾಗಿದೆ. ಪರಿಶೀಲನೆಯಲ್ಲಿ ಆದ ವಿಳಂಬದಿಂದ ಜುಲೈ ೩೦ರಂದು ನಡೆದ ಘಟನೆಗಳ ಕುರುಹುಗಳು ಇಲ್ಲದಂತೆ ಅಳಿಸಿ ಹೋಗಿರುವ ಕಾರಣ ಒಂದು ವಿಶೇಷ ವಿಚಾರಣೆಯನ್ನು ನಡೆಸಿ ಸಾರ್ವಜನಿಕರ ಮನಸ್ಸಿನಲ್ಲಿ ಇರುವ ಅನುಮಾನವನ್ನು ಹೋಗಲಾಡಿಸಬೇಕು ಎಂದು ವರದಿಯಲ್ಲಿ ಸರ್.ಎಂ.ವಿ. ಅವರು ತಿಳಿಸಿದ್ದಾರೆ.

ಅಪರಾಧಗಳ ವಿಚಾರಣೆಯಲ್ಲಿ ವಿಳಂಬ, ಸರ್ಕಾರಿ ಸಂಪರ್ಕ: ಜುಲೈ ೩೦ರ ರಾತ್ರಿ ಸ್ಫೋಟದ ನಂತರ ಉಂಟಾದ ಪರಿಸ್ಥಿತಿಯನ್ನು ಕಾನೂನು ಮತ್ತು ಸುವ್ಯವಸ್ಥೆಯ ಕಾವಲುಗಾರರು ನಿಭಾಯಿಸುತ್ತಾರೆ. ಎಂಬುದು ನಿರೀಕ್ಷಿಸಿದ ಮಟ್ಟದಲ್ಲಿ ಆಗಲಿಲ್ಲ. ತನಿಖೆಗಳಿಲ್ಲ, ಗೃಹ ಬಂಧನಗಳಿಲ್ಲ, ಗುಂಡುಗಳನ್ನು ಹಾರಿಸಲಾಗಿದೆ, ಲಾಠಿ ಹಿಡಿದು ಮುಸಲ್ಮಾನರ ಕೈಗಳಲ್ಲಿ ೬೦ ಜನ ಗಾಯಗೊಂಡಿದ್ದಾರೆ. ಅದರಲ್ಲಿ ಪೊಲೀಸ್ ಪಡೆಗೆ ಸೇರಿದ ೬ ಹಿಂದೂ ಸದಸ್ಯರು ಸೇರಿದ್ದಾರೆ.

ಮಾರನೆಯ ದಿನ ಸರ್ಕಾರವು, ಪೊಲೀಸರ ಕೈಯಲ್ಲಿದ್ದ ತನಿಖೆಯನ್ನು ತೆಗೆದು ಒಬ್ಬ ನ್ಯಾಯಧೀಶರಿಗೆ ಕೊಡಬೇಕೆಂದು ತೀರ್ಮಾನಿಸಿತು. ವಿಷಯದಲ್ಲಿ ತಮಗಿದ್ದ

ಆಸಕ್ತಿಯನ್ನು ಪೋಲೀಸರು ಈಗ ಸಂಪೂರ್ಣ ಕಳೆದುಕೊಂಡರು. ತನಿಖೆಯನ್ನು ಆರಂಭಿಸಿದ ಅಧಿಕಾರಿಯು ದಿನ ನಿತ್ಯದ ಕಾರ್ಯಕಲಾಪಗಳನ್ನು ಮಾಡಲಿಲ್ಲ. ನಾಲ್ಕು ದಿನಗಳ ನಂತರ ಮತ್ತೊಬ್ಬ ಹಿರಿಯ ಅಧಿಕಾರಿಯನ್ನು ಈ ಕೆಲಸಕ್ಕೆ ನೇಮಿಸಲಾಯಿತು. ಈ ಎಲ್ಲಾ ಬದಲಾವಣೆಗಳು ಮತ್ತು ಲೋಪ-ದೋಷಗಳಿಂದ ಘಟನೆಗಳ ನಿಜವಾದ ಸ್ವರೂಪವನ್ನು ತೋರಿಸುವಂತಹ ಸಾಕ್ಷ್ಯಾಧಾರಗಳು ಕಳೆದು ಹೋದವು. ಸರ್ಕಾರಿ ಸಂಪರ್ಕಗಳು ಸಹ ಸ್ಪಷ್ಟವಾಗಿ ಕರಾರುವಕ್ಕಾಗಿ ಕೆಲಸ ಮಾಡಿಲ್ಲದಿರುವುದನ್ನು ವರದಿಯು ಎತ್ತಿ ತೋರಿಸಿದೆ.

ಸರ್ಕಾರಿ ಇಲಾಖೆಗಳು ಮತ್ತು ಅಧಿಕಾರಿಗಳು : ಚಳವಳಿಗೆ ಧಾರ್ಮಿಕ ಮತ್ತು ಕೋಮು ಅಂಶಗಳು ಇದ್ದ ಕಾರಣ, ಶಿಕ್ಷಣ ಇಲಾಖೆಯಲ್ಲಿ ಸರ್ಕಾರವು ಘಟನೆಯನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಂಡು ಸಮಯ ವ್ಯರ್ಥ ಮಾಡದೆ ಕಾರ್ಯಗತ ಮಾಡಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅನ್ವಯಿಸತಕ್ಕ ಕಾನೂನು ಯಾವುದು ಎಂದು ತಿಳಿಯದ ಕಿರಿಯ ಅಧಿಕಾರಿಗಳು ಜುಲೈ ೩ರಂದು ವ್ಯವಸ್ಥೆ ಕಾಪಾಡಲು ಬಂದ ಮಿಲಿಟರಿ ಪಡೆಗಳ ಅಧಿಕಾರಿಗಳಾಗಿದ್ದರು, ಹಾಗಾಗಿ ಗಲಭೆಯು ತೀವ್ರ ಸ್ವರೂಪವನ್ನು ಪಡೆಯಿತು.

ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲೀಸ್ ಇಲಾಖೆ ಹಾಗೂ ನ್ಯಾಯಧೀಶರ ಲೋಪಗಳನ್ನು ವರದಿಯು ತೀವ್ರವಾಗಿ ಖಂಡಿಸಿದೆ. ಗಲಾಟೆಯ ಸಂಪೂರ್ಣ ಜವಾಬ್ದಾರಿಯನ್ನು ಈ ಎರಡು ಇಲಾಖೆಗಳು ಹೊರಬೇಕೆನ್ನುತ್ತದೆ.

ಜುಲೈ ೩ರ ಪರಸ್ಥಿತಿಯನ್ನು ಎದುರಿಸಲು ಈ ಎರಡು ಇಲಾಖೆಗಳು ಕೆಲಸ ಕಾರ್ಯಗಳು ಅಸಮರ್ಪಕವಾಗಿದ್ದವು. ಪರಿಸ್ಥಿತಿಯ ಪೂರ್ವಸೂಚನೆ ಅವರಿಗಿತ್ತು. ಹೆಸರಿಸಬಹುದಾದ ಸಂಘಟನೆಯಾಗಲೀ, ಕಾರ್ಯಯೋಜನೆಯಾಗಲೀ ಇರಲಿಲ್ಲ. ಅವರ ಕಡೆಯಿಂದ ಸಹಯೋಗ ಕಂಡುಬರಲಿಲ್ಲ. ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಕೆಳ ದರ್ಜೆಯ ಮ್ಯಾಜಿಸ್ಟ್ರೇಟುಗಳನ್ನು ಕರೆದು ನೇಮಕ ಮಾಡಲಿಲ್ಲ. ಮಿಲಿಟರಿಗೆ ಮಾರ್ಗದರ್ಶನ ನೀಡಲು ಹಾಗೂ ಗಲಭೆಯ ಹಲವಾರು ಕೇಂದ್ರಗಳಲ್ಲಿ ಗುಂಪುಗಳನ್ನು ಹತೋಟಿಗೆ ತರಲು ಅವರನ್ನು ನೇಮಕ ಮಾಡಬೇಕಾಗಿತ್ತು.

ಗಲಭೆಯ ಸಮಯದಲ್ಲಿ ಯಾವ ಪ್ರಮುಖ ಅಧಿಕಾರಿಗಳೂ ಇರಲಿಲ್ಲ. ಗಲಭೆಯಾದ ಕೂಡಲೇ ಅಪರಾಧಗಳ ತನಿಖೆಗೆ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ, ಗೃಹಶೋಧವನ್ನಾಗಲಿ, ಬಂಧನಗಳನ್ನಾಗಲಿ ಮಾಡಲಿಲ್ಲ. ಗಲಭೆಯ ನಂತರ ೪೫ ಗಾಯಗೊಂಡ ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದ್ದರೂ, ಒಬ್ಬನೇ ಒಬ್ಬ ಅಪರಾಧಿಯನ್ನು ಈ ಇಲಾಖೆಗಳು ಗುರುತಿಸಿರಲಿಲ್ಲ.

ಮೈಸೂರಿನ ರಾಜಕೀಯ ನಾಯಕರ ಮುಂಚೂಣಿಯಲ್ಲಿ ಇದ್ದ ಅಬ್ಬಾಸ್ ಖಾನ್‌ರವರು ಬೆಂಗಳೂರು ನಗರ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು. ಅವರನ್ನು ಅಪನಿಂಧೆಗೆ ಒಳಗಾಗಿಸುವ ಯಾವುದೇ ಕಾರ್ಯವನ್ನು ಮಾಡಲು ಪೊಲೀಸ್ ಅಧಿಕಾರಿಗಳು ಹಿಂಜರಿದುದರ ಬಗ್ಗೆ ಸಮಿತಿಯು ಅನುಮಾನವನ್ನು ವ್ಯಕ್ತಪಡಿಸುತ್ತದೆ. ಅಬ್ಬಾಸ್ ಖಾನ್‌ರವರ ಮನೆಯಲ್ಲಿ ಮತ್ತು ಮನೆಯ ಬಳಿ ಗಲಭೆ ನಡೆದಾಗ ಅಷ್ಟಾಗಿ ಪ್ರತಿಕ್ರಿಯೆ ಕಂಡುಬರದೇ ಇದ್ದುದು ಈ ಕಾರಣದಿಂದ ಇರಬಹುದು. ಗಲಭೆಯ ನಂತರ ಜಿಲ್ಲಾ ಮ್ಯಾಜಿಸ್ಟ್ರೇಟು ಪೊಲೀಸ್ ಮುಖ್ಯಾಧಿಕಾರಿಗಳು ಮತ್ತಿತ್ತರ ಹಿರಿ ಅಧೀಕಾರಗಳೆಲ್ಲರೂ ಅಲ್ಲಿದ್ದರು. ಅವರು ಎಲ್ಲಾ ಗಾಳಿಮಾತುಗಳನ್ನು ವರದಿಗಳನ್ನು ಕೇಳಿ ಕೂಡ ಏನು ಮಾಡಲಿಲ್ಲ. ಅಂತಹ ಪ್ರಭಾವಶಾಲಿ ಸಾರ್ವಜನಿಕ ವ್ಯಕ್ತಿಯ ಬಗ್ಗೆ ಏನು ಮಾಡಲು ಅವರು ಭಯಪಟ್ಟರೂ ಅಥವಾ ಬೇರೇನಾದರೂ ಉದ್ದೇಶವಿತ್ತೋ ಗೊತ್ತಿಲ್ಲ ಎಂಬುದು ವರದಿಯ ಹೇಳಿಕೆ.

ಸರ್ಕಾರದ ಆದೇಶಗಳ ಕಾರಣ ಸರ್ಕಾರ, ನ್ಯಾಯಾಲಯ, ಪೊಲೀಸ್ ವ್ಯವಸ್ಥೆಗಳ ವಿಷಯದಲ್ಲಿ ಸಮಿತಿಯು ಅತ್ಯಂತ ಖಾರವಾಗಿಯೇ ಪ್ರತಿಕ್ರಿಯಿಸುತ್ತಾ ಕಾರ್ಯ ಮಾಡಿದರು ಅಥವಾ ಮಾಡಲಿಲ್ಲ ಎಂದು ಹೇಳಲಾಗುವುದಿಲ್ಲ ಗಲಭೆಯ ಮೊದಲು ಅಥವಾ ನಂತರ, ಸರ್ಕಾರ ಗಲಭೆಯ ವರದಿಯನ್ನು ಕೇಳಿ ಪಡೆಯಲಿಲ್ಲ ಎಂಬುದು ದುರಾದೃಷ್ಟಕರವಾದ ಸಂಗತಿ. ಗುಂಡುಗಳನ್ನು ಹೊಡೆದಾಗ, ನೂರಾರು ಜನಕ್ಕೆ ಗುಂಡಿನ ಸದ್ದು ಕೇಳಿದಾಗ, ಗುಂಡುಗಳ ಹೊಡೆತ ಆಗಿಲ್ಲವೆಂದು ವರದಿಗಾರರು ಸರ್ಕಾರ ನಂಬುವಂತೆ ಮಾಡಿದ್ದರು. ಗಲಭೆಯಾದ ಸಾಕಷ್ಟು ಹೊತ್ತು ಗೃಹಶೋಧವಾಗಲಿ, ಬಂಧನಗಳಾಗಲಿ, ಮಾಡಿರಲಿಲ್ಲ. ಪೊಲೀಸರು ಯಾವ ಗಲಾಟೆಯಲ್ಲೂ ಸಿಕ್ಕಿ ಹಾಕಿಕೊಳ್ಳಬಾರದೆಂಬ ಆತಂಕದಲ್ಲಿದ್ದರು. ಮೊದಲು ಹೆಜ್ಜೆ ತೆಗೆದುಕೊಳ್ಳಲು ಅವರಿಗೆ ಯಾವ ಆಸಕ್ತಿಯೂ ಇರಲಿಲ್ಲ, ಇಲಾಖೆಯ ಔದಾಸೀನ ಮತ್ತು ನಿಷ್ಕ್ರಿಯತೆ ಜನರ ಕೋಪಕ್ಕೆ ಕಾರಣವಾಗಿದೆ.

ಸಾರ್ವಜನಿಕ ಅನುಮಾನ ಮತ್ತು ಅತೃಪ್ತಿ : ನಗರದ ಜನಸಂಖ್ಯೆಯಲ್ಲಿ ಶೇಕಡ ೮೮% ರಷ್ಟು ಇರುವ ಹಿಂದೂಗಳು ಈ ಎಲ್ಲಾ ಲೋಪ ದೋಷಗಳಿಂದಾಗಿ ಕೋಪಗೊಂಡಿದ್ದಾರೆ. ರಾಜ್ಯದ ಬೇರೆಡೆಗೂ ಈ ಅತೃಪ್ತಿ ಹರಡಿದೆ. ಶಾಶ್ವತವಾದ ಹಿಂದೂ, ಮುಸ್ಲಿಂ ಬೇಧ-ಭಾವನೆಗಳೇನೂ ಇಲ್ಲ, ಆದರೆ ಈ ಘಟನೆಯಲ್ಲಿ ಬೇರೊಂದು ಧರ್ಮದ ನಾಯಕನೊಬ್ಬನ ಮಾತು ಕೇಳಿಕೊಂಡು, ಸರ್ಕಾರ ಧಾರ್ಮಿಕ ಗಲಭೆಯಲ್ಲಿ ತಲೆಹಾಕಬಾರದಾಗಿತ್ತು, ಎಂಬುದು ಕೆಲವು ಹಿಂದೂಗಳ ಮೇಲೆ ಅಕ್ರಮಣ ಮಾಡಿದಾಗ ಅಪರಾಧಿಗಳನ್ನು ಹಿಡಿಯಲು ಸರ್ಕಾರದ ಅಧಿಕಾರಿಗಳಿಗೆ ಮನಸ್ಸಿಲ್ಲ ಎಂಬುದು ಸ್ಪಷ್ಟ

ಈ ಕೂಡಲೆ ತೆಗೆದುಕೊಳ್ಳಬೇಕಾದ ಕ್ರಮಗಳಲ್ಲಿ ಮುಖ್ಯವಾದುದು ಏನೆಂದರೆ ಈವರೆಗೂ ಬೆಳಕಿಗೆ ಬರದ ಅಪರಾಧಗಳ ತನಿಖೆಯನ್ನು ವಿಶೇಷ ನಂಬಿಕಸ್ಥ ಸಂಸ್ಥೆಯ ಮೂಲಕ ಮಾಡಿಸುವುದು ಮತ್ತು ಎಲ್ಲಾ ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದು. ಇದೇ ಕಾರಣಕ್ಕೆ ವಿಶೇಷ ನ್ಯಾಯಾಲಯಗಳ ಮುಂದೆ ಕಾನೂನು ಕ್ರಮ ಜರುಗಿಸಿ, ೨ ಅಥವಾ ೩ ತಿಂಗಳಲ್ಲಿ ಮೊಕದ್ದಮೆಗಳನ್ನು ಮುಗಿಸಬೇಕೆಂದು ನಾವು ಶಿಫಾರಸ್ಸು ಮಾಡುತ್ತೇವೆ. ಪ್ರಸ್ತುತ ಅನಾರೋಗ್ಯಕರ ವಾತಾವರಣ ಆದಷ್ಟು ಬೇಗನೆ ಕೊನೆಮುಟ್ಟಬೇಕು ಎಂಬುದು ಸಮಿತಿಯ ಆಶಯ.

ಇಲ್ಲಿ ಪ್ರಸ್ತಾಪಿಸಿರುವ ಅಕ್ರಮಗಳು ಮತ್ತು ಲೋಪಗಳು ಅತೃಪ್ತಿಗೆ ಕಾರಣವಾಗಿ ಪತ್ರಿಕೆಗಳಲ್ಲಿ ದೊಡ್ಡ ಪ್ರಮಾಣದ ಟೀಕೆ-ಟಿಪ್ಪಣೆಗಳನ್ನು ಸೃಷ್ಟಿಸಿದೆ. ನಮ್ಮ ಮುಂದಿರುವ ಸಾಕ್ಷ್ಯಾಧಾರಗಳಿಂದ ಒಂದೇ ಒಂದು ನಿರ್ಣಯಕ್ಕೆ ಬರಲು ಸಾಧ್ಯ. ಗಲಭೆ ಆಗದಂತೆ ತಡೆಯಲು ಸಾಧ್ಯವಿರಲಿಲ್ಲ ಎಂದೇನಿಲ್ಲ, ಅಲ್ಲದೆ, ಅದು ಆದಾಗ, ಕೂಡಲೇ ಕ್ರಮಗಳನ್ನು ತೆಗೆದುಕೊಂಡು ಸಾರ್ವಜನಿಕರ ನಂಬಿಕೆಯನ್ನು ಉಳಿಸಬೇಕಾಗಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಒಟ್ಟಿನಲ್ಲಿ ಎಲ್ಲರೂ ಒಪ್ಪಿಕೊಂಡಂತೆ ಜುಲೈ ೩೦ ರಂದು ಬಹುದೊಡ್ಡ ಸಂಖ್ಯೆಯಲ್ಲಿ ಜನರು ಗಾಯಗಳಿಗೆ ತುತ್ತಾದರು, ಆದರೆ, ಇದುವರೆಗು ನಾವು ಪರಿಶೀಲಿಸಿದ ಮಟ್ಟಿಗೆ ಯಾವ ಸಾವು ಆಗಿಲ್ಲ. ೩, ೪ ಜನರನ್ನು ಬಿಟ್ಟರೆ ಗಾಯಗಳು ತುಂಬಾ ಗಂಭೀರವಾಗಿ ಆಗಿಲ್ಲ. ಒಟ್ಟಿನಲ್ಲಿ ಗಲಭೆಗೆ ಸಂಬಂಧಿಸಿದಂತೆ ನಡೆದ ಪ್ರಸಂಗಗಳು ತುಲನಾತ್ಮಕವಾಗಿ ನೋಡಿದಲ್ಲಿ, ಅಮುಖ್ಯವಾದವು. ಸರ್ಕಾರಿ ಯಂತ್ರ ವರದಿ ಇದ್ದ ಕಾರಣ ನಿಜವಾದ ಭೀತಿ ಸೃಷ್ಟಿಯಾಗಿ ನ್ಯಾಯಯುತ ಟೀಕೆಯನ್ನು ಪ್ರಚೋದಿಸಿದೆ.

ಸರ್ಕಾರದ ಆಡಳಿತದಲ್ಲಿನ ಲೋಪ-ದೋಷಗಳನ್ನು ಗುರುತಿಸಿದ ನಂತರ ಸಮಿತಿಯು ದೀರ್ಘಕಾಲ ಸರ್ಕಾರ ಉಳಿಯುವಿಕೆಗಾಗಿ ಪರಿಹಾರಗಳನ್ನು ಆಪೇಕ್ಷಿಸುತ್ತಾ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರಗಳನ್ನು ಕುರಿತು ಚಿಂತಿಸಿದೆ. ಈ ಗಲಭೆಯನ್ನು ಕೇವಲ ಧಾರ್ಮಿಕ ಸಮಸ್ಯೆಯಷ್ಟಾಗಿಯೇ ಕಾಣದೇ ರಾಜಕೀಯ ಆರ್ಥಿಕ ಹಾಗೂ ಕೋಮುವಾದಗಳಿಗೆ ಸಂಬಂಧಪಟ್ಟ ಅಂಶಗಳಿಂದ ವರದಿಗಾರರು ಅವಲೋಕಿಸಿದ್ದಾರೆ. ಹಾಗಾಗಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾಣುವ ಈ ಎಲ್ಲಾ ಸಮಸ್ಯೆಗಳಿಗೆ ಯಾವ ಮಾದರಿಯ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂಬುದನ್ನು ಸಮಿತಿಯು ಇಲ್ಲಿ ಸೂಚಿಸಿದೆ.

ಗಣೇಶ ಗಲಭೆಯ ಅಥವಾ ಜುಲೈ ೩೦ರ ಸ್ಫೋಟವು ಒಂದು ಮುನ್ಸೂಚನೆ ಅಥವಾ ಮುಂದಿನ ಆಗು ಹೋಗುಗಳಿಗೆ ಮುನ್ನೆಚ್ಚರಿಕೆಯ ಗಂಟೆಯಾಗಿತ್ತು. ಈ ಸ್ಫೋಟವು ಮುಂದಿನ ಶಿವಪುರದ ಸತ್ಯಾಗ್ರಹ ಹಾಗೂ ವಿದುರಾಶ್ವಥದ ದುರಂತಗಳಿಗೆ ಪ್ರೇರಕ ಚಳವಳಿ

ಯಾಯಿತು[7] ಎಂಬ ಹೇಳಿಕೆಯನ್ನು ಸಮರ್ಥಿಸುತ್ತದೆ. ಮೈಸೂರು ಜನತೆಯಲ್ಲಿ ಸತ್ಯಾಗ್ರಹಗಳನ್ನು ಒಂದು ಪ್ರಬಲ ಅಸ್ತ್ರವನ್ನಾಗಿಸಿಕೊಳ್ಳಲು ಈ ಗಲಭೆಯು ಪ್ರಾಯೋಗಿಕ ಮಾದರಿಯಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಒಟ್ಟಿನಲ್ಲಿ ಸಮಿತಿಯು ಈ ಸ್ಫೋಟಕ್ಕೆ ಆಳವಾದ ಕಾರಣಗಳು ಮತ್ತು ತಡೆದಿಟ್ಟ ಶಕ್ತಿಗಳ ಇರುವಿಕೆಯನ್ನು ಭಾವಿಸುತ್ತದೆ.[8] ರಾಜ್ಯದ ಒಳಗೆ ಹಾಗೂ ಹೊರಗೆ ನಡೆಯುವ ವಿದ್ಯಮಾನಗಳನ್ನು ಅವಲೋಕಿಸಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲು ಸಮಿತಿಯು ಸೂಚಿಸಿದೆ.

ಒಟ್ಟಿನಲ್ಲಿ ಜನತೆಯು ಅಂದಿನ ಪ್ರಚಲಿತ ವಿದ್ಯಮಾನಗಳ ಕುರಿತು ಪ್ರಜ್ಞಾವಂತ ರಾಗುತ್ತಿರುವುದನ್ನು ಗುರುತಿಸಿದೆ. ಈ ಜನತೆಯಲ್ಲಿ ರಾಜಕೀಯ ಆಸಕ್ತಿಗಿಂತಲೂ ಆರ್ಥಿಕ ಆಸಕ್ತಿಯನ್ನು ಬೆಳಸಿ, ಉಳಿಸಲು ಪ್ರಯತ್ನಿಸಬೇಕೆಂದು ಸರ್ಕಾರಕ್ಕೆ ಸೂಚ್ಯವಾಗಿ ತಿಳಿಯಪಡಿಸುತ್ತದೆ. ಮೊದಲು ಸಮಿತಿಯು ರಾಜ್ಯದ ಹೊರಗೆ ಬ್ರಿಟೀಷ್ ಭಾರತದಲ್ಲಿ ನಡೆಯುತ್ತಿರುವ ರಾಜಕೀಯ ಚಳುವಳಿಗಳನ್ನು ಉಲ್ಲೇಖಿಸಿ ಮೈಸೂರಿನಲ್ಲಿಯೂ ಇವುಗಳ ಪ್ರಭಾವಗಳನ್ನು ಗುರುತಿಸಿದೆ. ಆ ಸಮಸ್ಯೆಗಳ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕೆಂದು ಸರ್ಕಾರಕ್ಕೆ ಅದು ಸೂಚಿಸಿದೆ.

ಗಣಪತಿ ಗಲಭೆಗೆ ಬ್ರಿಟೀಷ್ ಭಾರತದ ರಾಜಕೀಯ ಚಳವಳಿಗಳ ಪ್ರಭಾವ

ಅಂದಿನ ಸಮಕಾಲೀನ ರಾಜಕೀಯ ಚಳವಳಿಗಳು ಹೇಗೆ ಮೈಸೂರು ಸಂಸ್ಥಾನದ ಗಣಪತಿ ಗಲಭೆಗಳ ಮೇಲೆ ಪ್ರಭಾವ ಬೀರಿದವು ಎಂಬುದನ್ನು ಎಂ.ವಿಶ್ವೇಶ್ವರಯ್ಯ ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅವು

೧. **ಬಾರ್ಡೋಲಿ ಸತ್ಯಾಗ್ರಹ :** ವೇಗದ ಸಂಪರ್ಕದ ಅನುಕೂಲತೆಗಳು, ಪತ್ರಿಕೆಗಳ ಪ್ರಸರಣ, ಆಲೋಚನೆಗಳ ವಿನಿಮಯ ೧೯೩೦ರ ದಶಕದಲ್ಲಿ ಭಾರತದ ಚಾರಿತ್ರಿಕ ಘಟ್ಟಗಳು ಹೌದು. ಈ ಕಾರಣಕ್ಕಾಗಿಯೇ ಬೇರೆ ಬೇರೆ ವಲಯಗಳಲ್ಲಿ ಮೈಸೂರು ಜನತೆ ಬಹು ಬೇಗ ಇಂತಹ ರಾಜಕೀಯ ಚಳುವಳಿಗಳಿಂದ ಪ್ರಭಾವಿತರಾಗಿರುತ್ತಾರೆ. ಸುಲ್ತಾನ ಪೇಟೆ ಶಾಲೆಯ ಹುಡುಗರ ಮುಷ್ಕರ ಮತ್ತು ಸತ್ಯಾಗ್ರಹಗಳು ಬಾಂಬೆ ಪ್ರೆಸಿಡೆನ್ಸಿಯ ಭಾರ್ಡೋಲ ತಾಲೂಕಿನಲ್ಲಿ ನಡೆಯುತ್ತಿದ್ದ ಸತ್ಯಾಗ್ರಹದ ಪ್ರತಿಬಿಂಬವಾಗಿದೆ. ಇದನ್ನೇ ಸಮಿತಿಯು ವಿದ್ಯಾರ್ಥಿಗಳ ನಾಯಕರು ಮತ್ತು ಬೆಂಗಲಿಗರು ಬೊಂಬಾಯಿಯಲ್ಲಿ ನಡೆಯುತ್ತಿದ್ದ ಚಳುವಳಿಯಿಂದ ಪ್ರಭಾವಿತರಾಗಿದ್ದರು[9] ಎಂದು ಗುರುತಿಸುತ್ತದೆ. ವಾಸ್ತವವಾಗಿ ಬೊಂಬಾಯಿ ಸರ್ಕಾರ ಮತ್ತು ಬಾರ್ಡೋಲಿ ತಾಲೂಕಿನ ನಡುವಣ ವ್ಯಾಜ್ಯವು ಜುಲೈ ೩೦ ರಂದು ಗಲಭೆಯಾದ ಒಂದು ವಾರಕ್ಕೆ ಇತ್ಯಾರ್ಥವಾದುದನ್ನು ಗಮನಿಸಬಹುದಾಗಿದೆ.

೨. **ಹಿಂದೂ, ಮುಸ್ಲಿಂ ಭೇದ-ಭಾವಗಳು :** ವಿಶ್ವೇಶ್ವರಯ್ಯನವರು ಹಿಂದೂ ಮುಸ್ಲಿಮರ ನಡುವಣ ಜಗಳಕ್ಕೆ ನೇರವಾಗಿ ಬ್ರಿಟೀಷರನ್ನೇ ಹೊಣೆಯಾಗಿಸುತ್ತಾರೆ. (ವರದಿಯಲ್ಲಿನ ೧೨೬ನೇ ಪ್ಯಾರವನ್ನು ನೋಡಬಹುದು). "ಬ್ರಿಟೀಷ್ ಭಾರತದ ಕೇಂದ್ರ ಮತ್ತು ಪ್ರಾದೇಶಿಕ ಪರಿಷತ್ತುಗಳಿಗೆ ಕೋಮು ಆಧಾರದ ಮೇಲೆ ಮತದಾರರನ್ನು ವಿಭಾಗಿಸಲಾದ ನಂತರ ಹಿಂದೂ ಮುಸ್ಲಿಮರ ನಡುವೆ ಕಹಿಭಾವನೆಗಳು ತೀವ್ರವಾದವು. ತಮ್ಮ ಸುತ್ತಲಿರುವ ಹಿಂದೂ ಜನರ ಪದ್ಧತಿಗಳಿಗೆ ವಿರೋಧ ವ್ಯಕ್ತಪಡಿಸದೇ ಇದ್ದ ಮುಸಲ್ಮಾನರು ಈಗೀಗ ಹಿಂದೂಗಳಿಂದ ದೂರವಾಗುತ್ತಿದ್ದಾರೆ. ಇಂತಹ ಭಾವನೆಯೇ ಬೆಂಗಳೂರಿನ ಕೋಮು ಗಲಭೆಯನ್ನು ತ್ವರೆಗೊಳಿಸಿತು. ಬೇಧ ಭಾವಗಳು ಕಂಡು ಬಂದಾಗ ಹಿಂದೂ ಜನರು ತಮ್ಮ ಭಾವನೆಗಳನ್ನು ಸಾಮಾನ್ಯವಾಗಿ ವಾರ್ತಾ ಪತ್ರಿಕೆಗಳ ಮೂಲಕ ಮತ್ತು ಅಪರೂಪವಾಗಿ ಸಾರ್ವಜನಿಕ ಭಾಷಣಗಳಲ್ಲಿ ವ್ಯಕ್ತಪಡಿಸಿದರೆ ಮುಸಲ್ಮಾನರು ದೈಹಿಕ ಹಿಂಸೆಯ ಮೊರೆಹೊಗುತ್ತಿದ್ದರು" ಎಂಬ ಅಂಶವು ವರದಿಯಲ್ಲಿದೆ. ಬ್ರೀಟಿಷ್ ಭಾರತದಲ್ಲಿ ಈ ಎರಡೂ ಸಮುದಾಯಗಳ ಸಂಬಂಧ ಈ ರೀತಿ ಬಿಗಡಾಯಿಸಲು ಬ್ರೀಟಿಷರೆ ಕಾರಣರಾದರು ಎಂಬುದೇ ವರದಿಗಾರರ ಅನಿಸಿಕೆ.

೩. **ಸಾರ್ವಜನಿಕ ಸೇವೆಗಳಿಗೆ ನೇಮಕಾತಿಯ ಬಗ್ಗೆ ವ್ಯಾಜ್ಯ :** ವಿಶ್ವೇಶ್ವರಯ್ಯನವರು ತಮ್ಮ ರಾಜಿನಾಮೆಗೆ ಕಾರಣದಾಗಿದ್ದ ಮಿಲ್ಲರ್ ಸಮಿತಿಯ ವರದಿಯ ಬಗೆಗೆ ಈ ವರದಿಯಲ್ಲಿಯೂ ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ. "ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಮೈಸೂರಿನ ವಿವಾದ ಆರಂಭವಾದುದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ. ಸಾರ್ವಜನಿಕ ಸೇವೆಗಳಲ್ಲಿ ಬ್ರಾಹ್ಮಣೇತರರಿಗೆ ಪ್ರಾತಿನಿಧ್ಯ ನೀಡಬೇಕೆಂಬ ಚಳವಳಿಯಿಂದ" ಇದಕ್ಕೆ ಮಿಲರ್ ಸಮಿತಿಯ ವರದಿಯಿಂದಾಗಿ ಭೇದ-ಭಾವಗಳು ದ್ವೇಷಾಸೂಯೆಗಳು ಹೆಚ್ಚಾದವು.[೭] ಇಂದು ಈ ಎರಡು ಸಮುದಾಯಗಳ ನಡುವಣ ವೈಷಮ್ಯವನ್ನು ಸಮತೋಲನ ಮಾಡುವ ಅವಶ್ಯಕತೆ ಹೆಚ್ಚಾಗಿದೆ. ಎಂಬುದನ್ನು ತಿಳಿಸುತ್ತಾ "ಶತಮಾನಗಳಿಂದ ಸಮುದಾಯಗಳು ಶಾಂತಿಯಿಂದ ಬದುಕಿವೆ ಹಾಗಾಗಿ ಒಂದು ದುಂಡು ಮೇಜಿನ ಸಮ್ಮೇಳನವನ್ನು ಸಂಘಟಿಸಿ ಎರಡೂ ಸಮುದಾಯದವರು ಒಂದು ಒಪ್ಪಂದಕ್ಕೆ ಬರುವಂತೆಯೂ ಹಳೆಯ ಭಾತೃತ್ವವನ್ನು ಪುನರ್ ಸ್ಥಾಪಿಸುವಂತೆಯೂ ಪ್ರಯತ್ನಸಬಹುದೆಂದು" ಸೂಚಿಸುತ್ತಾರೆ.

ಮೈಸೂರಿನಲ್ಲಿ ಜವಾಬ್ದಾರಿಯುತ ಸರ್ಕಾರಕ್ಕಾಗಿ ಚಳುವಳಿ : ಜನತೆ, ಸರ್ಕಾರ, ಭಾರತದಲ್ಲಿನ ಅಂದಿನ ಚಳುವಳಿಗಳ ಅಗ್ರಹಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ವಿಶ್ವೇಶ್ವರಯ್ಯನವರು ಜವಾಬ್ದಾರಿಯುತ ಸರ್ಕಾರದ ಬಗೆಗೆ ಸರ್ಕಾರಕ್ಕೆ ಸೂಚಿಸಿದ್ದಾರೆ. ಜನತೆ ಹಾಗೂ ಸರ್ಕಾರಗಳ

ನಡುವಣ ಸಂಬಂಧ ಸೌಹಾರ್ದತೆಯಿಂದ ಇರಬೇಕು ಎಂಬುದು ಸಮಿತಿಯಲ್ಲಿನ ವಿಶೇಷ ಅಂಶವಾಗಿದೆ. ಅಲ್ಲದೆ "ಮೈಸೂರಿನ ರಾಜಕೀಯ ಪ್ರಜ್ಞೆ ಹೊಂದಿರುವ ಸಾರ್ವಜನಿಕರು (ದ್ವಿಪ್ರಭುತ್ವ ಹಾಕುತ್ತಿರುವಾಗ) ತಮ್ಮ ಸ್ವಂತ ಪದ್ದತಿ ದ್ವಿ ಪ್ರಭುತ್ವಕ್ಕಿಂತ ಹಿಂದೆ ಇರುವುದನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆದ್ದರಿಂದ ಸಂಪೂರ್ಣವಾದ, ನಿಜವಾಗಿಯೂ ಜವಾಬ್ದಾರಿಯುತವಾದ ಸರ್ಕಾರ ಮೈಸೂರಿಗೆ ಬೇಕು ಎನ್ನುವ ಚಳುವಳಿ ಆರಂಭವಾಗಿದೆ" ಎಂದಿದೆ. ಮೈಸೂರಿನ ಸರ್ಕಾರ ಮತ್ತು ಜನತೆಯ ನಡುವಿನ ಸಂಬಂಧ, ಬ್ರಿಟೀಷ್ ಭಾರತ ಮತ್ತು ಅದರ ಜನತೆಯ ಸಂಬಂಧಕ್ಕಿಂತ ಹೆಚ್ಚು ಹತ್ತಿರವಾಗಿರುವುದಕ್ಕೆ ಸಮಿತಿಯು ಸಂತಸವನ್ನು ವ್ಯಕ್ತಪಡಿಸುತ್ತಾ ರಾಜ್ಯದ ಅರಸರ ಬಗೆಗೆ ಮೈಸೂರು ಜನತೆಗೂ ನಂಬಿಕೆ, ಗೌರವ, ನಿಷ್ಠೆಗಳನ್ನು ಗುರುತಿಸುತ್ತದೆ. ಅದರೂ ಜನತೆಯಲ್ಲಿ ಜವಾಬ್ದಾರಿಯುತ ಸರ್ಕಾರಕ್ಕೆ ಬೇಡಿಕೆ ಹೆಚ್ಚಾಗುತ್ತಲೇ ಇದೆ ಎಂಬುದನ್ನು ವರದಿಯು ಗ್ರಹಿಸಿದೆ.

ಹೀಗೆ ಸಮಿತಿಯು ಮೈಸೂರು ರಾಜ್ಯದಾಚೆಗಿನ ಬ್ರಿಟೀಷ್ ಭಾರತದಲ್ಲಿಯ ವಿದ್ಯಮಾನಗಳ ಮೂಲಕ ಮೈಸೂರು ಜನತೆಯ ಸಮಸ್ಯೆಗಳನ್ನು ಗುರುತಿಸುತ್ತದೆ. ಅಲ್ಲದೆ ಅವುಗಳ ಪರಿಹಾರಗಳನ್ನು ಇಲ್ಲಿ ತಿಳಿಸಿರುತ್ತಾರೆ. ನಾವು ಕಾಣುವ ಅತೃಪ್ತಿ, ಸರ್ಕಾರದ ಧೋರಣೆ ಮತ್ತು ನೀತಿಗಳಿಗೆ ವಿರೋಧ ಇವುಗಳು ಈಗಾಗಲೇ ಬ್ರಿಟೀಷ್ ಭಾರತದಲ್ಲಿ ನಡೆಯುವ ಇದೇ ರೀತಿಯ ಚಟುವಟಿಕೆಗಳಿಂದ ಪ್ರಭಾವಿತವಾಗಿದೆ. ಈ ಪರಿಸ್ಥಿತಿಯಲ್ಲಿ ಉದ್ಭವವಾಗುವ ಸಮಸ್ಯೆಗಳನ್ನು ಎದುರಿಸಲೇಬೇಕು ಮತ್ತು ಹೆಚ್ಚು ಕಡಿಮೆ ಶಾಶ್ವತವಾದಂತಹ ಪರಿಹಾರಗಳನ್ನು ಹುಡುಕಲೇಬೇಕು ಎಂಬುದಾಗಿ ಸರ್ಕಾರಕ್ಕೆ ಸಮಿತಿಯು ಸೂಚಿಸಿದೆ. ಅಲ್ಲದೆ ಕೆಲವು ಪರಿಹಾರಗಳನ್ನು ಸಹ ಸಮಿತಿಯು ಸೂಚಿಸಿದೆ.

ಅವುಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ.

೧. ಕೋಮು ವ್ಯತ್ಯಾಸಗಳನ್ನು ಗುಣಪಡಿಸುವುದು.

೨. ನಿರುದ್ಯೋಗ ಸಮಸ್ಯೆಗೆ ಪರಿಹಾರ

೩. ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು. ಹಾಗೂ

೪. ದಿವಾನರನ್ನು ಮುಖ್ಯಮಂತ್ರಿಗಳನ್ನಾಗಿ ಉಳಿಸಿಕೊಳ್ಳುವುದು.

೧. ಕೋಮು ವ್ಯತ್ಯಾಸಗಳನ್ನು ಗುಣ ಪಡಿಸುವ ಬಗೆ

ಪ್ರಪಂಚದ ಯಾವುದೇ ಭಾಗದಲ್ಲಿ ಆಚರಣೆ, ಸಂಪ್ರದಾಯಗಳ ವೈವಿಧ್ಯತೆ ಇರುತ್ತದೆಯೋ ಅಲ್ಲಿ ಪರಸ್ಪರ ಜನರಲ್ಲಿ ಕಹಿ ಭಾವನೆ ಮತ್ತು ಅಪನಂಬಿಕೆಗಳು

ತಾಂಡವವಾಡುತ್ತಿರುತ್ತದೆ. ಅಂತೆಯೇ ಭಾರತದ ಪರಿಸ್ಥಿತಿಯೂ ಹೌದು. ಈ ಸನ್ನಿವೇಶದಲ್ಲಿ ಪರಿಪೂರ್ಣ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯು ಕಷ್ಟ ಸಾಧ್ಯವೇ ಸರಿ. ಇಂತಹ ವಿಷಯಗಳ ಬಗೆಗೆ ಸಮಿತಿಯು ಖೇದ ಪಡುತ್ತಾ ಧಾರ್ಮಿಕ ಗುಂಪುಗಳು, ಭಾಷೆಗಳು, ನಡವಳಿಕೆಗಳು, ಪದ್ಧತಿಗಳು ಮತ್ತು ಆಚರಣೆಗಳಿಂದಾಗಿ ಮೈಸೂರು ರಾಜ್ಯದಲ್ಲಿ ವೈವಿಧ್ಯತೆ ಹೆಚ್ಚಾಗಿ ಒಗ್ಗಟ್ಟು, ಸಾಮರಸ್ಯ ಇವುಗಳನ್ನು ಬೆಳಸುವ ಅಂಶಗಳು ಕಡಿಮೆಯಾಗಿವೆ. ಮಿಲರ್ ಸಮಿತಿ ವರದಿಯಿಂದಾಗಿ ಈಚೆಗೆ ಪರಿಚಯಿಸಲ್ಪಡುತ್ತಿರುವ ದ್ವೇಷಾಸೂಯೆಗಳು ಮತ್ತು ಕೋಮು ಚುನಾವಣಾ ವಿಭಾಗಗಳಿಂದಲೂ ಕುಮ್ಮಕ್ಕು ನೀಡಿವೆ ಎಂಬುದಾಗಿ ಅಭಿಪ್ರಾಯ ಪಡುತ್ತದೆ. ಎರಡೂ ಕಡೆಯ ಜನರಲ್ಲಿ ಇವುಗಳಿಗಿಂತಲೂ ದೇಶಭಕ್ತಿ ಹಾಗೂ ಸಾರ್ವಜನಿಕ ಹಿತಾಸಕ್ತಿಗಳನ್ನು ಪ್ರಚೋದಿಸಬೇಕು ಎಂಬುದು ವರದಿಯ ಅಧ್ಯಕ್ಷರಾದ ಸರ್.ಎಂ.ವಿ. ಅವರ ಅಭಿಪ್ರಾಯ.

ಜನರ ಅಭ್ಯಾಸ, ಆಚರಣೆಗಳನ್ನು ನಿಗಧಿತಗೊಳಿಸಲು ಪ್ರಯತ್ನಿಸುವುದು ಜನತೆಯಲ್ಲಿ ಕಾರ್ಯರೂಪಕ್ಕೆ ತರುವುದು ಶಾಶ್ವತ ಪರಿಹಾರಗಳಾಗಬಲ್ಲದು. ಹಲವು ವರ್ಷಗಳ ಹಿಂದೆ ತುರ್ಕಿ ಈ ಸುಧಾರಣೆಯನ್ನು ಆರಂಭಿಸಿತು. ಅಫ್ಘಾನಿಸ್ತಾನ ಅದೇ ಪ್ರಯತ್ನವನ್ನು ಇಂದು ಮಾಡುತ್ತದೆ. ಯುರೋಪಿನಿಂದ ಅಮೇರಿಕೆಗೆ ವಿವಿಧ ಜನಾಂಗಗಳು ಹೋಗಿರುವುದರಿಂದ ಅಲ್ಲಿನ ಅಭ್ಯಾಸ ಮತ್ತು ಆಚರಣೆಗಳನ್ನು ನಿಗದಿತಗೊಳಿಸಲು ಅಲ್ಲಿನ ಸರ್ಕಾರ ಮತ್ತು ಜನತೆ ಒಂದು ವಿಶೇಷ ಪ್ರಯತ್ನವನ್ನು ಮಾಡಿತು. ನಿಗದಿತ ಮಟ್ಟಗಳ ಸ್ಥಾಪಿತವಾದುವೆಂದರೆ ವಾಣಿಜ್ಯ ಸುಲಭವಾಗುತ್ತದೆ, ಸಾಮಾಜಿಕ ಸಂಬಂಧ ಬೆಳೆಯುತ್ತದೆ. ಒಳ್ಳೆಯ ತಿಳಿವಳಿಕೆ ಉಂಟಾಗುತ್ತದೆ, ಪರಸ್ಪರ ನಂಬಿಕೆ ಬೆಳೆಯುತ್ತದೆ. ಮತ್ತು ಅಗತ್ಯಗಳ ಬೆಲೆ ಕಡಿಮೆಯಾಗುತ್ತದೆ, ವಾಣಿಜ್ಯ ಕ್ಷೇತ್ರದಲ್ಲಿ ನಿಗದಿತ ಮಟ್ಟ ಎಂದರೆ ಕ್ರಮಬದ್ಧವಾದ ಕೆಲಸದ ವೇಳೆಗಳು, ಪ್ರತಿದಿನದ ವ್ಯಾಪಾರದಲ್ಲಿ ತಿಳುವಳಿಕೆ, ಕೆಲಸದ ವಿಧಾನದಲ್ಲಿ ಕಾರ್ಯತತ್ಪರತೆ, ಸಮಯವನ್ನು ದುಂದುವೆಚ್ಚ ಮಾಡದಿರುವುದನ್ನು, ಸ್ವಾವಲಂಬನೆ ಮತ್ತು ಗೃಹಕಾರ್ಯಗಳ ಬಗ್ಗೆ ಸರಿಯಾದ ಮನೋಭಾವ, ಯಶಸ್ವಿ ಬದುಕು ಹಾಗೂ ಬುದ್ಧಿವಂತ ಪೌರತ್ವ ಇವುಗಳನ್ನು ಸರ್ಕಾರವು ಪ್ರಜೆಗಳಲ್ಲಿ ರೂಢಿಸಲು ಪ್ರಯತ್ನಿಸಬೇಕು ಎಂದು ಸಮಿತಿಯು ಸೂಚಿಸಿದೆ.

ಇಂತಹ ಆರೋಗ್ಯಕರವಾದ ನಿಯಮಗಳು ತಾವೇ ತಾವಾಗಿ ಬೆಳೆಯುವುದಿಲ್ಲ. ಆದರೆ, ಶಿಕ್ಷಣ ಮತ್ತು ಪ್ರಚಾರಗಳ ಮೂಲಕ ಹುಟ್ಟಿಸಬೇಕಾಗುತ್ತದೆ. ನೈತಿಕತೆಗೆ ಸಂಬಂಧಪಟ್ಟ ಶಿಸ್ತು ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಕಾರ್ಯತತ್ಪರತೆ ಈ ಮೂಲಭೂತ ಅವಶ್ಯಕತೆಗಳ ಆಧಾರದ ಮೇಲೆ ನಿಯಮಗಳು ಹಾಗೂ ನಿಗದಿತ ಮಟ್ಟದ ವಿಶೇಷ ಸವಲತ್ತುಗಳು

ಇವುಗಳನ್ನು ಒಳಗೊಂಡಂತೆ ನಿಗದಿತ ಮಟ್ಟಗಳ ಬಗ್ಗೆ ಶಾಲೆಯಲ್ಲಿ ಯುವಕರಿಗೆ ಅರಿವು ಮೂಡಿಸಬೇಕು. ವಯಸ್ಕರಿಗೆ ಪ್ರವಚನಗಳು ಹಾಗೂ ರಾತ್ರಿ ಶಾಲೆಗಳ ಮೂಲಕ ತಿಳಿಯಪಡಿಸಬೇಕು.

ಶಾಲೆಯಲ್ಲಿ ತರಬೇತಿ ಮುಗಿಸಿ ಹೊರಗೆ ಬರುವ ಯುವಕನೊಬ್ಬ ತನ್ನ ಮಾತು ಮತ್ತು ಅಭ್ಯಾಸಗಳಲ್ಲಿ ಶುದ್ಧವಾಗಿರಬೇಕು, ದೇಶಭಕ್ತಿ, ಆಳುವವರಿಗೆ ನಿಷ್ಠೆ, ಉದ್ಯಮಶೀಲತೆಗೆ ಒಲವು, ಸ್ವಸಹಾಯದ ಬಗ್ಗೆ ಪ್ರೀತಿ, ಕಾಲದ ಮೌಲ್ಯದ ಬಗ್ಗೆ ಮೆಚ್ಚುಗೆ, ಕಾನೂನು ಮತ್ತು ಸುವ್ಯವಸ್ಥೆಗೆ ಗೌರವ, ಸರಿಯಾದ ಆಲೋಚನಾ ಕ್ರಮ ಮತ್ತು ಸರಿಯಾದ ಜೀವನಕ್ರಮದ ಮೌಲ್ಯದ ಬಗ್ಗೆ ಜ್ಞಾನ ಇವುಗಳನ್ನು ಪಡೆದಿರುವುದಲ್ಲದೆ, ಅದೇ ಸಮಯಕ್ಕೆ ಯಾವುದಾದರೂ ಒಂದು ವ್ಯವಹಾರದಲ್ಲಿ ಸ್ಥಾನ ಪಡೆದು ತನ್ನನ್ನು ತಾನು ಬೆಂಬಲಿಸಲು ಸಾಕಷ್ಟು ಕಾಲಕ್ಕೆ ಮತ್ತು ಬೌದ್ಧಿಕ ಸಾಮಗ್ರಿಗಳನ್ನು ಪಡೆದುಕೊಂಡಿರಬೇಕು. ಪಟ್ಟಣಗಳಿಗೆ ಮತ್ತು ಹಳ್ಳಿಗಳಿಗೆ ಸಮುದಾಯ ಮಂಡಳಿಗಳನ್ನು ಪುನಃ ರೂಪಿಸಬೇಕು. ಇವುಗಳಲ್ಲಿ ಎಲ್ಲಾ ಜಾತಿ, ವರ್ಗಗಳ ಪ್ರತಿನಿಧಿಗಳು ಒಟ್ಟಾಗಿ ಅವರ ಕಲ್ಯಾಣಕ್ಕಾಗಿ ಸಮಾನವಾದ ಕೆಲಸಗಳನ್ನು ಮಾಡಿ ಸಮಾನವಾದ ಹಿತಾಸಕ್ತಿಗಳನ್ನು ಬೆಳೆಸಿ, ಸಮಾನವಾದ ಪ್ರಜ್ಞೆಯನ್ನು ಅವರೆಲ್ಲರಲ್ಲೂ ಹರಡುವಂತೆ ಮಾಡಬೇಕು.

೨. ನಿರುದ್ಯೋಗ ಸಮಸ್ಯೆಗೆ ಪರಿಹಾರ

ಪ್ರಸ್ತುತ ಗಲಭೆಗೆ ನಿರುದ್ಯೋಗವೇ ಕಾರಣ ಎಂದು ಖಚಿತವಾಗಿ ಹೇಳಬಹುದು. ಹಿಂದೆ ನಾವು ಹೇಳಿದಂತೆ ಶಿಕ್ಷಣ ಮತ್ತು ಬುದ್ಧಿವಂತಿಕೆ ಮುನ್ನಡೆದಿವೆ. ಆದರೆ ಜನರ ಉದ್ಯೋಗಗಳು ಕೆಲವೇ ಆಗಿದ್ದು, ಸಮತೋಲನ ಇಲ್ಲವಾಗಿದೆ. ಕಾನೂನು ಕ್ಷೇತ್ರ ಉದ್ಯೋಗದಿಂದ ತುಂಬಿತುಳುಕುತ್ತದೆ. ಕೃಷಿಯು ನಮ್ಮ ದೇಶದಲ್ಲಿ ಇನ್ನೂ ಪ್ರಾಚೀನ ಯುಗದ್ದಾಗಿದೆ. ವಿದ್ಯಾವಂತರನ್ನು ಅದು ಆಕರ್ಷಿಸುವುದಿಲ್ಲ, ಕಾರಣ ದೊಡ್ಡದಾಗಿ ಸಂಘಟಿಸಿ, ವೈಜ್ಞಾನಿಕ ಹಾಗೂ ವ್ಯವಹಾರಿಕವಾಗಿ ಅದನ್ನು ನಡೆಸಲು ಆಗುತ್ತಿಲ್ಲ. ರಾಜ್ಯ ಸರ್ಕಾರವು ಕೈಗಾರಿಕೆ ಮತ್ತು ವಾಣಿಜ್ಯವನ್ನು ಮುಂದೆ ಕೊಂಡಯ್ಯಲು ಒಂದು ಚಳವಳಿಯನ್ನು ಆರಂಭಿಸಿದೆ. ಆದರೆ ಸಾಕಷ್ಟು ಹಣದ ಬೆಂಬಲವಿಲ್ಲದೆ ನಿಧಾನವಾಗಿ ಮುನ್ನಡೆಯುತ್ತಿದೆ. ಬೆಂಗಳೂರಿನಲ್ಲಿರುವ ವಾಣಿಜ್ಯವನ್ನು ಸ್ಥಳೀಯ ವ್ಯಾಪಾರಗಳು ಕಳೆದುಕೊಂಡು ಹೊರಗಿನವರ ಕೈ ಸೇರುತ್ತದೆ. ಕಾರಣ, ಅವರ ಸಂಘಟನಾ ಶಕ್ತಿ ಮತ್ತು ಬಂಡವಾಳ ಉತ್ತಮವಾಗಿದೆ. ಹಾಗಾಗಿ ಯುವಕರಲ್ಲಿ ಉತ್ಪಾದಕತೆಯನ್ನು ಪ್ರೋತ್ಸಾಹಿಸಬೇಕು.

ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಮುಖ್ಯವಾದ ಕ್ರಮಗಳು ಎರಡು ರೀತಿಯವು ಮೊದಲು, ತಾಂತ್ರಿಕ ಶಿಕ್ಷಣ ನಂತರ ಕೆಲವು ನಿರ್ದಿಷ್ಟ ನೆರವುಗಳು.

ಶಿಕ್ಷಣವನ್ನು ಮೊದಲು ತೆಗೆದುಕೊಂಡರೆ, ಮೈಸೂರು ವಿಶ್ವವಿದ್ಯಾಲಯಲದಲ್ಲಿ ಕೃಷಿ ಬೋಧನಾಂಗವನ್ನು ಆರಂಭಿಸುವ ಅಗತ್ಯವಿದೆ ಎಂಬುದು ಸಮಿತಿಯ ಅಭಿಪ್ರಾಯ. ಹಾಗೆಯೆ, ಹಳೆಯ ವಾಣಿಜ್ಯ ಬೋಧನಾಂಗವನ್ನು ಪುನಶ್ಚೇತನಗೊಳಿಸಬೇಕು. ಘನತೆವೆತ್ತ ಮಹಾರಾಜರ ಅನುಗ್ರಹಪೂರ್ವಕ ಆಳ್ವಿಕೆಯನ್ನು ನೆನಪಿಗೆ ತೆರೆಯಬೇಕೆಂದಿರುವ ತಾಂತ್ರಿಕ ಕಾಲೇಜನ್ನು ವಿಳಂಬವಿಲ್ಲದೆ ತೆರೆಯಬೇಕು. ಹೈಸ್ಕೂಲುಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ವೃತ್ತಿಪರ ತರಬೇತಿ ಕೊಡಬೇಕು. ಪ್ರಾಥಮಿಕ ಶಾಲೆಗಳು ಕೊಡುವ ಶಿಕ್ಷಣಕ್ಕೆ ಕೈಗಾರಿಕೆಯ ಬಗ್ಗೆ ಪಕ್ಷಪಾತವಿದ್ದರೆ ಒಳ್ಳೆಯದು. ಗ್ರಾಮಾಂತರ ಪ್ರದೇಶಗಳಲ್ಲಿ ಈ ಪಕ್ಷಪಾತ ಕೃಷಿಯ ಪರವಾಗಿರಬೇಕು. ಪ್ರಾಥಮಿಕ ಶಿಕ್ಷಣ ಖಡ್ಡಾಯವಾಗಿರಬೇಕು ಹಾಗೂ ಅನಕ್ಷರತೆಯನ್ನು ತೆಗೆದುಹಾಕಲು ರಾಜ್ಯ ಮಟ್ಟದ ಸಂಘಟನೆಯೊಂದಿರಬೇಕು.

ಕೈಗಾರಿಕೆಗಳಿಗೆ 'ನೆರವು' ಎಂದಾಗ ಮೊದಲಿಗೆ, ಅಗತ್ಯವಾದ ನಾಯಕರು, ನಿರ್ವಾಹಕರು, ತಾಂತ್ರಿಕ ತಜ್ಞರು, ಎರಡನೇ ಅಗತ್ಯ ಹಣದ ಬೆಂಬಲ. ರಾಜ್ಯದ ಹಣಕಾಸಿನ ೬ ರಿಂದ ೮ ರಷ್ಟನ್ನು ಸರ್ಕಾರಿ ಹಾಗೂ ಖಾಸಗಿ ಕೈಗಾರಿಕಾ ಚಟುವಟಿಕೆಗಳಿಗೆ ನೀಡಿದಲ್ಲಿ ಮುಂದಿನ ೧೦ವರ್ಷಗಳಲ್ಲಿ ಜನಸಂಖ್ಯೆಗೆ ಸಾಕಷ್ಟು ಉದ್ಯೋಗಾವಕಾಶಗಳು ಒದಗುವ ನಿರೀಕ್ಷೆ ಇದೆ. ಕೈಗಾರಿಕೆ ಮತ್ತು ವಾಣಿಜ್ಯದಲ್ಲಿ ಪ್ರಮುಖರಾದ ವಸ್ತುಗಳನ್ನು ಪ್ರತಿ ವರ್ಷ ಕ್ರಮಬದ್ಧವಾಗಿ ಹಣ ಸಹಾಯದ ಮೂಲಕ ಕಳುಹಿಸಬೇಕು. ಸರ್ಕಾರಿ ಇಲಾಖೆಗಳ ಹೊಸ ಕೈಗಾರಿಕೆಗಳನ್ನು ಆರಂಭಿಸಿ ಜಾಯಿಂಟ್ ಸ್ಟಾಕ್ ಕಂಪನಿಗಳನ್ನಾಗಿ ಮಾಡಿ ಖಾಸಗಿ ವ್ಯವಹಾರಸ್ಥರಿಗೆ ನೀಡಬೇಕು. ಪ್ರತಿವರ್ಷ ಹಳ್ಳಿ ಹಾಗೂ ಜಿಲ್ಲೆಗಳಲ್ಲಿನ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಯ ಮೊತ್ತ ಹಾಗೂ ಮೌಲ್ಯದ ಲೆಕ್ಕಚಾರವನ್ನು ಸರಿಯಾಗಿ ನಿರ್ವಹಿಸಬೇಕು.

ರಾಜ್ಯದ ಪುರುಷರು ಮತ್ತು ಮಹಿಳೆಯರು ಸೇರಿದಂತೆ ವಯಸ್ಕ ವ್ಯಕ್ತಿಗಳ ದೊಡ್ಡ ಜನಸಂಖ್ಯೆಯನ್ನು ಕೆಲಸಗಾರರಂತೆ ಬೆಳಸಿ ತಮ್ಮ ಸ್ವಂತ ಪರಿಶ್ರಮದಿಂದ ಪ್ರಮಾಣಿಕ ಬದುಕನ್ನು ಸಂಪಾದಿಸಲು ತರಬೇತಿ ಕೊಡಬೇಕು. ಯಾರು ತಮ್ಮ ಮೆದುಳು ಅಥವಾ ಮಾಂಸಖಂಡವನ್ನು ಬಳಸಿ ಸಾಮಾಗ್ರಿಗಳನ್ನು ಅಥವಾ ಸೇವೆಗಳನ್ನು ಉತ್ಪಾದಿಸುತ್ತಾರೋ ಅಂತಹ ಎಲ್ಲಾ ವ್ಯಕ್ತಿಗಳು ಕೆಲಸಗಾರರೆ. ಈ ಗುರಿ ಸಾಧಿಸಲು ಕೃಷಿ, ಕೈಗಾರಿಕೆ, ನೀರಾವರಿ, ರೈಲು ಪ್ರಯಾಣ, ಬೇರೆ ರೀತಿಯ ಪ್ರಯಾಣ, ವಾಣಿಜ್ಯ ಮತ್ತು ಎಲ್ಲಾ ರೀತಿಯ ವೃತ್ತಿಗಳು ಬಹುಗುಣವಾಗಬೇಕು.

ದೇಶದ ಬಲ ಅದರ ಪ್ರಾಕೃತಿಕ ಸಂಪತ್ತನ್ನು ವೃದ್ಧಿಪಡಿಸಿ, ಕೈಗಾರಿಕೆಗಳನ್ನು ಕಟ್ಟುವಲ್ಲಿ ಅಡಗಿದೆ. ನಾಯಕರನ್ನು ಕೆಲಸಗಾರರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವ ವ್ಯವಹಾರ ಘಟಕಗಳನ್ನು ದ್ವಿಗುಣಗೊಳಿಸಬೇಕು. ಆಗ, ಕೆಲಸ ಮಾಡಬೇಕು ಎಂಬ ಮನಸ್ಸಿರುವ ಎಲ್ಲರಿಗೂ ಅವರವರ ವೈಯಕ್ತಿಕ ಸಾಮರ್ಥ್ಯಕ್ಕೆ ತಕ್ಕಂತೆ ಉದ್ಯೋಗವಿರುತ್ತದೆ.

ಹೀಗೆ ಜನರಲ್ಲಿ ರಾಜಕೀಯದ ಕಡೆಗೆ ಆಲೋಚಿಸುವುದನ್ನು ತಪ್ಪಿಸಿ ಅವರನ್ನು ದುಡಿಮೆಗೆ ಹಚ್ಚಬೇಕು. ಅವರ ವೈಯಕ್ತಿಕ ಹಿತಾಸಕ್ತಿಯ ಮೂಲಕ ಸಾರ್ವಜನಿಕ ಹಿತಾಸಕ್ತಿಯನ್ನು ಸಹ ಸುಲಭವಾಗಿ ಕಾಪಾಡುವುದು ಸುಲಭ ಎಂಬುದು ವಿಶ್ವೇಶ್ವರಯ್ಯನವರ ಅಭಿಪ್ರಾಯವಾಗಿದೆ.

೩. ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು

ಮೂರನೆಯ ಮತ್ತು ಕೊನೆಯ ಸಮಸ್ಯೆ ಎಂದರೆ ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು. ಜನರಿಗೆ ಸಾಕಷ್ಟು ಉದ್ಯೋಗಳಿದ್ದು, ಭೌತಿಕ ಸಮೃದ್ಧಿ ಇದ್ದಲ್ಲಿ ತೃಪ್ತಿಯೂ ಇರುತ್ತದೆ. ಅವರ ಭವಿಷ್ಯದ ಆಶಯವೆಂದರೆ ಕೃಷಿ ಹಾಗೂ ಕೈಗಾರಿಕೆಯ ಉತ್ಪನ್ನವನ್ನು ಹೆಚ್ಚಿಸಿ ವ್ಯಾಪಾರವನ್ನು ಪ್ರೋತ್ಸಾಹಿಸುವುದು. ಹಣ ಸಂಪಾದಿಸುವ ಕ್ರಿಯೆಯಲ್ಲಿ ಮತ್ತು ಆಸ್ತಿ ಮಾಡುವ ಕ್ರಿಯೆಯಲ್ಲಿ ಅವರು ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಲ್ಲಿ ಸರ್ಕಾರದೊಂದಿಗಾಗಲಿ, ಅವರವರಲ್ಲಾಗಲಿ ಜಗಳವಾಡಲು ಸಮಯವಿರುವುದಿಲ್ಲ.

ತೃಪ್ತಿಯನ್ನು ಪ್ರೋತ್ಸಾಹಿಸಲು ಎರಡು ಮಾರ್ಗಗಳಿವೆ. ಒಂದು ರಾಜ್ಯದಲ್ಲಿ ಮುಸ್ಸೊಲಿನಿ ಮಾದರಿಯ ಸರ್ಕಾರ. ಜನತೆಯನ್ನು ವ್ಯಾಪಾರ ವ್ಯವಹಾರಗಳಲ್ಲಿ ತೀವ್ರವಾಗಿ ತೊಡಗಿಸಿಡಬೇಕು. ಅಥವಾ ಬ್ರಿಟೀಷ್ ಮಾದರಿಯ ಸಂವಿದಾನಾತ್ಮಕ ಪ್ರಭುತ್ವ, ಜನತೆಯ ಮೇಲೆ ಎಲ್ಲಾ ಜವಾಬ್ದಾರಿಯನ್ನು ಹಾಕುವಂತಹುದು. ಬಹಳ ಕಾಲ, ಬಹಳ ಎತ್ತರದ ಕಾರ್ಯತತ್ಪರತೆಯನ್ನು ಹೊಂದಿರುವ ಮುಸ್ಸೊಲಿನಿ ಮಾದರಿ ಸರ್ಕಾರವನ್ನು ನಿರ್ವಹಿಸುವ ಸಾಧ್ಯತೆ ಕಡಿಮೆ, ಅಥವ, ಸದಾ ಕಾಲ ಒಬ್ಬ ಮುಸ್ಸೊಲಿನಿಯನ್ನು ನಾಯಕನನ್ನಾಗಿ ಕರೆಸಿಕೊಂಡಿರುವುದೂ ಸಾಧ್ಯವಾಗದ ಕೆಲಸ. ಸುರಕ್ಷಿತವಾದ ಮತ್ತು ಹೆಚ್ಚು ಸಾಧಾರಣವಾದ ಪರ್ಯಾಯ ವ್ಯವಸ್ಥೆ ಎಂದರೆ, ಸರ್ಕಾರದಲ್ಲಿ ಎರಡು ಪಕ್ಷಗಳ ಸಂಪ್ರದಾಯವಾದಿಗಳು, ಪ್ರಗತಿಪರರು ಆಳ್ವಿಕೆಯನ್ನು ಪರಿಚಯಿಸಬಹುದು. ಈಗಿರುವ ಬ್ರಾಹ್ಮಣ, ಬ್ರಾಹ್ಮಣೇತರ ಎನ್ನುವ ವಿಭಾಗಗಳಿಗಿಂತ ಇದು ಉತ್ತಮ. ರಾಜ್ಯದಲ್ಲಿರುವ ಸಂಪೂರ್ಣ ಆಸ್ತಿ, ಅನುಭವ, ಸಂಸ್ಕೃತಿ ಎಲ್ಲವನ್ನೂ ಈ ಎರಡು ಪಕ್ಷಗಳು ಪ್ರತಿನಿಧಿಸಬೇಕು.

೪. ದಿವಾನರನ್ನು ಮುಖ್ಯ ಮಂತ್ರಿಗಳನ್ನು ಉಳಿಸಿಕೊಳ್ಳುವುದು

ಬುದ್ಧಿಜೀವಿ ವರ್ಗಕ್ಕೆ ಸಾಕಷ್ಟು ಉದ್ಯೋಗವಿಲ್ಲದಿರುವುದೇ ಪ್ರಸ್ತುತ ಅಶಾಂತಿಗೆ ಕಾರಣವಾಗಿದೆ. ಜೊತೆಗೆ, ಜನಗಳ ನಾಯಕರಿಗೆ ಸಾರ್ವಜನಿಕ ಕಲ್ಯಾಣದ ಬಗ್ಗೆ ಯಾವ ಜವಾಬ್ದಾರಿಯೂ ಇರುವಂತೆ ಕಾಣುವುದಿಲ್ಲ. ಭಾರತೀಯ ರಾಜ್ಯಗಳಲ್ಲಿ ಮೊದಲ ಸಾಲಿನಲ್ಲಿರುವ ಮೈಸೂರು, ಕಾಲದ ಅಲೆಗಳೊಂದಿಗೆ ಹಿಂದಕ್ಕೆ ಹೊಡೆದುಕೊಂಡು ಹೋಗುವ ಬದಲು, ಪೂರ್ವಸೂಚನೆಯೊಂದಿಗೆ, ಇನ್ನೂ ಸಮಯವಿರುವಾಗಲೆ ಜನತೆಯ ಮೇಲೆ ಒಂದಿಷ್ಟು ಜವಾಬ್ದಾರಿಯನ್ನು ಹೊರಿಸುವುದು ತನ್ನ ಹಿಂದಿನ ಸಂಪ್ರದಾಯದ ಪ್ರಕಾರ ನಡೆದಂತಾಗುತ್ತದೆ. ಸಮಯಕ್ಕೆ ತಕ್ಕ ಅನುಕೂಲಕರ ಸುಧಾರಣೆಗಳ ಪರಿಚಯದಿಂದ ಮಾತ್ರ ಅರಸರೊಂದಿಗಿನ ಬಾಂದವ್ಯ ಬೆಳೆಯಲು ಸಾಧ್ಯ

ಭಾರತದಲ್ಲಿ ಹಾಗೂ ಬೇರೆಡೆಯಲ್ಲಿ ಆದಂತೆ, ಮೈಸೂರಿನಲ್ಲೂ ಸಹ ಮಹಾಯುದ್ಧವು ಜನರ ಮನೋಭಾವವನ್ನು ಬದಲಿಸಿದೆ. ಸ್ವಯಂ ನಿರ್ಧಾರದ ಹೊಸ ಆಲೋಚನೆಗಳು ಬಲಹೀನರ ನಡುವೆ ಕೂಟಗಳನ್ನು ಮಾಡಿಕೊಂಡು ಶಕ್ತಿವಂತರಿಂದ ರಿಯಾಯಿತಿಗಳನ್ನು ಪಡೆದುಕೊಳ್ಳುವುದು, ಇವು ಎಲ್ಲಡೆ ಹರಡುತ್ತಿವೆ. ಮತ್ತು ಸಾರ್ವಜನಿಕರ ಮನಸ್ಸಿನಲ್ಲಿ ಹೊಸ ಆಕಾಂಕ್ಷೆಗಳು ಒಳಹೊಕ್ಕಿವೆ. ಇಂದಿನ ಮೈಸೂರು ನಾಯಕರಲ್ಲಿ ಆಶ್ಚರ್ಯ ಹುಟ್ಟಿಸುವಷ್ಟು ಬುದ್ಧಿವಂತಿಕೆ ಮತ್ತು ಸಾಮರ್ಥ್ಯ ಕಂಡುಬರುತ್ತಿದೆ. ಆದರೆ ಅವರ ತರಬೇತಿ ಮಾತ್ರ ಏಕಮುಖವಾಗಿ ಕಾನೂನು, ಸರ್ಕಾರಿ ಸೇವೆ ಅಥವಾ ಸಾಹಿತ್ಯ ಸೇವೆಗೆ ಮಾತ್ರ ಸಂಬಂಧಿಸಿದ್ದಾಗಿದೆ. ಬರೆ ಗ್ರಾಹಕರಾಗಿರುವ ಬದಲು ಉತ್ಪಾದಕರಾಗಲು, ವ್ಯಾಪಾರಕ್ಕೆ ಗಮನ ಹರಿಸಲು ರಾಜ್ಯದ ಯಂತ್ರ ಅವರಿಗೆ ಯಾವ ಅವಕಾಶವಾಗಲಿ, ಅನುಕೂಲತೆಗಳಾಗಲಿ, ಯಾವ ಪ್ರೇರಣೆಯಾಗಲೀ ನೀಡುತ್ತಿಲ್ಲ. ಆಡಳಿತದಲ್ಲಿಯಾಗಲೀ, ರಾಜ್ಯ ನೀತಿಯನ್ನು ರೂಪಿಸುವಲ್ಲಿಯಾಗಲೀ ಅವರ ಪಾತ್ರ ಏನೂ ಇಲ್ಲ ಎಂದು ಅನಿಸುತ್ತದೆ, ಇವೆಲ್ಲವೂ ಕೇಂದ್ರೀಕೃತಗೊಂಡು ಅರ್ಧ ಡಜನ್ ವ್ಯಕ್ತಿಗಳಿಗಿಂತ ಕಡಿಮೆ ವ್ಯಕ್ತಿಗಳು ಜವಾಬ್ದಾರಿ ಹೊತ್ತಿದ್ದಾರೆ. ಸಮುದಾಯಗಳು ಮತ್ತು ಹಿತಾಸಕ್ತಿಗಳು ಎಂದು ಜನರು ಇಬ್ಭಾಗಗೊಳ್ಳಲು ಮಿಲ್ಲರ್ ಸಮಿತಿಯ ವರದಿಯೇ ಕಾರಣ. ಜನರ ಶಕ್ತಿಯೆಲ್ಲಾ ಈಗ ಸರ್ಕಾರದೊಡನೆ ಹೊಡೆದಾಡಲು, ಅಥವ ಅವರಿವರೊಡನೆ ಹೊಡೆದಾಡಲು ವ್ಯಯವಾಗುತ್ತಿದೆ. ಏನೆ ಆದರೂ, ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರವೃತ್ತಿ ಬೆಳೆಯುತ್ತಿದೆ. ಯಾವ ದೇಶದ ಶಕ್ತಿ ಈ ರೀತಿ ಸಂಕುಚಿತಗೊಂಡಿದೆಯೊ ಅಥವ ಗುರಿತಪ್ಪಿದೆಯೊ ಅಂತಹ ದೇಶ ಸಂಪತ್ಭರಿತವಾಗುವ ಸಾಧ್ಯತೆ ಅತಿ ಕಡಿಮೆ ಇರುತ್ತದೆ.

ಹಿಂದೆ ಪ್ರಸ್ತಾಪಿಸಿರುವ ಪಿತೂರಿಯ ಸಿದ್ಧಾಂತವನ್ನು, ಸರ್ಕಾರವನ್ನು ದ್ವೇಷಿಸುವ ಮತ್ತು ಸದಾಕಾಲ ಸರ್ಕಾರದ ಕಾರ್ಯಗಳನ್ನು ಟೀಕಿಸುವ ಒಂದು ವರ್ಗ ಅಥವಾ ವ್ಯಕ್ತಿಗಳ ಕೂಟದ ವಿರುದ್ಧ ಹೇಳಲಾಗಿತ್ತು. ಈ ವರ್ಗದ ರಾಜಕೀಯ ವಿರೋಧವನ್ನು ಮನಸ್ಸಿಗೆ ಬಂದ ರೀತಿಯಲ್ಲಿ ನಾಶಗೊಳಿಸುವುದು, ಸರ್ಕಾರ ನಿರಂಕುಶ ಪ್ರಭುತ್ವವಾಗಿದ್ದರೆ ಸಾಧ್ಯವಾಗುತ್ತಿತ್ತು. ಮನಸ್ಸಿಗೆ ಬಂದ ರೀತಿ ಎಂದರೆ ವಾರ್ತಾ ಪತ್ರಿಕೆಗಳನ್ನು ತುಳಿದು ಹಾಕಿ, ಕೆಟ್ಟ ರಾಜಕಾರಣಿಗಳನ್ನು ಗಡಿಯಾಚೆ ಕಳಿಸಿ, ಇತ್ಯಾದಿ. ಆದರೆ, ಈ ೨೦ನೇ ಶತಮಾನದಲ್ಲಿ ಅದರಲ್ಲೂ ಯದ್ಧದ ನಂತರ, ಅಂತಹ ವಿಧಾನಗಳು ಪ್ರಜ್ಞಾವಂತ ಸಾರ್ವಜನಿಕ ಅಭಿಪ್ರಾಯಕ್ಕೆ ಸೈ ಎನಿಸುವುದಿಲ್ಲ ಮತ್ತು ಶಿಕ್ಷೆಯ ಭೀತಿಯಿಲ್ಲದೆ ಅಂತಹವನ್ನು ಜಾರಿ ಮಾಡುವುದು ಸುಲಭವಲ್ಲ. ಒಂದು ಪಿತೂರಿಯಲ್ಲಿ ಕೆಲವು ಹೇಳಿಕೆಗಳು ಮತ್ತು ಕಾರ್ಯಗಳನ್ನು ಸಂಬಂಧಪಟ್ಟ ವ್ಯಕ್ತಿಗಳ ಮೇಲೆ ಆರೋಪ ಹೊರಿಸಿದಲ್ಲಿ, ಅವರು ಕಾನೂನನ್ನು ವಾಸ್ತವವಾಗಿ ಮುರಿದಿಲ್ಲವಾದರೆ, ಅದು ರಾಜಕೀಯ ಅಥವ ಸಂವಿಧಾನಾತ್ಮಕ ವಿರೋಧಕ್ಕೆ ಸಾಕ್ಷಿ ಎಂದು ತೆಗೆದುಕೊಳ್ಳಬೇಕಾಗುತ್ತದೆ. ಮೈಸೂರಿನಲ್ಲಿ ಈಗ ವಾರ್ತಾಪತ್ರಿಕೆಗಳು ಮತ್ತು ಜನ ಅನುಭವಿಸುತ್ತಿರುವ ಹಕ್ಕುಗಳು ಬ್ರಿಟೀಷ್ ಭಾರತದಲ್ಲಿ ಕೆಟ್ಟಿರುವುದಕ್ಕಿಂತ ಹೆಚ್ಚಲ್ಲ, ಕೆಲವರು ಮಾಡುವ ವಿಪರೀತಗಳನ್ನು ನಾವು ಎಷ್ಟೇ ಖಂಡಿಸಿದರೂ, ಅವರ ಪ್ರಸ್ತುತ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ನಿರ್ಬಂಧಿಸುವುದು ಶಕ್ಯವಲ್ಲ. ಪಕ್ಕದ ಬ್ರಿಟೀಷ್ ಪ್ರದೇಶಗಳಲ್ಲಿ ಒಪ್ಪಿಗೆ ನೀಡಿರುವಂತೆ ಸರ್ಕಾರ ಮತ್ತು ಜನಗಳ ನಡುವಿನ ಸಂಬಂಧಕ್ಕಿಂತ ಕೆಲ ಮಟ್ಟದ ಸಂಬಂಧವನ್ನು ಕೇಳುವುದೂ ಶಕ್ಯವಲ್ಲ.

"ಯಾವುದೇ ದೇಶ ತನ್ನನ್ನು ತಾನು ಆಳಲು ಸಮರ್ಥವಾದಾಗ ಮಾತ್ರ ಅದು ಪರಿಪೂರ್ಣವಾಗಿ ಒಳ್ಳೆಯ ಆಳ್ವಿಕೆ ಪಡೆಯಲು ಸಾಧ್ಯ". ಭಾರತದ ಭವಿಷ್ಯದ ಸರ್ಕಾರಕ್ಕಾಗಿ ಪ್ರಸ್ತಾಪನೆಗಳನ್ನು ಅಂದು ಚರ್ಚಿಸುತ್ತಾ 'ಹೌಸ್ ಆಫ್ ಕಾಮನ್ಸ್'ನಲ್ಲಿ ಸುಮಾರು ೧೦೦ ವರ್ಷಗಳ ಹಿಂದೆ ಲಾರ್ಡ್ ಮೆಕಾಲೆ ಈ ಮಾತನ್ನು ಹೇಳಿದರು. ತಮ್ಮನ್ನು ತಾವು ಆಳುವ ಅವಕಾಶವನ್ನು ಅವರಿಗೆ ನೀಡಿ, ಅಭ್ಯಾಸದಿಂದ ಅವರ ಸಾಮರ್ಥ್ಯವನ್ನು ಬೆಳೆಸಬೇಕು. ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಈಗ ತಾನೆ ನಾವು ನೋಡಿದ ಪ್ರಸ್ತಾಪನೆಗಳು ತೀರಾ ಸಾಧಾರಣವಾದುವು ಎಂಬುದನ್ನು ನೆನಪಿನಲ್ಲಿಡಬೇಕು. ಈ ಅಧ್ಯಾಯದಲ್ಲಿ ಸಾಮಾಜಿಕ ಆರ್ಥಿಕ ಬೆಳವಣಿಗೆಗಾಗಿ ಸೂಚಿಸಿರುವ ಎಲ್ಲಾ ಕ್ರಮಗಳು ಹಾಗೂ ಎಲ್ಲಾ ಸಂವಿಧಾನಾತ್ಮಕ ಅನುಕೂಲತೆಯನ್ನು ಅಂಗೀಕರಿಸಿದ್ದಲ್ಲಿ, ಮೈಸೂರು ರಾಜ್ಯವು, ಒಂದು ನೂರು ವರ್ಷಗಳ ಹಿಂದೆ ಗ್ರೇಟ್ ಬ್ರಿಟನ್ ಇದ್ದಂತಹ ಸ್ಥಿತಿಯನ್ನು ಮತ್ತು ೫೦ವರ್ಷಕ್ಕೆ ಹಿಂದೆ ಜಪಾನ್ ಇದ್ದಂತಹ ಸ್ಥಿತಿಯನ್ನು ಮುಟ್ಟುತ್ತದೆ. ಇನ್ನು ನೆನ್ನೆ ತಾನೇ ಪಾಶ್ಚಿಮಾತ್ಯ ನಾಗರೀಕತೆಯೊಂದಿಗೆ

ಸಂಪರ್ಕ ಬೆಳೆಸಿರುವ ಅಫ್ಘಾನಿಸ್ಥಾನ್ ಮೈಸೂರಿಗಿಂತ ಮೊದಲು ಈ ಸ್ಥಿತಿಯನ್ನು ತಲುಪುವ ಸಂಭವವಿದೆ.

ಕೊನೆಯಲ್ಲಿ ವಿಶ್ವೇಶ್ವರಯ್ಯನವರು ಜವಾಬ್ದಾರಿ ಸರ್ಕಾರವನ್ನು ಜನತೆಗೆ ನೀಡಬೇಕೆನ್ನುವ ಅರ್ಥದಲ್ಲಿ ತನ್ನ ರಚನಾತ್ಮಕ ಕಾರ್ಯದ ಜವಾಬ್ದಾರಿಯನ್ನು ಭಾಗಶಃವಾದರೂ ಜನರ ಹೆಗಲಿಗೆ ಸರ್ಕಾರವು ವರ್ಗಾಯಿಸದಿದ್ದರೆ, ಸರ್ಕಾರದ ಮೇಲೆ ತುಂಬ ಅವಲಂಭಿತವಾಗುವುದರಿಂದ ಬರುವ ಬಲಹೀನತೆ ಮತ್ತಿತ್ತರ ಕೆಡುಕುಗಳು ಕಡಿಮೆಯಾಗದೆ, ರಾಜ್ಯದ ಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ತಮ್ಮ ಅದೃಷ್ಟವನ್ನು ನಾವೇ ರೂಪಿಸಿಕೊಳ್ಳಲು ಜನತೆಗೆ ಆಗುವುದಿಲ್ಲ. ಜವಾಬ್ದಾರಿಯ ಅರಿವು ಉಂಟಾದಾಗಲೇ ರಾಜ್ಯದಾದ್ಯಂತ ಜನತೆ ಕಣ್ಣು ತೆರೆಯುತ್ತದೆ. ಭವಿಷ್ಯದಲ್ಲಿ, ಮುಷ್ಕರಗಳು, ಅವ್ಯವಸ್ಥೆಗಳು, ಪುಂಡುತನ ಇವುಗಳನ್ನು ಹತ್ತಿಕುವುದು ಸರ್ಕಾರಕ್ಕೆ ಹೆಚ್ಚು ಹೆಚ್ಚು ಕಷ್ಟವಾಗುತ್ತದೆ. ಜನತೆಯ ನೈತಿಕ ಬೆಂಬಲವಿಲ್ಲದೆ ಆಡಳಿತದ ಸಾಮಾನ್ಯ ಕೆಲಸವನ್ನೂ ಸಹ ಮಾಡುವುದು ಸರ್ಕಾರಕ್ಕೆ ಕಷ್ಟವಾಗುತ್ತದೆ. ಅದರ ಬದಲು, ಗಲಭೆಗಳ ಪಾಠವನ್ನು ಆಳವಾಗಿ ಅಭ್ಯಸಿಸಿ, ವರದಿಯಲ್ಲಿ ಸೂಚಿಸಿರುವ ಪರಿಹಾರ ಕ್ರಮಗಳನ್ನು ಉತ್ಸಾಹದಿಂದ, ಬಿಡದೆ ಅನುಸರಿಸಿದಲ್ಲಿ, ಮೈಸೂರಿನ ಪುನರುಜ್ಜೀವನಕ್ಕೆ ಇದು ನಾಂದಿಯಾಗಬಹುದು ಎಂದಿದ್ದಾರೆ.

ಅಡಿಟಿಪ್ಪಣಿಗಳು

೧. ವೀರಣ್ಣಗೌಡ ಎಚ್.ಕೆ., **ಬದುಕು-ಮೆಲುಕು,** ಪು.೧೦೧

೨. ನಾರಾಯಣರಾವ್ ವಿ.ಎಸ್., **ಮೋಕ್ಷಗುಂಡಂ ವಿಶ್ವೇಶ್ವರಯ್ಯ ಜೀವನ-ಸಾಧನೆ,** ಪು.೨೩೩

೩. ವೀರಣ್ಣಗೌಡ ಎಚ್.ಕೆ., **ಬದುಕು-ಮೆಲುಕು,** ಪು.೧೦೨

೪. ಲಿಂಗಯ್ಯ ಡಿ., **ಶಿವಪುರ ಧ್ವಜಾ ಸತ್ಯಾಗ್ರಹ,** ಪು.೩೯

೫. ಎಂ.ವಿಶ್ವೇಶ್ವರಯ್ಯನವರ ಸಮಿತಿಯ ವರದಿ, ಕ.ರಾ.ಪ, ಪ್ಯಾರ.೧೨೪

೬. ಅದೇ, ಪು.೧೨೫

೭. ಅದೇ, ಪು.೧೨೭

೮. ಅದೇ, ಪು.೧೩೦

ಅಧ್ಯಾಯ ೭

ಫಲಿತಗಳು

೭

ಫಲಿತಗಳು

ಈವರೆಗೆ ಸುಲ್ತಾನಪೇಟೆಯ ಗಣಪತಿ ಗಲಭೆಯನ್ನು ಕುರಿತು ಅಧ್ಯಯನ ನಡೆಸಿದಾಗ ಕಂಡುಬರುವ ಅಂಶಗಳೆಂದರೆ– ಈ ಘಟನೆಗೆ ಒಂದು ಚಾರಿತ್ರಿಕ ಹಿನ್ನೆಲೆಯನ್ನು ಗುರುತಿಸಬಹುದಾಗಿದೆ. ಅದನ್ನು ಪರಿಶೀಲಿಸಿದಾಗ ಈ ಘಟನೆಯ ಹಿಂದಿನ ಪಿತೂರಿಗಳನ್ನು ಅರಿಯಬಹುದು. ಅದನ್ನು ಈ ರೀತಿ ಪರಿಶೀಲಿಸಬಹುದು. ಮೈಸೂರು ಸಂಸ್ಥಾನವನ್ನು ಆಳಿದ ಮುಸ್ಲಿಮ್ ಸುಲ್ತಾನರಾದ ಹೈದರ್ ಮತ್ತು ಟಿಪ್ಪುವಿನ ನಂತರ ಮೈಸೂರು ಸಂಸ್ಥಾನದಲ್ಲಿ ಮುಸ್ಲಿಮ್‌ರು ರಾಜಕೀಯವಾಗಿ ದಮನಕ್ಕೆ ಒಳಗಾದರು. ಕಮೀಷನರ್ ಆಳ್ವಿಕೆಗೂ ಮೊದಲು ಮತ್ತು ನಂತರದಲ್ಲಿ ಯಾವುದೇ ಒಬ್ಬ ಮುಸ್ಲಿಮ್‌ನೂ ಸಹ ರಾಜಕೀಯವಾಗಿ ಗುರುತಿಸಿಕೊಳ್ಳಲಾಗಲಿಲ್ಲ. ಮೈಸೂರಿನ ದಿವಾನ ಪದವಿಯೂ ಸೇರಿದಂತೆ ಮದ್ರಾಸ್ ಬ್ರಾಹ್ಮಣರು, ಸ್ಥಳೀಯ ಬ್ರಾಹ್ಮಣರುಗಳ ಹತೋಟಿಯಿಂದ ಮತ್ತೆ ಯಾವ ವರ್ಗದವರಿಗೂ ಧಕ್ಕದೆ ಇರುವ ಹಾಗೆ ಪಟ್ಟಭದ್ರತೆಯನ್ನು ಕಾಯ್ದುಕೊಂಡು ಬಂದದ್ದು ಗಮನಾರ್ಹ.

ಆದರೆ ಬದಲಾದ ರಾಜಕೀಯ ವಿದ್ಯಾಮಾನದ ಫಲವಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಕೈಗೊಂಡ ದಿಟ್ಟ ನಿಲುವಿನಿಂದ ಬ್ರಾಹ್ಮಣೇತರ ಮಾತ್ರವಲ್ಲ ಹಿಂದೂವೇತರರೂ ಆದ ಮಿರ್ಜಾ ಇಸ್ಮಾಯಿಲ್ ಅವರು ಮೈಸೂರಿನ ದಿವಾನ ಪದವಿಗೇರಿದರು. ಇದು ಸಹಜವಾಗಿಯೇ ಮೇಲ್ವರ್ಗದವರ ಕಣ್ಣು ಕೆಂಪಾಗಿಸಿತು.

ಮತ್ತೊಂದು ಕಡೆ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ದ್ವಂದ್ವತೆಯೊಂದು ಶುರುವಾಯಿತು. ರಾಷ್ಟ್ರಮಟ್ಟದ ಕಾಂಗ್ರೆಸ್ ನಾಯಕರೊಂದಿಗೆ ಮಿರ್ಜಾ ಅವರು ಉತ್ತಮ ಬಾಂಧವ್ಯವೊಂದಿದ್ದರು. ಆದರೆ ಸಂಸ್ಥಾನದ ಕಾಂಗ್ರೆಸ್ ನಾಯಕರು ಚಳುವಳಿಗಳನ್ನು ನಿಯಂತ್ರಿಸುತ್ತಿದ್ದ ಹಿನ್ನೆಲೆಯಲ್ಲಿ ಮಿರ್ಜಾ ಅವರನ್ನು ವಿರೋಧಿಸಲಾರಂಭಿಸಿದರು.

ಈ ಎಲ್ಲದರ ಪರಿಣಾಮವಾಗಿ ಮಿರ್ಜಾ ಇಸ್ಮಾಯಿಲ್ ಅವರನ್ನು ಅಸಮರ್ಥ ಎಂದು ತೋರಿಸುವ ಮೂಲಕ ಅವರನ್ನು ದಿವಾನಗಿರಿಯಿಂದ ಕೆಳಗಿಳಿಸಲು ಸಂಸ್ಥಾನದಲ್ಲಿ ರಾಜಕೀಯ ಅರಾಜಕತೆಯನ್ನು ಕಾನೂನು ಸುವ್ಯವಸ್ಥೆಯನ್ನು ಮುರಿದು ಹಾಕಲು ಪಟ್ಟಪದ್ರ ಹಿತಾಸಕ್ತಿಗಳು

ಒಂದು ವ್ಯವಸ್ಥಿತ ರಾಜಕೀಯ ಷಡ್ಯಂತ್ರವನ್ನು ಹೆಣೆದಿರುವಂತೆ ತಳೆಯುತ್ತದೆ. ಇಂತಹ ಪ್ರಯತ್ನ ಆಡಳಿತ ಕೇಂದ್ರ ಸ್ಥಾನವಾದ ಬೆಂಗಳೂರಿನಲ್ಲಿ ನಡೆದ ಬಿನ್ನಿಮಿಲ್ ಗಲಭೆ ಹಾಗೂ ಗಣಪತಿ ಗಲಭೆಗಳಲ್ಲದೇ ಸಂಸ್ಥಾನದ ಇತರ ಸ್ಥಳಗಳಾದ ದಾವಣಗೆರೆ ಹಾಗೂ ಕೋಲಾರ ದಲ್ಲಿಯೂ ವಿವಿಧ ಕಾರಣಗಳಿಂದ ಗಲಭೆಗಳು ಸಂಭವಿಸಿವೆ.

ವಿಶೇಷವಾಗಿ ಗಣೇಶ ಗಲಭೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಗಲಭೆಯಲ್ಲಿ ಭಾಗವಹಿಸಿದ ಬಹುತೇಕ ನಾಯಕರುಗಳು ಬ್ರಾಹ್ಮಣರಾಗಿದ್ದರು. ಬಹುಸಂಖ್ಯಾತರಾದ ಒಕ್ಕಲಿಗರ ನಾಯಕರು ಈ ಗಲಭೆಯಲ್ಲಿ ಪಾಲ್ಗೊಂಡಂತೆ ಕಾಣುವುದಿಲ್ಲ. ಒಂದು ಹಂತದಲ್ಲಿ ಎಚ್.ಕೆ.ವೀರಣ್ಣಗೌಡರು ತಮ್ಮ ಪತ್ರಿಕೆಯಲ್ಲಿ ಘಟನೆ ಕುರಿತು ಸರಿಯಾಗಿ ಬರೆಯಲಿಲ್ಲವೆಂದು ಬ್ರಾಹ್ಮಣರು ದೂರಿದರು. ಈ ಗಲಭೆ ಕುರಿತು ಮಿರ್ಜಾರವನ್ನು ವಿರೋಧಿಸಿದ ಬಣದಲ್ಲಿ ಬ್ರಾಹ್ಮಣರೇ ಪ್ರಧಾನವಾಗಿದ್ದರೆ, ಮಿರ್ಜಾ ಪರ ನಿಂತವರ ಬಣದಲ್ಲಿ ಬ್ರಾಹ್ಮಣೇತರರು ಪ್ರಧಾನವಾಗಿರುವ ಅಂಶಗಳನ್ನು ಗಮನಿಸಬಹುದಾಗಿದೆ.

ಈ ಎಲ್ಲ ಅಂಶಗಳನ್ನು ಅವಲೋಕಿಸಿ ವಿಶ್ಲೇಷಿಸಿದಾಗ ಕರ್ನಾಟಕದ ಮೊದಲ ಅಧಿಕೃತ ಕೋಮುಗಲಭೆ ಗಣಪತಿ ಗಲಭೆಯಾಗಿರುತ್ತದೆ. ಈ ಗಲಭೆಗೆ ಕಾರಣ ದಿವಾನ್ ಮಿರ್ಜಾ ಇಸ್ಮಾಯಿಲ್‌ರ ಮೇಲಿನ ಬ್ರಾಹ್ಮಣ ಅಸಹಿಷ್ಣುತೆಯಾಗಿದೆ. ಸಂಸ್ಥಾನದಲ್ಲಿ ಅರಾಜಕತೆ ಸೃಷ್ಟಿಸಿ ಕಾನೂನು ಸುವ್ಯವಸ್ಥೆಯನ್ನು ಮುರಿದು ಹಾಕುವ ಮೂಲಕ ಅಸಮರ್ಥತೆಯ ಕಾರಣವನ್ನು ಮುಂದು ಮಾಡಿ ಮಿರ್ಜಾ ಇಸ್ಮಾಯಿಲ್‌ರನ್ನು ದಿವಾನ್ ಪದವಿಯಿಂದ ಕೆಳಗಿಳಿಸುವ ಈ ಪ್ರಯತ್ನವನ್ನು ವ್ಯವಸ್ಥಿತ ರಾಜಕೀಯ ಪಿತೂರಿ ಎನ್ನಬಹುದು.

ಈ ಗಲಭೆಯ ಕುರಿತು ತನಿಖೆ ನಡೆಸಲು ಸರ್ ಎಂ.ವಿಶೇಶ್ವರಯ್ಯನವರ ನೇತೃತ್ವದ ಸಮಿತಿ ಸಲ್ಲಿಸಿದ ವರದಿಯಲ್ಲಿ ಜವಾಬ್ದಾರಿ ಸರ್ಕಾರದ ಅವಶ್ಯಕತೆಯನ್ನು ಮುಂದಿಕ್ಕಿರುವ ಅಂಶ ಸಹ ಮೇಲ್ನೋಟಕ್ಕೆ ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಹಾಗೂ ಈ ಸಮಿತಿಯೆ ಮೊದಲ ಬಾರಿಗೆ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮುಂದಿಟ್ಟಿತು. ಆ ಮೂಲಕ ಜವಾಬ್ದಾರಿ ಸರ್ಕಾರದ ಕೋರಿಕೆಗೆ ಅಸ್ಥಿಬಾರ ಹಾಕಿತು ಎನ್ನಬಹುದು. ಈ ವರದಿಯಲ್ಲಿನ ಪ್ರಮುಖ ಫಲಿತಗಳನ್ನು ಹೀಗೆ ಸಂಕ್ಷಿಪ್ತಗೊಳಿಸಿ ಹೇಳಬಹುದು.

೧. ಗಣೇಶ ಗಲಭೆಯು ೧೧ ರಿಂದ ೧೪ ವರ್ಷದವರೆಗಿನ ಬಾಲಕರು ನಡೆಸಿದ ಚಳುವಳಿಯಾಗಿದ್ದರೂ ಅದರ ಪರಿಣಾಮಗಳು ಮಾತ್ರ ಅತ್ಯಂತ ಗಂಭೀರವಾದುದು ಎಂದು ಹೇಳಬಹುದು. ನಂತರದ ರಾಜ್ಯ ಕಾಂಗ್ರೆಸ್ ಸ್ಥಾಪನೆಗೆ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ವಿದುರಾಶ್ವಥ ಚಳುವಳಿಗೆ ಮೂಲ ಪ್ರೇರಣೆಯು ಈ ಘಟನೆಯಗಿತ್ತು ಎಂಬುದರಲ್ಲಿ

ಸಂದೇಹವಿಲ್ಲ. ಹಾಗಾಗಿ ಇದೊಂದು ಸಾಮಾನ್ಯ ಘಟನೆ ಎನಿಸಿದೆ. ಆದರೂ ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ತನ್ನದೇ ಆದಂತಹ ಒಂದು ವಿಶಿಷ್ಟ ಸ್ಥಾನಮಾನಗಳನ್ನು ಪಡೆದುಕೊಂಡಿದೆ.

೨. ಗಣೇಶ ಗಲಭೆಗೆ ಗಣೇಶನ ಸ್ವಸ್ಥಾನವೇ ಕಾರಣ. ಸಾರ್ವಜನಿಕ ಸ್ಥಳಗಳಲ್ಲಿ, ಖಾಸಗೀ ಸ್ಥಳಗಳಲ್ಲಿ, ಧಾರ್ಮಿಕ ತಾಣಗಳು ತಮ್ಮದೇ ಆದ ಸ್ಥಾನದ ಅಧಿಕಾರವನ್ನು ಪಡೆದಿರುತ್ತವೆ. ಹಾಗಾಗಿ ಗಣಪತಿಗೆ ಚಳುವಳಿ ತಪ್ಪೇನೂ ಅಲ್ಲ. ಆದರೆ ಅದಕ್ಕೆ ಕಟ್ಟುವ ಗುಡಿ ಮಾತ್ರ ಅನಧಿಕೃತ.

೩. ಈ ಗಲಭೆಗೆ ಪತ್ರಿಕೆಗಳು, ಬಾಹ್ಯ ನಾಯಕರುಗಳು ಪ್ರವೇಶದಿಂದಲೇ ದೊಡ್ಡದಾಗಿ ಬೆಳೆಯಲು ಆಂಶಿಕ ಕಾರಣ.

೪. ಗಲಭೆಗೆ ಮುಖ್ಯ ಕಾರಣಗಳನ್ನು ಇಡೀ ಅಧ್ಯಯನದಲ್ಲಿ ಸೂಕ್ಷ್ಮವಾಗಿ ಗಮನಿಸಿ ಎರಡು ಮುಖ್ಯವಾದ ನೆಲೆಗಳನ್ನು ಗುರುತಿಸಲಾಗಿದೆ. ಒಂದು ಅಧಿಕಾರಿ ನೆಲೆಯಲ್ಲಿ ಇನ್ನೊಂದು ಮೂಲಭೂತವಾದಿ ನೆಲೆಯಲ್ಲಿ. ಅಧಿಕಾರದ ನೆಲೆಯು ಒಂದು ಮತವು ಉಳಿಸಿಕೊಳ್ಳಲು ಪ್ರಯತ್ನಿಸಿದರೆ, ಇನ್ನೊಂದು ಗುಂಪು ಅಧಿಕಾರವನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ಎರಡೂ ಮತಗಳು ಅಧಿಕಾರದ ಉಳಿಕೆ ಹಾಗೂ ಗಳಿಸುವಿಕೆಗೆ ಮೂಲಭೂತವಾದಿತನವನ್ನು ಬಳಸಿಕೊಂಡಿದ್ದನ್ನು ಕಾಣಬಹುದು ಎಂಬುದನ್ನು ವರದಿಯ ಅಧ್ಯಯನದಲ್ಲಿ ಕಂಡುಹಿಡಿಯಲಾಗಿದೆ. ಈ ಎರಡೂ ಅಂಶಗಳು ನೇರವಾಗಿ ಅಲ್ಲದೇ ಹೋದರೂ ಪೂರಕವಾಗಿಯಾಗಿಯಾದರೂ ಅಧ್ಯಯನ ಮಾಡಿದಾಗ ಗಲಭೆಗೆ ಮೂಲ ಕಾರಣ ಏನು ಎಂಬುದು ತಿಳಿಯುತ್ತದೆ. ಎರಡು ವಿಭಿನ್ನ ಸಂಸ್ಕೃತಿಗಳು ಮೈಸೂರು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದನ್ನು ಕಾಣಬಹುದು. ಹಾಗೂ ಗುಪ್ತವಾಗಿ ಅಧಿಕಾರದ ಬಯಕೆ ಎರಡೂ ಸಾಂಸ್ಕೃತಿಕ ಪ್ರತಿನಿಧಿಗಳಿಗೆ ಇದ್ದಿದಂತು ನಿಜ. ಹಾಗಾಗಿ ಕೇವಲ ಗಲಭೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಧಿಕಾರಿ ನೆಲೆಗಳು, ಮೂಲಭೂತವಾದಿ ನೆಲೆಗಳು ಗಲಭೆಯನ್ನು ಹೇಗೆ ಮುನ್ನಡಸಿಕೊಂಡು ಹೋದವು ಎಂಬುದನ್ನು ನೋಡಬಹುದು.

೫. ವಿದ್ಯಾರ್ಥಿಗಳಿಗೆ ಇಷ್ಟು ದೊಡ್ಡ ಮಟ್ಟದ ಚಳುವಳಿಯ ಸ್ವರೂಪದ ಬಗೆಗೆ ತಿಳುವಳಿಕೆ ನೀಡಿದ್ದು ಮಾತ್ರ ಬಾಹ್ಯ ಬೆಂಬಲಿಗರು. ಪ್ರತಿಹಂತದಲ್ಲಿ ವಿದ್ಯಾರ್ಥಿಗಳನ್ನು ಈ ಬೆಂಬಲದಿಂದ ಸೆಂಟ್ರಲ್ ಜೈಲ್, ದಿವಾನರಗೃಹ ಇನ್ನಿತರೇ ಸ್ಥಳಗಳಲ್ಲಿ ದಾಂಧಲೆ ನಡೆಯಲು ಕಾರಣವಾಯಿತು.

೬. ಈ ಘಟನೆಗೆ ಮೂಲ ಕಾರಣ ವ್ಯಕ್ತಿ ಅಬ್ಬಾಸ್‌ಖಾನ್, ಮಿರ್ಜಾ ಇಸ್ಮಾಯಿಲರೇ ಈ ವಿಷಯವನ್ನು ತಿಳಿಸುತ್ತಾರೆ. ಬೆಂಗಳೂರಿನ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಂತಹ ಓರ್ವ ರಾಜಕಾರಣಿಯೇ ಈ ಘಟನೆಗೆ ಕಾರಣ ಎನ್ನುವುದು ಮಿರ್ಜಾರವರ ಅಭಿಪ್ರಾಯ. (ಮಿರ್ಜಾ ಇಸ್ಮಾಯಿಲ್, ಪು.೩೭). ಒಟ್ಟಿನಲ್ಲಿ ಇಲ್ಲಿ ನಡೆದ ಅನೇಕ ಘಟನೆಗಳು, ಕೋಮುಗಲಭೆಗಳು ಅಬ್ಬಾಸ್‌ಖಾನ್ ಪ್ರೇರಿತಗಳು ಎಂದು ಹೇಳಬಹುದು.

೭. ಸರಕಾರ ಹಾಗೂ ಜನತೆ ಈ ಎರಡು ವಿಭಾಗಗಳಲ್ಲಿ ಒಂದು ದೊಡ್ಡ ಕಂದರವನ್ನೇ ಈ ಗಲಭೆಯು ಸೃಷ್ಟಿ ಮಾಡಿತು. ಸರಕಾರದ ಬಗೆಗೆ ಜನರಲ್ಲಿ ನಂಬಿಕೆಯನ್ನು ಕಳೆದು ಹೋಯಿತು.

೮. ಅಬ್ಬಾಸ್‌ಖಾನ್‌ನು ಬೆಂಗಳೂರಿನ ರಸ್ತೆ ಸುಧಾರಣಾ ಸಂದರ್ಭದಲ್ಲಿ ಹಿಂದುಗಳ ಭಾವನೆಗಳು ಈಗಾಗಲೇ ಕೆರಳಿದ್ದವು. ಇದೇ ಸಂದರ್ಭದಲ್ಲಿ ನಡೆದ ಈ ಗಲಭೆಗೆ ಅಬ್ಬಾಸ್‌ಖಾನ ಹೆಸರು ಚಾಲ್ತಿಗೆ ಬಂದಾಗ, ಗಣೇಶನಿಗಾಗಿ ಪಟ್ಟು ಹಿಡಿದರು.

೯. ಬ್ರಾಹ್ಮಣ–ಬ್ರಾಹ್ಮಣೇತರ ಚಳುವಳಿಯು ಈ ಗಲಭೆಗೆ ಕಾರಣವಾಗಿದೆ ಎಂದು ಹೇಳಬಹುದು. ಈಗಾಗಲೇ ಬ್ರಾಹ್ಮಣರು, ಬ್ರಾಹ್ಮಣೇತರರಿಗೆ ನೀಡಿದ ಮೀಸಲಾತಿ ಸವಲತ್ತುಗಳಿಂದ ಸುಮಾರು ಸಂಖ್ಯೆಯಲ್ಲಿ ಸೇವೆಗಳಿಂದ ವಂಚಿತರಾದರು. ಇದು ಬ್ರಾಹ್ಮಣರ ಕೋಪಕ್ಕೆ ಕಾರಣವಾಗಿತ್ತು.

೧೦. ಗಲಭೆಯಿಂದ ತಕ್ಷಣ ಅಬ್ಬಾಸ್ ಖಾನ್‌ರ ಮನೆಯನ್ನಾಗಲೀ, ಸ್ಥಳವನ್ನಾಗಲೀ ಅಂದಿನ ಪೋಲೀಸ್ ಅಧಿಕಾರಿಗಳು ಸಂಪೂರ್ಣವಾಗಿ ತಪಾಸಣೆ ನಡೆಸದೇ ಬಿಟ್ಟಿರುವುದು ಹಾಗೂ ಅಲ್ಲಿನ ಸಾಕ್ಷ್ಯಗಳು ಸಂಪೂರ್ಣವಾಗಿ ಅಳಿಸಿ ಹೋಗಲು ಸಮಯಾವಕಾಶ ಕೊಟ್ಟಿದ್ದು ಒಂದು ವಿಪರ್ಯಾಸ.

೧೧. ದಿವಾನರು ಈ ಘಟನೆಗೆ ಸಂಬಂಧಿಸಿದ ಮಾಹಿತಿ ಇದ್ದರೂ ಸಹ ಆದಷ್ಟು ಬೇಗ ಕ್ರಮಗಳನ್ನು ತೆಗೆದುಕೊಳ್ಳದೇ ನಿಧಾನಿಸಿದರು, ಅಬ್ಬಾಸ್ ಖಾನ್ ಮನೆ, ಅದರ ಎದುರಿನ ಪ್ರದೇಶವಾದ ಗಣೇಶನ ಗೂಡು ಇವುಗಳು ಅತ್ಯಂತ ಸೂಕ್ಷ್ಮ ಪ್ರದೇಶಗಳಾದ್ದುದರಿಂದ ನಾಯಕರ ಬಿಡುಗಡೆಯ ತಕ್ಷಣ ಕನಿಷ್ಠ ಕೆಲವು ದಿನಗಳ ಮಟ್ಟಿಗೆ ಪೋಲೀಸ್ ಕಾವಲು ವ್ಯವಸ್ಥೆಯನ್ನು ಭದ್ರವಾಗಿ ಇರಿಸಬೇಕಾಗಿತ್ತು. ಸಾವಿರಾರು ಮಂದಿ ಈ ಗುಡಿನ ಬಳಿ ಸೇರಿದಾಗ ಪೋಲೀಸರ ಸಂಖ್ಯೆ ಅತ್ಯಂತ ಕಡಿಮೆ ಇತ್ತು.

೧೨. ಅಬ್ಬಾಸ ಖಾನ್‌ರು ದಿವಾನರಿಗೆ ಆಪ್ತರಾಗಿರುವುದರಿಂದ ಪೋಲೀಸ್ ವ್ಯವಸ್ಥೆಯಲ್ಲಾಗಲೀ,

ಇನ್ನಿತರೇ ಅಧಿಕಾರ ವರ್ಗವಾಗಲೀ ಅಬ್ಬಾಸ್‌ಖಾನ್‌ರ ವಿರುದ್ಧ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಎಂಬುದು ತಿಳಿದುಬರುತ್ತದೆ.

೧೨. ಸರ್ಕಾರಿ ಯಂತ್ರವು ಸಂಪೂರ್ಣವಾಗಿ ವಿಫಲವಾಗಿತ್ತು ಎಂಬುದನ್ನು ವರದಿಯಲ್ಲಿ ನೋಡಬಹುದು. ಗಲಭೆಯ ವಿವಿಧ ಹಂತಗಳಲ್ಲಿ ಪೋಲೀಸ್ ವ್ಯವಸ್ಥೆಯಾಗಲೀ ನ್ಯಾಯಾಲಯ ವ್ಯವಸ್ಥೆಗಳು ಶೀಘ್ರವಾಗಿ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

೧೩. ಕಲಾಮಿ ಎಂಬುವವರು ಪರಿಶೀಲನಾ ಸಮಿತಿಯು ಸಲ್ಲಿಸಿದ್ದ ವರದಿಯ ಬಗೆಗೆ ಅತೃಪ್ತಿಯನ್ನು ವ್ಯಕ್ತಿಪಡಿಸಿ ಇವರು ತಮ್ಮದೇ ಆದ ವರದಿಯನ್ನು ಸಲ್ಲಿಸಿದರು. ಇಲ್ಲಿ ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತಿ ಮುಸ್ಲಿಮರ ಪರವಾಗಿ ವಾದಗಳನ್ನು ಮಂಡಿಸಿದ್ದಾರೆ.

೧೪. ಗುಪ್ತ ಸಮಾಜವು ಸರ್ಕಾರವನ್ನು ಬುಡಮೇಲು ಮಾಡಲೆಂದೇ ಈ ಗಲಭೆಯನ್ನು ಪ್ರೋತ್ಸಾಹಿಸಿದೆ ಎಂಬ ಅಭಿಪ್ರಾಯಗಳು ಸುಳ್ಳು, ಆದರೆ ಸರ್ಕಾರದ ಬಗೆಗೆ ಅತೃಪ್ತಿ ಹೊಂದಿ ಕೆಲವು ವರ್ಗಗಳನ್ನು ಒಳಗೊಂಡಿತ್ತು. ಹಾಗಾಗಿ ಸರ್ಕಾರವನ್ನು ಬುಡಮೇಲು ಮಾಡುವಷ್ಟರ ಮಟ್ಟಿಗೆ ಇಲ್ಲಿನ ಜನತೆ ಪ್ರಯತ್ನಪಡಲಿಲ್ಲ. ದಿವಾನರ ಬಳಿಯಾಗಲೀ, ಸೆಂಟ್ರಲ್ ಜೈಲ್ ಮುಖ್ಯಾಧಿಕಾರಿಗಳ ಬಳಿಯಲ್ಲಿ ಚಳುವಳಿ ನಿರತವರು ಮನವಿಯನ್ನು ಮಾಡಿಕೊಂಡಿರುವುದನ್ನು ಗಮನಿಸಬಹುದಾಗಿದೆ.

೧೫. ಪತ್ರಿಕೆಗಳು ಹಿಂದೂ ಪರವಾಗಿರುವುದನ್ನು ಈ ಘಟನೆಯಲ್ಲಿ ಕಾಣಬಹುದು. ಒಟ್ಟಿನಲ್ಲಿ ಹೇಳುವುದಾದರೆ ಅಧಿಕಾರ ಮುಸ್ಲಿಮರ ಕೈಯಲ್ಲಿ ಇರುವಾಗ(ಅಲ್ಪಸಂಖ್ಯಾತರು) ಮಾಧ್ಯಮವು ಸಂಪೂರ್ಣವಾಗಿ ಸರ್ಕಾರದ ವಿರುದ್ಧವಾಗಿದ್ದಿತು. ಹೀಗಾಗಿ ಘಟನೆಯು ಅಧಿಕಾರ ಮಾಧ್ಯಮಗಳ ಹೋರಾಟವು ಹೌದು. ಅದನ್ನು ಅಧಿಕಾರ, ಬುದ್ಧಿ ಜೀವಿಗಳು, (ಸಮಕಾಲೀನ ಸಂದರ್ಭವನ್ನು ಪರಿಶೀಲಿಸಿದಾಗ) ಬಹುಸಂಖ್ಯಾತರು ಹೀಗೆ ಹಲವು ಪ್ರಶ್ನೆಗಳ ಮೂಲಕ ಇಡೀ ಗಲಭೆಯನ್ನು ಪರಿಶೀಲಿಸಬಹುದಾಗಿದೆ.

೧೬. ದಿವಾನರ ಸ್ಥಾನವನ್ನು ಚ್ಯುತಿ ಮಾಡಲೆಂದು ಈ ಘಟನೆ ನಡೆದಿದೆ ಎಂದು ಹೇಳಲಾಗುತ್ತದೆ. ಆದರೆ ಆ ಮಟ್ಟದ ಹೋರಾಟವು ಇಲ್ಲಿ ನಡೆದಿಲ್ಲ. ಅದು ಕೇವಲ ವದಂತಿ. ಜನತೆಯಲ್ಲಿ ದಿವಾನರ ಬಗೆಗೆ ಅತ್ಯಂತ ಗೌರವ, ಹೆಮ್ಮೆ, ಒಳ್ಳೆಯ ಅಭಿಪ್ರಾಯಗಳು ಇದ್ದವು. ಹಾಗಾಗಿ ದಿವಾನರ ಸ್ಥಾನ ಚ್ಯುತಿ ಸುಳ್ಳು.

೧೭. ಬಹುಮುಖ್ಯವಾಗಿ ಈ ಗಲಭೆಯು ಮೈಸೂರಿನಲ್ಲಿ ಬಹಳ ಬಲಿಷ್ಠವಾಗಿ ಬೆಳೆದಿದ್ದ ಬ್ರಾಹ್ಮಣೇತರ ಚಳುವಳಿಯನ್ನು ಹೊಡೆದು ಹಾಕಿತು. ಸರ್ಕಾರಿ ಸೇವೆಯಲ್ಲಿ ಬ್ರಾಹ್ಮಣೇತರ ಚಳುವಳಿಯಿಂದಾಗಿ ಅನುಕೂಲವಾಗಿದ್ದುದು ಎರಡು ಪಂಗಡಗಳಿಗೆ ಮಾತ್ರ. ೧. ಲಿಂಗಾಯಿತ,

೨. ಮುಸ್ಲಿಮರಿಗೆ. ಆದರೆ ಹಿಂದುಗಳಲ್ಲಿಯೇ ಬಹುಸಂಖ್ಯಾತರಾದ ಒಕ್ಕಲಿಗ, ಕುರುಬ ಇನ್ನಿತರೇ ಜಾತಿಯವರಿಗೆ ಸರ್ಕಾರಿ ಸೇವೆಗಳಲ್ಲಿ ಪ್ರಾಶಸ್ತ್ಯ ಸಿಗಲಿಲ್ಲ. ಗಲಭೆಯ ಸಂದರ್ಭದಲ್ಲಿ ಬಹುಪಾಲು ಆಡಳಿತವು ಮುಸ್ಲಿಮ್ ಅಧಿಕಾರಿಗಳೊಂದಿಗೆ ತುಂಬಿ ಹೋಗಿತ್ತು. ಹೀಗಾಗಿ ಬ್ರಾಹ್ಮಣೇತರ ಚಳುವಳಿಯ ಬಗೆಗೆ ಈ ಹಿಂದುಳಿದ ವರ್ಗಗಳಿಗೆ ತಾತ್ಸಾರ ಉಂಟಾಯಿತು. ಒಟ್ಟಿನಲ್ಲಿ ಬ್ರಾಹ್ಮಣೇತರ ಚಳುವಳಿಯು ದುರ್ಬಲವಾಯಿತು. ಹಾಗಾಗಿ ಪ್ರಜಾಪಕ್ಷ, ಕಾಂಗ್ರೆಸ್ ಪಕ್ಷಗಳು ಬಲಿಷ್ಠಗೊಂಡವು.

ಹೀಗೆ ಮೇಲ್ಕಂಡ ವಿಶ್ವೇಶ್ವರಯ್ಯನವರ ವರದಿ ಅತೃಪ್ತ ಬ್ರಾಹ್ಮಣರನ್ನು ಅನಾವರಣಗೊಳಿಸಿತ್ತು. ಸ್ವತಃ ಬ್ರಾಹ್ಮಣರೇ ಆಗಿದ್ದ ವಿಶ್ವೇಶ್ವರಯ್ಯನವರಿಂದ ತಮಗೆ ಅನುಕೂಲವಾಗಬಹುದೆಂದು ನಿರೀಕ್ಷಿಸಿದ್ದ ಕಲುಷಿತ ಮನಸ್ಸುಗಳಿಗೆ ಆಘಾತವಾಯಿತು. ಅಂದಿನ ಮೈಸೂರು ಸಂಸ್ಥಾನದ ಈ ಗಲಭೆ ರಾಜಮನೆತನ, ಮೇಲ್ವರ್ಗಗಳು, ಅಲ್ಪಸಂಖ್ಯಾತರು, ಆಡಳಿತಯಂತ್ರ, ಪೊಲೀಸ್-ಮಿಲಿಟರಿ ವ್ಯವಸ್ಥೆ, ಕೇಂದ್ರದ ಬ್ರಿಟೀಷ ಭಾರತದ ಸರ್ಕಾರ ಹಾಗೂ ಮಾಧ್ಯಮಗಳನ್ನು ಕೇಂದ್ರೀಕರಿಸಿಕೊಂಡಂತೆ ಗಮನಸೆಳೆದಂಥದ್ದು. ಈ ಹೊತ್ತಿಗೂ ನಡೆಯುತ್ತಿರುವ ಅನೇಕ ಕೋಮುಗಲಭೆಗಳಿಗೆ ಅಂದಿನ ಈ ವರದಿ , ಇತ್ಯಾದಿಗಳು ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲು ಪಾಠಕಲಿಸುವಂತಹುದೇ ಆಗಿದೆ.

ಅನುಬಂಧ ೧

೧. ಪ್ರಾಥಮಿಕ ಆಕರಗಳು ಮತ್ತು ಪೂರಕ ಸಾಹಿತ್ಯ

೨. ನಿಯತಕಾಲಿಕೆಗಳು

ಆಕರಗಳು

ಅ. ಪ್ರಾಥಮಿಕ ಆಕರಗಳು ಮತ್ತು ಪೂರಕ ಸಾಹಿತ್ಯ

೧. ಕಾಮತ್ ಸೂರ್ಯನಾಥ ಮತ್ತು ಲಕ್ಷ್ಮಣ್ ತೆಲಗಾವಿ., (೧೯೯೮), ಇತಿಹಾಸ ದರ್ಶನ, ಬೆಂಗಳೂರು : ಕರ್ನಾಟಕ ಇತಿಹಾಸ ಅಕಾಡೆಮಿ

೨. ಕೃಷ್ಣರಾವ್. ಎಂ.ವಿ., ಮತ್ತು ಕೇಶವಭಟ್ಟ ಎಂ.,(೧೯೭೦), ಕರ್ನಾಟಕ ಇತಿಹಾಸ ದರ್ಶನ, ಬೆಂಗಳೂರು: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ

೩. ಗುಂಡಪ್ಪ. ಡಿ.ವಿ.,(೧೯೭೧), ಮೈಸೂರಿನ ದಿವಾನರು, ಮೈಸೂರು: ಕಾವ್ಯಾಲಯ ಪ್ರಕಾಶನ

೪. ಗುಂಡಪ್ಪ. ಡಿ.ವಿ.,(೧೯೬೯), ಜ್ಞಾಪಕ ಚಿತ್ರಕಲೆ ಸಂಪುಟಗಳು, ಮೈಸೂರು: ಕಾವ್ಯಾಲಯ ಪ್ರಕಾಶನ

೫. ಗುಂಡಪ್ಪ. ಡಿ.ವಿ.,(೧೯೭೧), ಹಲವರು ಸಾರ್ವಜನಿಕರು, ಮೈಸೂರು: ಕಾವ್ಯಾಲಯ ಪ್ರಕಾಶನ

೬. ಚಂದ್ರಶೇಖರ್. ಎಸ್.,(೨೦೦೬), ವಸಾಹತುಕಾಲೀನ ಕರ್ನಾಟಕ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೭. ಚಂದ್ರಶೇಖರ್. ಎಸ್.,(೧೯೯೨), ಅಂಬೇಡ್ಕರ್ ಮತ್ತು ಗಾಂಧಿ, ಹೆಗ್ಗೋಡು: ಅಕ್ಷರ ಪ್ರಕಾಶನ

೮. ಚಂದ್ರಶೇಖರ್. ಎಸ್.,(೧೯೮೩), ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಒಳನೋಟಗಳು ೧೮೮೧–೧೯೪೦, ಬೆಂಗಳೂರು: ಅಂಕಣ ಪ್ರಕಾಶನ

೯. ಚಂದ್ರಶೇಖರ್. ಎಸ್.,(ಸಂ), (೧೯೯೭), ಕರ್ನಾಟಕ ಚರಿತ್ರೆ, ಸಂ.೩, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೧೦. ಚಂದ್ರಮೌಳಿ. ಕೆ., (೨೦೦೨), ಬೆಂಗಳೂರಿನ ನೋಟಗಳು : ಅಂದು–ಇಂದು, ಬೆಂಗಳೂರು: ಪ್ರಿಸಂ ಬುಕ್ ಪ್ರೈವೇಟ್ ಲಿಮಿಟೆಡ್

೧೧. ತಿರುಮಲೆ ತಾತಾಚಾರ್ಯ ಶರ್ಮ.,(೨೦೦೬), **ಮೈಸೂರು ಇತಿಹಾಸದ ಹಳೆಯ ಪುಟಗಳು**, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೧೨. ದಿವಾಕರ. ಆರ್.ಆರ್.,(ಸಂ), (೧೯೯೨), **ಕರ್ನಾಟಕದ ಪರಂಪರೆ, ಸಂ.೨**, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೧೩. ದೊರೆಸ್ವಾಮಿ. ಎಚ್.ಎಸ್.,(೨೦೦೬), **ಹೋರಾಟದ ದಿಟ್ಟ ಹೆಜ್ಜೆಗಳು**, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೧೪. ದೊರೆಸ್ವಾಮಿ. ಎಚ್.ಎಸ್.,(೨೦೦೬), **ನೆನಪಿನ ಸುರುಳಿ ತೆರೆದಾಗ**, ಬೆಂಗಳೂರು: ಸಾಹಿತ್ಯ ಮಂದಿರ

೧೫. ನಾರಾಯಣರಾವ್. ವಿ.ಎಸ್.,(೨೦೦೬), **ಮಿರ್ಜಾ ಇಸ್ಮಾಯಿಲ್ ಅವರ ಜೀವನ ಚರಿತ್ರೆ**, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

೧೬. ನಾರಾಯಣರಾವ್. ವಿ.ಎಸ್.,(೨೦೦೮), **ವಿಶ್ವೇಶ್ವರಯ್ಯ ಜೀವನ ಸಾಧನೆ**, ಬೆಂಗಳೂರು : ಅಂಕಿತ ಪ್ರಕಾಶನ

೧೭. ಬರಗೂರು ರಾಮಚಂದ್ರಪ್ಪ, ರಂಜಾನ್ ದರ್ಗಾ.,(೧೯೯೨), **ಕೋಮುವಾದಿ**, ಬೆಂಗಳೂರು: ಲಕ್ಷ್ಮಿ ಮುದ್ರಣಾಲಯ

೧೮. ಬಿಪನ್ ಚಂದ್ರ ಮತ್ತು ಇತರರು.,(೧೯೮೯), **ಇಂಡಿಯನ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್ ೧೯೫೭–೧೯೪೭**, ದೆಹಲಿ: ೧೯೮೯

೧೯. ಭಟ್. ಎಸ್.ಆರ್.,(೧೯೮೬), **ಹಿಂದೂ–ಮುಸ್ಲಿಮ್ ಘರ್ಷಣೆಗಳ ಸಮಸ್ಯೆ**, ಬೆಂಗಳೂರು: ನವಕರ್ನಾಟಕ ಪ್ರಕಾಶನ

೨೦. ಭಟ್. ಎಸ್.ಆರ್., ಹಾಗೂ ಇತರರು,(೨೦೦೫), **ಕೋಮುವಾದದ ಕರಾಳ ಮುಖಗಳು**, ಬೆಂಗಳೂರು: ನವಕರ್ನಾಟಕ ಪ್ರಕಾಶನ

೨೧. ರಹಮತ್ ತರೀಕೆರೆ,(೨೦೦೮), **ಧರ್ಮಪರೀಕ್ಷೆ**, ಬೆಂಗಳೂರು: ನವಕರ್ನಾಟಕ ಪ್ರಕಾಶನ

೨೨. ರಾಜಶೇಖರ. ಎಸ್., ಹಾಗೂ ಇತರರು,(೨೦೦೦), **ಕೋಮುವಾದದ ರಾಜಕೀಯ**, ಬೆಂಗಳೂರು: ನವಕರ್ನಾಟಕ ಪ್ರಕಾಶನ

೨೩. ರೋಮಿಲಾ ಥಾಪರ್ ಹಾಗೂ ಇತರರು., (೧೯೯೮), **ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ**, (ಅನು:ಗೋಪಾಲಕೃಷ್ಣರಾವ್ ಕೆ.ಎಲ್.), ಬೆಂಗಳೂರು: ನವಕರ್ನಾಟಕ ಪ್ರಕಾಶನ

೨೪. ಲಿಂಗಯ್ಯ ಡಿ.,(೧೯೭೯), ಶಿವಪುರ ಧ್ವಜ ಸತ್ಯಾಗ್ರಹ, ಬೆಂಗಳೂರು: ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕ ಟ್ರಸ್ಟ್

೨೫. ಲಿಂಗಯ್ಯ. ಡಿ.,(೧೯೮೧), ಸತ್ಯಾಗ್ರಹಗಳ ಸಂದರ್ಶನ, ಬೆಂಗಳೂರು: ಬನಶಂಕರಿ ಪಬ್ಲಿಕೇಷನ್

೨೬. ವಿಶ್ವೇಶ್ವರಯ್ಯ. ಎಂ.ವಿ.,(೨೦೦೫), ನನ್ನ ವೃತ್ತಿ ಜೀವನದ ನೆನಪುಗಳು: ಡಾ.ಗಜಾನನ ಶರ್ಮ, ಬೆಂಗಳೂರು: ಅಂಕಿತ ಪ್ರಕಾಶನ

೨೭. ವೀರತಪ್ಪ. ಕೆ.,(೧೯೭೭), ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಬೆಂಗಳೂರು: ವಿಜಯ ರವಿ ಪ್ರಕಾಶನ

೨೮. ವಿಭೂತಿ ನಾರಾಯಣರಾವ್.,(ಮೂಲ), (೨೦೦೯), ಕೋಮು ಗಲಭೆಗಳು ಹಾಗೂ ಭಾರತದ ಪೊಲೀಸರು, (ಅನು:ಹಸನ್ ನಯೀಂ ಸುರಕೋಡ್), ಬಳ್ಳಾರಿ: ಲೋಹಿಯಾ ಪ್ರಕಾಶನ

೨೯. ವೀರಣ್ಣಗೌಡ. ಎಚ್.ಕೆ.,(೨೦೦೬), ಬದುಕು-ಮೆಲುಕು, ಬೆಂಗಳೂರು: ವೀರಣ್ಣಗೌಡ ಸ್ಮಾರಕ ಪ್ರತಿಷ್ಠಾನ ಮುದ್ರಣ

೩೦. ಶರ್ಮ. ತಿ.ತಾ.,(೨೦೦೩), ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಜೀವನ ಸಾಧನೆ, ಬೆಂಗಳೂರು: ಅಂಕಿತ ಪ್ರಕಾಶನ

೩೧. ಸುಂದರ. ರಾವ್. ಬ.ನ.,(೧೯೮೫), ಬೆಂಗಳೂರು ಇತಿಹಾಸ ಸ್ಥಾಪನೆಯಿಂದ ಹಿಡಿದು ಸ್ವಾತಂತ್ರ್ಯದವರೆಗೂ, ಬೆಂಗಳೂರು: ವಸಂತ ಸಾಹಿತ್ಯ ಗ್ರಂಥಮಾಲೆ

೩೨. ಸೂರ್ಯನಾಥ್ ಕಾಮತ್.,(ಸಂ),(೧೯೮೦), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು(ಸಂ.೧,೨,೩), ಮೈಸೂರು: ಗೀತಾ ಬುಕ್ ಹೌಸ್

೩೩. ಸೂರ್ಯನಾಥ ಕಾಮತ್.,(ಸಂ), (೧೯೮೩), ಕರ್ನಾಟಕ ಗೆಜೆಟಿಯರ್, ಸಂ.೨, ಬೆಂಗಳೂರು

೩೪. ಸೂರ್ಯನಾಥ ಕಾಮತ್,(ಸಂ), ೧೯೪೭), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨, ಮೈಸೂರು: ಗೀತಾ ಬುಕ್ ಹೌಸ್

೩೫. ಹನುಮಂತಪ್ಪ. ಕೆ.,(ಸಂ), (೨೦೦೧), ವಿಧಾನ ಮಂಡಲ ಇತಿಹಾಸ, ಬೆಂಗಳೂರು: ವಿಧಾನ ಮಂಡಲ ಇತಿಹಾಸ ಕಚೇರಿ

೩೬. ಹಂಡ. ಆರ್.ಎಲ್.,(೧೯೬೮), ಹಿಸ್ಟರಿ ಆಫ್ ಫ್ರೀಡಂ ಸ್ಟ್ರಗಲ್ ಇನ್ ಪ್ರಿನ್ಸಲಿ ಸ್ಟೇಟ್, ನವದೆಹಲಿ: ಅಂಬಿಕ ಪ್ರಕಾಶನ

೩೭. ಹೆಟ್ನೆ. ಬಿ.,(೧೯೭೮), ದಿ ಪೊಲಿಟಿಕಲ್ ಎಕನಮಿ ಆಫ್ ಇನ್‌ಡೈರೆಕ್ಟ ರೂಲ್ ಮೈಸೂರು ೧೮೮೧–೧೯೪೭, ನವದೆಹಲಿ : ಅಂಬಿಕ ಪಬ್ಲಿಕೇಷನ್

ನಿಯತಕಾಲಿಕೆಗಳು

೧. ಸಾಧ್ವಿ

೨. ದಿ ಹಿಂದೂ

೩. ಮೈಸೂರ್ ಸ್ಟಾರ್

೪. ಒಕ್ಕಲಿಗರ ಪತ್ರಿಕೆ

೫. ವೀರ ಕೇಸರಿ

೬. ವಿಶ್ವ ಕರ್ನಾಟಕ – ಇತ್ಯಾದಿ

ಆ. ಖಾಸಗಿ ಪತ್ರಗಳು(ಕ.ರಾ.ಪ), ಬೆಂಗಳೂರು

೧. ಮಿರ್ಜಾ ಇಸ್ಮಾಯಿಲ್ ಕಲೆಕ್ಷನ್ಸ್

೨. ವಿಶ್ವೇಶ್ವರಯ್ಯ ಕಲೆಕ್ಷನ್ಸ್

ಆ. ಕಡತಗಳು

೧. ಸಿ.ಬಿ.ಫೈಲ್‌ಗಳು ಕಡತಗಳು

೨. ಪೊಲೀಸ್ ಫೈಲ್‌ಗಳು ಕಡತಗಳು

ಅನುಬಂಧ ೨

ಗಲಭೆಗೆ ಸಂಬಂಧಿಸಿದ ದಾಖಲೆಗಳು

71

ಎಚ್ಚರಿಕೆ

ಮೈಸೂರು ಡಿ॥ ಡೆಪ್ಯುಟಿ ಕಮಿಷನರು ರವರಿಗೆ–
ತಿಳಿಸುವುದೇನೆಂದರೆ

ನೀವು ಈಗ ಬೆಂಗಳೂರಿನಲ್ಲಿನ ಡಿಸುತ್ತಿರುವ ಹಿಂದೂ ಮುಸಲ್ಮಾನ್ ಜಗಳದಲ್ಲಿ ಬಹಳ ಮಟ್ಟಿಗೆ ಪುಂಡುತನ ಮಾಡುತ್ತಿರುವುದಾಗಿ ತಿಳಿಯುತ್ತೆ. ರಾಜಧಾನಿಯಲ್ಲಿ–ರಾಷ್ಟ್ರೀಯರೂ ನೀವು ಸಹ ಬಹಳ ದರ್ಪದಿಂದ ನೋಡಿಕೊಳ್ಳುತ್ತಾ ಇದ್ದೀರಿ. ಇದು ಹೀಗೆ ನಡೆಸುತ್ತೀರೋ ನೋಡೋಣ -

ನೀವು. ಮೈ॥ರಾ॥ ಸ್ವಾಕಾರು ಪ್ರಧಾನಮಂತ್ರಿ ವರ್ತಕ ಬಸುಮಯ್ಯನವರೂ ಮಾ॥ಮ ಹಮ್ಮದ್ ಸೇಟರೂ ಮತ್ತು ಮಾ॥ರಾ॥ ಧ್ರನಕೋಟಿ ಸೆಟ್ಟರು ಇವರುಗಳು ಮುಸ್ಲಿಮರ ವಿಷಯದಲ್ಲಿ ಸಂಬಾಸದಾಯ ಮಾಡುತ್ತಾರೆಂದೂ ಇವರುಗಳನ್ನು ಕರೆದು ನಿಂದಿಸಿ ಕಾರಣ ಕೇಳಿದರಿ (ವಾರಕ) ಎಂದೂವ ಇವರುಗಳನ್ನು ಕರೆದು ನಿಂದಿಸುವ ಕಾರಣ ವೇನು ? ನಿಮಗೂ ವರ್ತಮಾನ [illegible] ಬಂದಿದ್ದೆ. ಹೀಗೆ ಮಾಡಲು ಕಾರಣ ವೇನು ತಿಳಿಸು ತ್ತೆ. ನಿಮ್ಮ ಪ್ರಾಣದ ಪ್ರಭಾರತಿ ಮಯೂರ ಬರುವುದೆಂತ ಕಾಣುತ್ತೆ. ನಿಮ್ಮನ್ನೇ ಇಂ. ದಾಗಿಲ್ಲದೆ ಮೇಲೆ ಇರುವ ಸಂದರ್ಭದಲ್ಲಿ ನಿಮ್ಮನ್ನೇ ಇಂ. ದಾಗಿಲ್ಲದೆ ಮೇಲೆ ಇರುವ ಸಂದರ್ಭದಲ್ಲಿ ಅಪ್ಪನು ಹಾನರ ಮನೆ ನಿಮ್ಮ ಬಾಲ ಬಿಚ್ಚಿದರೆ ಬೆಂಗಳೂರಿನಲ್ಲಿ ಅಪ್ಪನು ಹಾನರ ಮನೆ ಕೊಡುವುದು. ಅಲ್ಲದೆ ನಿಮ್ಮ ಬಾಲ ಬಿಚ್ಚಿದರೆ ಹೋಡಿ ಹಾಕುತ್ತೇವೆ. ತಿಳಿಯುವುದು. ಅಲ್ಲದೆ ಲ್ಲಿನ ದಿನ ದಂಗೆ ರಕ್ತದ ಹೋಡಿ ಹಂಚುತ್ತೇವೆ. ತಿಳಿಯುವುದು. ಅಲ್ಲದೆ ಲ್ಲಿನ ದಿನ ದಂಗೆ ರಕ್ತ ದರ್ಬಾರಗಳು ನಿಮ್ಮ ಮನೆಗೆ ಗುರು ಬಾಚಕರ ಮನೆಗಳಿಗೆ ಮಾಡಿದಂತೆ ಅಕ್ರಮಗಳು ನಿಮ್ಮ ಮನೆಗೆ ಗುರು ಬಾಚಕರ ಮನೆಗಳಿಗೆ ನಡೆದು ಹೋಗುತ್ತೆ. ಜನ ಸ್ವಾಮಿ ಎಂಬುವನು ಹೋಗುವ ಗಸರುಗಳಿಗೂ ನಡೆದು ಹೋಗುತ್ತೆ. ಬಂದರೆ ಬಿರುದುಗಳಿಗೂ ನಡೆಸಿ ಬಿಡುತ್ತೇವೆ. ಬಂದರೆ ನಲ್ಲಿ ಸಾಕ್ಷಿ ನುಡಿದಿರುವಂತೆ ನಡೆಸಿ ಬಿಡುತ್ತೇವೆ.

ನಲ್ಲಿ ಸಾಕ್ಷಿ ನುಡಿದಿರುವಂತೆ ನಮ್ಮ ದಿವಾನರಿಗೂ ಅಪ್ಪನು ಹಾನರಿಗೂ ದಿಲ್ಲ.

ನಿಮ್ಮ ಜರಾಮರು ನಮ್ಮ ದಿವಾನರಿಗೂ ಅಪ್ಪನು ಹಾನರಿಗೂ ದಿಲ್ಲ. ಇಲ್ಲಿ ಕುರುಕರು ಕಷ್ಟಮಾತಿನ ಬೇಕೆಂದು ಇಷ್ಟು ಮಾಡುತ್ತಾ ಇದ್ದಾರೆ. ಇಲ್ಲಿ ಕುರುಕರು ದಾಳಾಗ ಬೇಕು. ಅಲ್ಲಿವರೆಗೂ ಬಿಡೋ ದಾಳಾಗ ಬೇಕು; ಇಲ್ಲಿ ಬಿರಾಮರು ದಾಳಾಗ ಬೇಕು. ಉದ್ದಿಗಳಿಗಳು. ದಿಲ್ಲ. ನಮ್ಮ ದಿವಾನರು ಸತ್ಯವಂತರು. ಯೋಗ್ಯರು. ಇವಂಗೆ ದಿವಾನಗಿರಿ ದಿಲ್ಲ. ನಮ್ಮ ದಿವಾನರು ಸತ್ಯವಂತರು. ಯೋಗ್ಯರು. ಇವರಂಗೆ ದಿವಾನಗಿರಿ ಗುಣವಂತರು. ಇದೆಲ್ಲಾ ನೋಡಿ ಹಾವಂದರು ಇವರಿಗೆ ದಿವಾನಗಿರಿ ಗುಣವಂತರು. ಇದೆಲ್ಲಾ ನೋಡಿ ಹೊಟ್ಟೆ ಕಿಚ್ಚು ಬಂದಿದೆ. ಹಾವಂದರು ಹೊಳ್ಳರು. ಇರು ನಿಮ್ಮವರಿಗೆ ಹೊಟ್ಟೆ ಕಿಚ್ಚು ಬಂದಿದೆ. ಹಾವಂದರು ಹೊಳ್ಳರು. ಇರು ನಿಮ್ಮವರಿಗೆ ನಿಮಗೆ ನೂಡಿ ದರಬಾರಿಗಳ್ಳ ಮುಖ್ಯನ ಮನೆಗೆ ಜೇಗಾರುವಾಗ ನಿಮಗೆ ಅಪ್ಪನು ಹಾನರಿಗೂ ಏನೇನು ಗಲು ನಮ್ಮ ದಿವಾನರು ಬಂದರೂ ಅಪ್ಪನು ಹಾನರಿಗೂ ಏನೇನು ಗಲು ನಮ್ಮ ದಿವಾಕರರು ಬಂದರೂ ಸರಿ. ದಾಗಿಲ್ಲದಲ್ಲಿ ಜ್ಞಾನಪ್ರಕಾರ ಹೊಂದರೆಯಾಗದಂತೆ ಮಾಡಿದರೆ ಸರಿ. ದಾಗಿಲ್ಲದಲ್ಲಿ ಜ್ಞಾನಪ್ರಕಾರ ಹೊಂದರೆಯಾಗದಂತೆ ಮಾಡಿದರೆ ಬಿಡುವುದಿಲ್ಲ. ನಮ್ಮ ದಿವಾನರು ರಕ್ತದ ಹೋಡಿ ಹಂಚಿದರೂ ರಕ್ತ ಬಿಡುವುದಿಲ್ಲ. ನಮ್ಮ ದಿವಾನರು ರಕ್ತದ ಹೋಡಿ ಹಂಚಿದರೂ ನಾನೇ ಗರ್ವಕೇಶ. ವನಗೇರೆಯ ಜೋ ತಮ್ಮ ಬಂಗಲೆಯಲ್ಲಿ ಪುಡುಗರಿಗೆ ನಾನೇ ಗರ್ವಕೇಶ. ಇದು ದುರ್ಭ ತಮ್ಮ ಬಂಗಲೆಯಲ್ಲಿ ಪುಡುಗರಿಗೆ ನಾನು ತೋರುತ್ತೇನೆ. ತಾವು ಇಲ್ಲ ದಾರೆ. ಇದು ದುರ್ಭ ಮಾಡಿ. ನಾನು ಅನುಗ್ರಹ ಮಾಡುತ್ತೇನೆ. ತಾವು ಇಲ್ಲ ದಾರೆ. ಇವರು ಮಾಡಿ. ನಾನು ಅನುಗ್ರಹ ಮಾಡುತ್ತೇನೆ. ದರಿಂದಲೇ ಮಂತ್ರ ವಾದ ಮಾತು. ಇವರು ಅಂಧಾವರು ಬಗರೋದರಿಂದಲೇ ಮಂತ್ರ ವಾದ ಮಾತು. ಇವರು ಅಂಧಾವರು ಬಗರೋದರಿಂದಲೇ ಮಂತ್ರ ಕಾಗರು ತಾನ್ತ್ರಿಕೆ. ಮಯೂರ ಇವರು ಜೋರಗಳು ಬಗ [illegible] ದು. ಅಲ್ಲಾ ಇ ಕಾಗರು ತಾನ್ತ್ರಿಕೆ. ಮಯೂರ ಇವರು ಜೋರಗಳು ಬಗ [illegible] ದು. ಅಲ್ಲಾ ಇ

ದ್ದಾನೆ.

ವಿಶ್ವೇಶ್ವರಯ್ಯನವರು [illegible] ಕಮಿಟಿಯಲ್ಲಿ ನಮ್ಮವರು ಸಾಕ್ಷಿ ದ್ದ

...ಗ ಈ ಮುಖ್ಯ ಶಾ: ದಲ್ಲಿ ಬಂದಿ[illegible] ಎಂತಲೂ ಇಂದುಗಳ ದಲ್ಲಿ ದಾ
ಲ - [illegible] ಮು ದ್ರವ್ಯ [illegible] ನ ಎಂತಲೂ. ಇಂದುಗಳು [illegible]
[illegible] ಸಿಲ್ಕ ನರು [illegible] ದಿದಾರೆ ಎಂತಲೂ ವಗೈರೆ
[illegible] ವರು [illegible] ಮತ್ತು ಬಂದಿ [illegible] ಇರುವ
[illegible] ಬಂದಿರ ಬಹುದು. ಮೇಲಿನ [illegible] ವರು ಯಾವ [illegible]
[illegible] ತಲುಪಿ [illegible] ತೇವೆ.
[illegible] ರಾಮ [illegible] ನಾವು [illegible]
[illegible] ಬರೆಯುತ್ತೇವೆ. [illegible]
[illegible] ದಲ್ಲಿ [illegible] ಶಂಕರನಾರಾಯಣ ರಾ
[illegible] ಸ್ವಾಮಿ, [illegible] ಸುಬ್ರಾಯರು, ಐ. ಜಿ.; [illegible] ವೆಂಕಟ
[illegible] ಶ್ರೀನಿವಾಸಯ್ಯಂಗಾರ್ರು, ರಾಜ, ವೆಂಕಟ
[illegible] ರವರು. [illegible] ವಿವಾದಕ್ಕೆ [illegible] ವಿದ್ಧ [illegible]
[illegible] ವಗೈರೆ ರನ್ನು [illegible] ವಿರಸಿಧ್ಧ [illegible] ಇದೇವೆ.
[illegible] ದೇವೆ. ನಮ್ಮವರನ್ನು ಎಲ್ಲಾ [illegible]
[illegible] ಮೂರು ದಿನ [illegible]
ಇಂದುಗಳು [illegible] ಜನ [illegible] ಬಹುದು.
[illegible] ವರು [illegible] ನಿದ್ದೆ [illegible] ನನ್ನ [illegible]
[illegible] ತರಲಿ. [illegible] ಐ. ಜಿ. ಗೆ [illegible]
[illegible] ನಮ್ಮವರು ಬಿಟ್ಟ 10
[illegible] ರಿದಾರೆ. [illegible] ನಮ್ಮವರು [illegible]
[illegible] ಬಿಟ್ಟ [illegible] 30 [illegible] 35
[illegible] ಗಳನ್ನು [illegible] ಬಿಟ್ಟ [illegible]
[illegible] ಗಳನ್ನು ಬಿಟ್ಟವು. ಇಲ್ಲದಲ್ಲಿ [illegible]
[illegible] ಜನಗಳನ್ನು [illegible] ತ್ತಿ [illegible] ವು.
[illegible] ಬಿಟ್ಟೆ
[illegible] ನಮ್ಮ [illegible] ಬರು [illegible]
[illegible] ಸ್ವಾಮಿ [illegible]
[illegible] ದಾನೆ.
[illegible] ನಮ್ಮ [illegible] ರನ್ನ
[illegible] ನರು ನಮ್ಮ [illegible] ಬಿಟ್ಟ [illegible]
[illegible] ರವರ ಮತ್ತು [illegible] ರಾಮರಾವ್ [illegible]
[illegible] ದಲ್ಲಿ [illegible] ನಿದೇವೆ. ನಿಮಗೂ [illegible]
[illegible] ಇಲ್ಲ. [illegible] ದಾವೆ. [illegible] ದಲ್ಲಿ ಇಬ್ಬರ
[illegible] ಬರುತ್ತದೆ.
[illegible] ದೇವೆ. ವಿರಸಿದ್ಧ [illegible]
[illegible] ನಿದೇವೆ. [illegible]
[illegible]. ನಿಮ್ಮ [illegible]

Received on 4.10.28.

"copy"

[illegible signature]

|| ಶ್ರೀ ಶ್ರೀಗಣಾಧಿಪತಯೇ ನಮಃ ||



ಅಸಾಧ್ಯ ಗಣಪತಿ !

ಗಣಪತಿಯ ಪುನಸ್ಥಾಪನೆ! ವಿದ್ಯಾರ್ಥಿಗಳ ದಿಗ್ವಿಜಯ!!

——o——

ಬೆಂಗಳೂರು ಸುಲ್ತಾನ್ ಪೇಟೆ ಹಿಂದೂ ಸ್ಕೂಲಿನ ಗಣಪತಿಯು ಮಹಿಮೆ [illegible] ವರ್ಣಿಸಲಸಾಧ್ಯವಾದುದು. ಕೆಲವು ದಿನಗಳ ಹಿಂದೆ ವಿದ್ಯಾಭ್ಯಾಸದ ಇ[illegible]ಸ್ಪೆಕ್ಟರವರ ದೃಷ್ಟಿಯು ಈ ಗಣಪತಿಯ ಮೇಲೆ ಬಿದ್ದು ಅದು ಸ್ಥಾನ[illegible]ವನ್ನು ಹೊಂದಬೇಕಾಗಿ ಬರಲು, ತಮ್ಮ ಪ್ರೇಮದ ಪುಸ್ತಕೆಗೆ ಇಂತಹ ಗ[illegible]ಯು ಬಾಧಿತಲ್ಲಾ ಎಂದು ಆ ಸ್ಕೂಲಿನ ಹುಡುಗರೆಲ್ಲರೂ ಮುಷ್ಕರ ಹಿಡಿದರು. ಅಧಿಕಾರಿಗಳು ನಿರ್ಲಕ್ಷ್ಯದಿಂದಿದ್ದುದನ್ನು ಕಂಡು ಮುಷ್ಕರವು ಬಲವಾ[illegible] ಊರನ್ನೆಲ್ಲಾ ಆಕ್ರಮಿಸಿತು. ವರ್ತಕರೂ, ನೌಕರರೂ, ಕೆಲಸಗಾರರೂ, ಹುಡುಗರೂ, ಮಕ್ಕಳೂ ಎಲ್ಲರಿಗೂ ವಿಸ್ಮಯವನ್ನುಂಟುಮಾಡಿತು. ಊರಿನ ಎ[illegible] ಸ್ಕೂಲುಗಳ ಬಾಲಕರೂ ಮುಷ್ಕರ ಹಿಡಿದು ಊರಿನಲ್ಲೆಲ್ಲಾ ಗಣಪತಿಯ ಮೆರವಣಿಗೆಯನ್ನು ನಡೆಸಿದರು. ಕಡೆಗೆ ಭಾರೀ ಸತ್ಯಾಗ್ರಹವು ಆರಂಭವಾಯಿತು. [illegible]ಂಗ ಸಭೆಗಳು ನಡೆದು ಅಧಿಕಾರಿಗಳ ವರ್ತನೆಯು ಖಂಡಿಸಲ್ಪಟ್ಟಿತು. ಊರಿನಲ್ಲೆಲ್ಲಾ ಅಸಮಾಧಾನವೂ ಅಶಾಂತಿಯೂ ತುಂಬಿತು.

ಈಚೆಗೆ ಬಂದ ಸಮಾಚಾರದಲ್ಲಿ ಈ ಚಳವಳಿಯು ಜಯಪ್ರದವಾಯಿತೆಂದು ತಿಳಿಯುತ್ತದೆ. ಗಣೇಶನು ಪುನಃ ಯಥಾಸ್ಥಾನದಲ್ಲಿ ಪ್ರತಿಷ್ಠಿಸಲ್ಪಟ್ಟಿರುವನು. [illegible] ವಿದ್ಯಾರ್ಥಿಗಳಿಗೆ ಶಾಂತಿಯನ್ನು ಉಪದೇಶ ಮಾಡುತ್ತಿದ್ದವರಲ್ಲಿ ಮುಂದಾಳುಗಳಾಗಿದ್ದ ಮ|| ಗಳಾದ ಎಚ್. ವಿ. ಸುಬ್ರಹ್ಮಣ್ಯಂ, ಜೆ. ಭೀಮರಾವ್ ಮತ್ತು ರಾಮಲಾಲ್ ತಿವಾರಿ, ಇವರುಗಳನ್ನು ಸಿಟಿ ಮ್ಯಾಜಿಸ್ಟ್ರೇಟರು [illegible] ಮಾಡಿಸಿ ಸೆಂಟ್ರಲ್ ಜೈಲಿನಲ್ಲಿಡಿಸಿರುವರು. ಅವರ ಸ್ಥಳಕ್ಕೆ ಮದೀರ[illegible]ಂಡನ ಹಳ್ಳಿಯ ಸುಪ್ರಸಿದ್ಧರಾದ ಶ್ರೀ|| ಸರ್ವಾಭಟ್ಟರವರು ಬಂದು ಕಾರ್ಯನಿರ್ವಹಣ ಮಾಡುತ್ತಿರುವರು. ಜೈಲಿನಲ್ಲಿರುವವರನ್ನು ಬಿಡಿಸಲು ಕೆಲವು ಜನ ದೊಡ್ಡ ಮನುಷ್ಯರು ಪ್ರಯತ್ನಿಸುತ್ತಿರುವರು. ಸೋಮವಾರದ ದಿನ ಬೆಂಗಳೂರಿ[illegible] ಸ್ಕೂಲುಗಳ ವಿದ್ಯಾರ್ಥಿಗಳೂ ಸ್ಕೂಲಿಗೆ ರಜಾ ಕೊಟ್ಟುಬಿಟ್ಟರು. ಮು[illegible] ಕೌನ್ಸಿಲರುಗಳು ಕೂಡಾ ಈ ವಿಷಯದಲ್ಲಿ ಸಹಾನುಭೂತಿ ತೋರಿಸುತ್ತಿ[illegible] ಸದ್ಯದಲ್ಲಿಯೇ ಎಲ್ಲವೂ ಶಾಂತವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. [illegible]ಪತಿಗೆ ಕಾರ್ಯಕಾರಣರೂಪದಿಂದ ಪ್ರಾಪ್ತವಾದ ಅಲ್ಪ ವಿಘ್ನವು ನಿವಾರಣೆಯಾಗಿದ್ದನ್ನು ಮೇಲೆ ಆ ಸ್ಕೂಲಿನ ಬಾಲಕರುಗಳಿಂದ ಮಾತ್ರವಲ್ಲದೆ ಊರಿನ [illegible] ಪ್ರಜೆಗಳಿಂದಲೂ ನಿರ್ವಿಘ್ನವಾದ ಸೇವೆಯನ್ನು ಸ್ವೀಕರಿಸುತ್ತ ದುರ್ಜನರಿಗೆ [illegible] ಶಾಸ್ತಿಯನ್ನು ಮಾಡುತ್ತಾ ಭಕ್ತರ ಸಮಸ್ತ ವಿಘ್ನಗಳನ್ನೂ ವಿನಾಶ ಮಾಡಲೆಂದು ಸಕಲರೂ ಪ್ರಾರ್ಥಿಸುತ್ತಿರುವರು. ಈ ರೀತಿಯಾಗಿ ಅತ್ಯುತ್ತಮವಾದ ಭಕ್ತಿ ಶ್ರದ್ಧೆಗಳಿಂದಲೂ ಉತ್ಸಾಹ ಸಾಹಸಗಳಿಂದಲೂ ತಮ್ಮ ಉದ್ದೇಶವನ್ನು ನೆರವೇರಿಸಿದ ವಿದ್ಯಾರ್ಥಿಗಣವನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು.

ತಾಯಿನಾಡು ೧-೮-೧೯೨೮

ತಾಯಿನಾಡು
1—8—1928

'ಇದೇನು ವಿನಾಯಕನ ಶಾಪವೋ?'

ಬೆಂಗಳೂರಿನಲ್ಲಿ ಗುಂಡಿನಮಳೆ; ಅನೇಕರು ಹತರಾದರು.

ಶ್ರೀಮನ್ಮಹಾರಾಜರವರೇ ಶಾಂತಿಸ್ಥಾಪನೆ ಮಾಡಬೇಕು.

ಗಣಪತಿಯ ಪುನಃಸ್ಥಾಪನೆಯಾಗಿ ಬೆಂಗಳೂರಿನ ವಿದ್ಯಾರ್ಥಿಗಳಿಗೆಲ್ಲರಿಗೂ ದಿ
ಜಯವಾಗಿ ಎಲ್ಲರೂ ಸಂತೋಷಸಮುದ್ರದಲ್ಲಿ ತೇಲಾಡುತ್ತಿರುವರೆಂದು ಕೇಳು
ಗಲೇ ಬೆಂಗಳೂರಿನಲ್ಲಿ ಹೊ
ರಾಟಗಳಾಗಿ ಗುಂಡಿನ ಮಳೆ ಸುರಿದು ಅನೇಕರು ಮೃತಪಟ್ಟರೆಂದು ಕೇಳುತ್ತೇವೆ.
ರಾಂಶವು ಯಾವುದೂ ನಮಗೆ ತಿಳಿಯದು. ಇಷ್ಟಕ್ಕೆಲ್ಲಾ ಗಣಪತಿಯನ್ನು ಕ
ಸಿದವರ ಅಚಾತುರ್ಯವೂ ಅವಿವೇಕವೂ ಕಾರಣವೆಂದು ಎಲ್ಲರೂ ಹೇಳುತ್ತಿರು
. ಸದ್ಯದ ಸಮಯದಲ್ಲಿ ಶ್ರೀಮನ್ಮಹಾರಾಜರವರು ಹೊರತಾಗಿ ಇತರರು
ರಿಗೂ ಬೆಂಗಳೂರಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂದು ನಮಗೆ
ೀರುತ್ತದೆ. ಅಧಿಕಾರಿಗಳು ಮೈಮರೆತು ಕೋಪತಾಪದ ದಬ್ಬಾಳಿಕೆಯನ್ನು
ೀರಿಸಿದರೆ ಇನ್ನೂ ಘಾತಕವಾಗಬಹುದು. ಆದುದರಿಂದ ಶ್ರೀಮನ್ಮಹಾರಾಜ
ರೇ ಬೆಂಗಳೂರಿಗೆ ದಯಮಾಡಿಸಿ ಶಾಂತಿಸ್ಥಾಪನೆಯನ್ನು ಮಾಡಬೇಕೆಂಬ ಬಗ್ಗೆ
ವು ವಿನಯಪೂರ್ವಕವಾಗಿ ಮಹಾಸ್ವಾಮಿಯವರಿಗೆ ಈ ಕೇಗೆ ಕೊಟ್ಟಿರುವಂತೆ
ೀ ಮಹಾಂತರ ಪಿಜ್ಞಾಪಿಸಿಕೊಂಡಿರುತ್ತೇವೆ. ಶ್ರೀಮನ್ಮಹಾರಾಜರವರು
ಜೆಗಳ ಮೇಲೆ ಕೃಪೆಯಿಟ್ಟು ಶಾಂತಿಸ್ಥಾಪನೆಯನ್ನು ಮಾಡುವರೆಂದು ನಂಬಿರು
ವೆ.

Copy of the Telegram.

Due to official bungling and mismanagement an
rming situtation has arisen in Bangalore resulting in
al shooting. None but your Highness's personal pre-
ice can save the situtation and establish peace.

Loyally,
"TAI NADU"

ಅಧಿಕಾರಿಗಳ ಅಚಾತುರ್ಯವಾದ ನಡವಳಿಕೆಗಳಿಂದ ಬೆಂಗಳೂರಿನಲ್ಲಿ ಗುಂಡಿ
ಮಳೆ ಸುರಿದು ಅನೇಕರು ಹತರಾದರು. ಶ್ರೀಮನ್ಮಹಾರಾಜರವರೇ ಖುದ್ದಾಗಿ
ಗಳೂರಿಗೆ ದಯಮಾಡಿಸಿದ ಹೊರತು ಶಾಂತಿಸ್ಥಾಪನೆಯಾಗುವುದು ಕಷ್ಟ.

7-28 ಮ|| 3 ಗಂಟೆ 'ತಾಯಿನಾಡು'

LATE NEWS

30-7-28 ನೇ ಮಧ್ಯಾಹ್ನ 3 ಗಂಟೆಗೆ ಶ್ರೀ ಭೀಮರಾವ್, ಸುಬ್ರಹ್ಮಣ್ಯಂ,
ಮಲಾಲರವರು ಬಿಡುಗಡೆಯಾಗಿ ಅವರು ಮೆರವಣಿಗೆಯೊಡನೆ ಸ್ಕೂಲಿಗೆ ಬಂ
. ಗಣಪತಿಗೆ ಮಂಗಳಾರತಿ ಆಗುತ್ತಿರುವಾಗ್ಗೆ ಒಂದು ಜೋಡು ಬಂದು
ತ್ತು. ಪುಂಡರು ದೊಣ್ಣೆ ಮೊದಲಾದವುಗಳನ್ನು ತಂದು ಹೊಡೆದು,
ಅಬ್ಬಾಸ್ ಖಾನರ ಮನೆಯಮೇಲಿನಿಂದ ಗುಂಡಿನಮಳೆ ಸುರಿದು, ಅನೇಕರು
ರಾದರು. ಬೆಂಗಳೂರೆಲ್ಲಾ ಅಲ್ಲೋಲಕಲ್ಲೋಲವಾಗಿದೆ.

ಅನುಬಂಧ ೨

ಛಾಯಾಚಿತ್ರಗಳು

ಛಾಯಾಚಿತ್ರಗಳು



ಸುಲ್ತಾನ್ ಪೇಟೆಯ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ ಒಂದು ನೋಟ



ಇಂದಿಗೂ ಸರ್ಕಾರಿ ಮಾದರಿ ಪ್ರಾಥಮಿಕ "ಗಣೇಶ ಪಾಠಶಾಲೆ" ಎಂದೇ
ಕರೆಯಲಾಗುತ್ತಿರುವ ಸುಲ್ತಾನ್ ಪೇಟೆಯ ಶಾಲಾ ನಾಮಫಲಕ



ಆ ಹೊತ್ತಿನ ಸುಲ್ತಾನ್ ಪೇಟೆಯ ಹಳೆಯ ವಿವಾದಗ್ರಸ್ತ ಶಾಲಾಕಟ್ಟಡ
(ಮೆಟ್ರೊ ದೆಸೆಯಿಂದ ಇತ್ತೀಚೆಗೆ ನೆಲಸಮವಾಗಿದೆ)



ಅಬ್ಬಾಸ್‌ಖಾನ್ ಅವರ ಮನೆ ಬಳಿ ಇದ್ದ ಉರ್ದು ಮಾದರಿ ಪ್ರಾಥಮಿಕ ಶಾಲೆಯ ಒಂದು ನೋಟ



ಹಿಂದಿನ ವಿವಾದಗ್ರಸ್ತ ಗಣಪತಿಯ ಗೂಡು ಇಂದು ದೇವಾಲಯವಾಗಿ ಬದಲಾವಣೆ
ಹೊಂದಿರುವ ನೋಟ (ಶಾಲಾ ಕಾಂಪೌಂಡಿನಲ್ಲಿರುವ ದೇವಾಲಯ)



ದೇವಾಲಯ ಗೋಪುರವನ್ನೊಳಗೊಂಡ ಇನ್ನೊಂದು ಚಿತ್ರ



ಗಣಪತಿಯ ದೇವಾಲಯಕ್ಕೆ ಎದುರಿಗೆ ಇರುವ ಮಸೀದಿ



ಸುಲ್ತಾನ್ ಪೇಟೆಯ ಕೋಮುಗಲಭೆಯ ವಿಚಾರಣೆಯನ್ನು ನಡೆಸಿದ್ದ (ಸರ್.ಎಂ.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ) ನೃಪತುಂಗ ರಸ್ತೆಯಲ್ಲಿ 'ಮಿಥಿಕ್ ಸೊಸೈಟಿ' ಯ ಕಟ್ಟಡ